
ಂದಮಾಮ


ಮಾರ್ಚ್ 1972

E. D. 2 PAISE






S. Balasubramanyam



ಬರಿ ಹಸಿವನ್ನು ಹೆಚ್ಚಿಸುವ ಟಾನಿಕ್ ಅರ್ಧವನ್ನಷ್ಟೆ ಸಾಧಿಸಿದಂತೆ



*ಇನ್‌ಕ್ರಿಮಿನ್ ಕೊಡಿರಿ...

ಹೆಚ್ಚಿಗೆ ಸೇವಿಸಿದ ಆಹಾರವನ್ನು ಅದು ಹೆಚ್ಚಿನ ಬೆಳವಣಿಗೆಗೆ ಮಾರ್ಪಡಿಸುತ್ತದೆ.



*ಇನ್‌ಕ್ರಿಮಿನ್ ಪಂಗಡವನ್ನು ಸೇರಿರಿ...

ಬೆಳೆಯುವುದಕ್ಕೊಂದು ಹಸಿವನ್ನು ಹೆಚ್ಚಿಸಿಕೊಳ್ಳಿರಿ!

ಇನ್‌ಕ್ರಿಮಿನ್ ಸಿರಪ್ (ಕಬ್ಬಿಣ ಯುಕ್ತ), ದೊಡ್ಡ ಮಕ್ಕಳಿಗಾಗಿ—175 ಮಿ.ಲಿ. ಮತ್ತು 57 ಮಿ.ಲಿ. ಶಿಶುಗಳಿಗಾಗಿ ಇನ್‌ಕ್ರಿಮಿನ್ ಡ್ರಾಪ್ಸ್—10 ಮಿ.ಲಿ.



*ಇನ್‌ಕ್ರಿಮಿನ್

ಟಾನಿಕ್

* ಅಮೇರಿಕನ್ ಸಯನಾಮಿಡ್ ಕಂಪೆನಿಯವರ ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

Lederle

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ದೊರೆಯುತ್ತದೆ

ಲಿಂಟಾಸ್-INC. 21-500 KN

Statement about ownership of CHANDAMAMA (Kannada)
Rule 8 (Form IV), Newspapers (Central) Rules, 1956

1. *Place of Publication*	:	'CHANDAMAMA BUILDINGS' 2 & 3, Arcot Road, Vadapalani, Madras-26
2. *Periodicity of Publication*	:	MONTHLY 1st of each calendar month
3. *Printer's Name*	:	B. V. REDDI
Nationality	:	INDIAN
Address	:	Prasad Process Pvt. Ltd., 2 & 3, Arcot Road, Vadapalani, Madras-26
4. *Publisher's Name*	:	B. VISWANATHA REDDI
Nationality	:	INDIAN
Address	:	Chandamama Publications, 2 & 3, Arcot Road, Vadapalani, Madras-26
5. *Editor's Name*	:	CHAKRAPANI (A. V. Subba Rao)
Nationality	:	INDIAN
Address	:	'Chandamama Buildings' 2 & 3, Arcot Road, Vadapalani, Madras-26
6. *Name & Address of individuals who own the paper*	:	Chandamama Publications PARTNERS: 1. Sri B. Nagi Reddi, 2. Smt. B. Padmavathi, 3. Smt. B. Bharathi, 4. Sri B. V. Sanjaya Reddi (Minor), 5. Sri B. N. Suresh Reddi (..). 6. Sri B. V. Satish Reddi (..).

I, B. Viswanatha Reddi, hereby declare that the particulars given above are true to the best of my knowledge and belief.

B. VISWANATHA REDDI
Signature of the Publisher

1st March 1972





ಚಂದಮಾಮ

ಸಂಸ್ಥಾಪಕರು : ನಾಗಿರೆಡ್ಡಿ
ಸಂಚಾಲಕರು : 'ಚಕ್ರಪಾಣಿ'

ಮಾನವರಿಗೆ ಜೀವನ ರಂಗದಲ್ಲಿ ಹೋರಾಟವು ಪ್ರಧಾನವಾಗಿರುವುದಾದರೆ ಬಲವಂತನಾದವನು ಜಯಿಸುತ್ತಾನೆ; ಬಲಹೀನನು ತಣ್ಣಗಾಗಿ ಹೋಗುತ್ತಾನೆ. ಆದರೆ ಜೀವನದಲ್ಲಿ ಪರಸ್ಪರ ಸಹಕಾರದ ಬುದ್ಧಿ ಪ್ರಧಾನವಾಗಿದ್ದ ಪಕ್ಷದಲ್ಲಿ ಸಾಮರ್ಥ್ಯವಿದ್ದವನು ಜಯಿಸುವುದು ಮಾತ್ರವಲ್ಲದೆ, ಅಸಮರ್ಥನಾದವನಿಗೂ ಉದಾರ ಬುದ್ಧಿಯಿಂದ ಸಹಕಾರ ಮಾಡುತ್ತಾನೆ. ಆಗ ಈರ್ಷ್ಯೆಗೆ ಅವಕಾಶವಿಲ್ಲದೆ ಜೀವಿತವು ಸುಗುಮವಾಗುತ್ತದೆ. "ಪರಸ್ಪರ ಸಹಾಯ"ವೆಂಬ ಬೇತಾಳ ಕಥೆಯಲ್ಲಿ ಇದನ್ನು ನೋಡಬಹುದು.

ಸಂಪುಟ: ೪೮] ಮಾರ್ಚ್ '೭೨ [ಸಂಚಿಕೆ ೩







ಅಮರವಾಣಿ

ಕೊಂಧೋ ಯೋ ಕಾರ್ಯರತಃ ಕೋಬಧಿರೋ
ಯಃ ಶೃಣೋತಿ ನಹಿತಾನಿ
ಕೋ ಮೂಕೋ ಯಃ ಕಾಲೇ ಪ್ರಿಯಾಣಿ
ವಕ್ತುಂ ನ ಜಾನಾತಿ


ಯಾವನು ಕುರುಡ?—ಕೆಟ್ಟಕೆಲಸ ಮಾಡುವವನೇ. ಯಾವನು ಕಿವುಡ?—ಹಿತವಚನ ಕೇಳ ದವನೇ. ಯಾವನು ಮೂಕ?—ಪ್ರಿಯ ವಾಕ್ಯ ಮಾತಾಡಲಾರದವನೇ.

ಕೋಧರ್ಮೋ ಭೂತದಯಾ
ಕಿಂ ಸೌಖ್ಯಮರೋಗಿತಾ ಜಗತಿ
ಕಃ ಸ್ನೇಹಃ ಸದ್ಭಾವಃ
ಕಿಂ ಪಾಂಡಿತ್ಯಂ ಪರಿಚ್ಛೇದಃ

ಯಾವುದು ಧರ್ಮ?—ಭೂತದಯೆಯೇ. ಯಾವುದು ಸೌಖ್ಯ?—ಆರೋಗ್ಯವಾಗಿರುವುದೇ. ಯಾವುದು ಸ್ನೇಹ?—ಒಳ್ಳೆಯ ಬುದ್ಧಿ. ಯಾವುದು ಪಾಂಡಿತ್ಯ?—ನಿರ್ಣಯಿಸಿಕೊಳ್ಳಬಲ್ಲದ್ದೇ.

ಕೃತಶತ ಮಸತ್ಸು ನಷ್ಟಂ
ಸುಭಾಷಿತ ಶತಂ ಚ ನಷ್ಟಮಬುಧೇಷು
ವಚನಶತಮವಚನಕರೇ
ಬುದ್ಧಿಶತಮಚೇತನೇ ನಷ್ಟಂ

ದುಷ್ಟರಿಗೆ ನೂರು ಸಹಾಯಗಳೂ ವ್ಯರ್ಥವೇ. ಬುದ್ಧಿ ಹೀನರಿಗೆ ನೂರು ನೀತಿಗಳೂ ವ್ಯರ್ಥವೇ. ಹೇಳಿದ ಮಾತು ಕೇಳದವರಿಗೆ ನೂರು ಬುದ್ಧಿಗಳೂ ವ್ಯರ್ಥವೆ.



ಮಹಾಜ್ಞಾನಿ

ಅನೇಕ ವರ್ಷಗಳ ಹಿಂದೆ ಒಂದು ಕುಗ್ರಾಮದಲ್ಲಿ ಒಬ್ಬ ಮನುಷ್ಯನಿದ್ದ ಅವನು ತಾನು ಮಹಾಜ್ಞಾನಿ ಎಂದು ಎಲ್ಲರೊಡನೆ ಹೇಳಿಕೊಳ್ಳುತ್ತಿದ್ದ. ಎಲ್ಲರೂ ಅವನ ಮಾತನ್ನು ನಂಬಿ ಏನಾದರೂ ಸಲಹೆಯೋ ಆಲೋಚನೆಯೋ ಅಭಿಪ್ರಾಯವೋ ಬೇಕಾದಾಗ ಅವನ ಹತ್ತಿರ ಬಂದು ಹೋಗುತ್ತಿದ್ದರು.

ಆ ಊರಿನಲ್ಲಿ ಒಂದು ಗಂಡಾಹೆಂಡಿರ ಜತೆಯೂ ಇದ್ದಿತು. ಅವರಿಬ್ಬರೂ ಒಬ್ಬರಿಗಿಂತ ಒಬ್ಬರು ಸೋಮಾರಿಗಳಾಗಿದ್ದರು. ದಿನಾ ಮಾರುದ್ದ ಹೊತ್ತೇರಿದ ಹೊರತು ನಿದ್ದೆ ಬಿಟ್ಟೇಳುವವರಲ್ಲ.

ಒಂದುದಿನ ಯಾರೋ ಅವರ ಹತ್ತಿರ, "ಕೋಳೀ ಜಾತಿಯಲ್ಲಿ ಹುಂಜ ಅಂತ ಒಂದು ಪಕ್ಷಿಯಿದೆ. ಅದನ್ನು ತಂದು ಮನೆಯಲ್ಲಿಟ್ಟರೆ ಅದು ಬೆಳಗು ಮುಂಜಾನೆಯೇ ಕೂಗಿ ನಿಮ್ಮನ್ನು ಎಬ್ಬಿಸಿಬಿಡುತ್ತದೆ. ನೀವು ಕಾಲದಲ್ಲಿ ಎಲ್ಲಾ ಕೆಲಸಗಳನ್ನೂ ಮಾಡಿಬಿಡಬಹುದು" ಎಂದು ಸಲಹೆ ಮಾಡಿದರು.

ಹಾಗೆಯೇ ಮಾಡೋಣವೆಂದು ಆ ಗಂಡಹೆಂಡಿರು ಸಮೀಪದ ಊರಿನಲ್ಲಿ ನಡೆಯುವ ಸಂತೆಗೆ ಹೋಗಿ ಅಲ್ಲಿರುವ ಪಕ್ಷಿಗಳಲ್ಲಿ ಚೆನ್ನಾಗಿ ಬಲಿತ ಒಂದು ಬಾತು ಕೋಳಿಯನ್ನು ಕೊಂಡುಕೊಂಡು ಬಂದರು. ಆ ದಿನ ರಾತ್ರಿ ಅವರು ತಮ್ಮ ಮಂಚದ ಬುಡದಲ್ಲಿ ಬಾತು ಕೋಳಿಯನ್ನಿಟ್ಟು ಮಲಗಿದರು. ಬೆಳಗಾಗುವುದರೊಳಗೆ ಅದೇ ತಮ್ಮನ್ನು ಎಬ್ಬಿಸುವುದೆಂದು ನಿಶ್ಚಿಂತೆಯಿಂದ ಸುಖನಿದ್ದೆ ಮಾಡಿದರು.

ಮರುದಿನ ಅವರು ಏಳುವಾಗ ಮಧ್ಯಾಹ್ನವಾಗಿತ್ತು. ಮಂಚದ ಕೆಳಗೆ ಬಾತು ಕೋಳಿ ಹಾಗೇ ಇತ್ತು. ಅದೇನೂ ಕೂಗಿರಲಿಲ್ಲ. ಅದು ಯಾಕೆ ಕೂಗಲಿಲ್ಲವೆಂದು ಎಷ್ಟು ಆಲೋಚನೆ ಮಾಡಿದರೂ ಅವರಿಗೆ ಗೊತ್ತಾಗಲಿಲ್ಲ. ಮಹಾಜ್ಞಾನಿಯನ್ನು ಕೇಳಿ ತಿಳಿದುಕೊಳ್ಳೋಣವೆಂದುಕೊಂಡು, ಅವನ ಬಳಿಗೆ ಹೋಗಿ ನಡೆದ ಸಂಗತಿ ಹೇಳಿದರು.

ಜ್ಞಾನಿ ಆ ಬಾತು ಕೋಳಿಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಪರೀಕ್ಷಿಸಿ ನೋಡಿ, "ಓಹೋ! ಇದು ಹೇಗೆ ಕೂಗೀತು? ಇದರ ಮೂಗಿನ ಮೇಲೆ ಕಾಲಿಟ್ಟು ಯಾರೋ ತುಳಿದು ಚಪ್ಪಟೆ ಮಾಡಿದ್ದಾರೆ! ನೋಡಿದಿರಾ?" ಎಂದ.

ಆ ದಂಪತಿಗಳು ಅವನ ಬುದ್ಧಿವಂತಿಕೆಗೆ ಬೆರಗಾಗಿ, ಬಾತುಕೋಳಿಯೊಂದಿಗೆ ಹಿಂದಿರುಗಿದರು. ಮತ್ತೆ

ಎ. ಸಿ. ಶರ್ಮ

ಕೆಲವು ದಿನಗಳ ಮೇಲೆ ಆ ದಂಪತಿಗಳು ಬೆಳೆಸುತ್ತಿದ್ದ ಮೇಕೆ ಕಟ್ಟುಬಿಚ್ಚಿಕೊಂಡು ಆವರಣದೊಳಗೆಲ್ಲ ತಿರುಗಾಡುತ್ತ, ಒಂದು ಗಡಿಗೆಯಲ್ಲಿ ಸ್ವಲ್ಪ ಕಾಳು ಇರುವುದನ್ನು ನೋಡಿ ಅದರೊಳಗೆ ತಲೆ ತೂರಿತು. ಕಾಳು ತಿಂದ ಮೇಲೆ ಮೇಕೆ ತಲೆ ತೆಗೆಯಲು ನೋಡಿದಾಗ ಕೊಂಬುಗಳು ತಡೆಯಾದುವು. ಅದು ಆ ಗಡಿಗೆಯನ್ನು ತಲೆಗೆ ಹಾಕಿಕೊಂಡು ಹುಚ್ಚು ಹಿಡಿದ ಹಾಗೆ ಅತ್ತಿತ್ತ ಓಡಾಡುತ್ತಿದ್ದಿತು. ಅದನ್ನು ನೋಡಿ ಆ ದಂಪತಿಗಳು ಒಬ್ಬರು ಗಡಿಗೆಯನ್ನೂ ಇನ್ನೊಬ್ಬರು ಮೇಕೆಯ ಬಾಲವನ್ನೂ ಹಿಡಿದೆಳೆದರು. ಅದರಿಂದ ಏನೂ ಪ್ರಯೋಜನವಾಗಲಿಲ್ಲ.

ಇದಕ್ಕೆ ಜ್ಞಾನಿಯೇ ಸರಿಯೆಂದು, ಆ ಜ್ಞಾನಿಗೆ ಸುದ್ದಿ ಕಳುಹಿಸಿ, ಅವನನ್ನು ಬರಮಾಡಿಕೊಂಡರು. ಜ್ಞಾನಿ ಬಂದು ಮೇಕೆಯನ್ನು ನೋಡಿ ಬಹಳ ಗಂಭೀರವಾಗಿ ಆಲೋಚನೆ ಮಾಡಿ ಮೇಕೆಯನ್ನೂ ಗಡಿಗೆಯನ್ನೂ ಬೇರೆಬೇರೆ ಮಾಡಬೇಕಾದರೆ ಮೇಕೆಯ ತಲೆಯನ್ನು ಕಡಿದುಬಿಡಬೇಕು " ಎಂದನು.

"ಆಹ! ಎಂತಹ ಬುದ್ಧಿವಂತಿಕೆಯ ಆಲೋಚನೆ!" ಎಂದು ಗಂಡಹೆಂಡಿರಿಬ್ಬರೂ ಮೆಚ್ಚಿಕೊಂಡರು. ಅವರು ಬೇಟೆಗತ್ತಿಯ ಒಂದೇ ಏಟಿಗೆ ಮೇಕೆಯ ಕುತ್ತಿಗೆ ಕಡಿದುಬಿಟ್ಟರು. ಅದರ ರುಂಡ ಮುಂಡಗಳು ಬೇರೆಬೇರೆಯಾದುವು.

"ಆದರೆ ಸ್ವಾಮೀ, ಗಡಿಗೆಯೊಳಗೆ ಮೇಕೆಯ ತ ಹಾಗೇ ಇದೆಯಲ್ಲಾ? ಅದನ್ನು ತೆಗೆಯಲು ಏ ಮಾಡುವ?" ಎಂದು ಕೇಳಿದರು.

"ಅದಕ್ಕೇನು? ಗಡಿಗೆಯನ್ನು ಒಡೆದುಬಿಟ್ಟ ತಲೆ ಬಂದುಬಿಡುತ್ತೆ" ಎಂದ ಜ್ಞಾನಿ. ಅದು ದೊ ಆಲೋಚನೆಯೇ ಸರಿ. ಅವರು ಗಡಿಗೆಯನ್ನು ಎ ಹಾಕಲು ಅದು ನುಚ್ಚುನೂರಾಯಿತು. ಮೇಕೆಯ ತಲೆಯೂ ಪ್ರತ್ಯೇಕವಾಯಿತು.


"ನೀವು ಈ ದಿನ ಬಹಳ ಉಪಕಾರ ಮಾಡಿದಿ ನಮ್ಮ ಮನೆಯಲ್ಲಿ ಊಟ ಮಾಡಿಕೊಂಡೇ ಹೋಗ ಬೇಕು" ಎಂದರು ದಂಪತಿಗಳು.

ಜ್ಞಾನಿ ಊಟಕ್ಕೆ ನಿಂತನು. ಊಟ ಮಾಡುವಾಗ ಅವನು ಮಧ್ಯದಲ್ಲಿ ತಲೆಯೆತ್ತಿ ನೋಡಿ, ಏನೋ ವಿಚಾರದಿಂದ ನಿಟ್ಟುಸಿರುಬಿಟ್ಟು, "ಹುಂ" ಎಂದನು.

"ಏನಾಯಿತು ಸ್ವಾಮೀ?" ಎಂದು ದಂಪತಿಗಳು ಆತುರದಿಂದ ಕೇಳಿದರು.

"ನಾನು ತೀರಿಹೋಗಿಬಿಟ್ಟರೆ ನಿಮ್ಮಂಥಾ ಪಾ ದವರ ಗತಿ ಏನಾಗುವುದೋ ಅಂತ ಆಲೋಚಿಸುತ್ತಿದ್ದೇನೆ!" ಎಂದ ಜ್ಞಾನಿ.

ಅವನು ಸುಮ್ಮನೆ ಚಿಂತಿಸುತ್ತಾನೆ. ಅವನಂತಹ ಜ್ಞಾನಿಗಳು ಅನೇಕರಿದ್ದಾರೆ ಪ್ರಪಂಚದಲ್ಲಿ. ಅದು ತಿಳಿಯದೆ ದಂಪತಿಗಳೂ ಚಿಂತಿಸಿದರು.





ಬಂಗಾರದ ಬಾತುಮೊಟ್ಟೆ

ಹಿಂದೆ ಒಂದಾನೊಂದು ನಗರದಲ್ಲಿ ರಾಮನೆಂಬ ಬಡವನಾದ ಯುವಕನಿದ್ದ. ಅವನಿಗೆ ತನ್ನವರೆನ್ನಲು ಯಾರೂ ಇರಲಿಲ್ಲ. ಒಂದು ಚಿಕ್ಕ ಗುಡಿಸಲು ಮನೆ ಮತ್ತು ಒಂದು ಹೇಂಟೆ ಇವಿಷ್ಟೇ ಅವನಿಗಿರುವ ಸಂಪತ್ತು. ಆದುದರಿಂದ ರಾಮನು ಹಗಲಿಡೀ ನಗರದಲ್ಲಿ ಬಗೆಬಗೆಯ ಕೂಲಿ ಕೆಲಸ ಮಾಡಿ ಸಿಕ್ಕಿದ ದುಡ್ಡಿನಿಂದ ತನ್ನ ಹೊಟ್ಟೆ ಹೊರೆದುಕೊಳ್ಳುವನು. ಒಂದೊಂದುದಿನ ಏನೂ ಕೆಲಸ ದೊರೆಯದೆ ಸಂಪಾದನೆ ಇಲ್ಲದೆ ಹೋದಾಗ ತನ್ನ ಹೇಂಟೆ ಇಟ್ಟ ಮೊಟ್ಟೆಗಳನ್ನು ಬೇಯಿಸಿ ತಿಂದು ನೀರು ಕುಡಿದು ತೃಪ್ತಿಯಾಗಿ ಮಲಗುವನು.

ರಾಮನ ಮನೆಯ ನೆರೆಯಲ್ಲಿಯೇ ಗೌರವಪ್ಪನೆಂಬ ದೊಡ್ಡ ಮನುಷ್ಯನೊಬ್ಬನಿದ್ದ. ಹೆಸರಿಗೆ ಮಾತ್ರ ದೊಡ್ಡವನೇ ಹೊರತು ದುರಾಶೆ ತುಂಬಿದವನು: ಅದರ ಮೇಲೆ ಇನ್ನೊಬ್ಬರು ಹಸಿರಾಗಿರುವುದನ್ನು ನೋಡಿದರೆ ಸಹಿಸದೆ ಉರಿಕಾರುವವನು. ರಾಮನು ಚಿಕ್ಕಾಸಿಗೆ ಗತಿಯಿಲ್ಲದವನಾದರೂ ಇದ್ದದ್ದು ತಿಂದು ಸಂತೋಷವಾಗಿರುವುದನ್ನು ನೋಡಿ ಅವನು ತನ್ನೊಳಗೇ ಕುದಿಯುತ್ತಿದ್ದನು. ಬಲಿತು ಧಷ್ಟಪುಷ್ಟವಾಗಿರುವ ಅವನ ಹೇಂಟೆ ಕೋಳಿಯನ್ನು ನೋಡಿ ಕೂಡಾ ಗೌರವಪ್ಪನಿಗೆ ಅಸೂಯೆಯಾಗುತಿತ್ತು.


ಒಂದುದಿನ ರಾಮನು ಮನೆಯಲ್ಲಿಲ್ಲದ ಸಮಯದಲ್ಲಿ ಗೌರವಪ್ಪ ಆ ಕೋಳಿಯನ್ನು ಹಿಡಿದು ಕೊಯ್ದು ಬೇಯಿಸಿ ತಿಂದು ತೀರಿಸಿಬಿಟ್ಟ. ರಾಮ ಮನೆಗೆ ಬಂದು ನೋಡಿದಾಗ ಕೋಳಿ ಕಾಣಿಸಲಿಲ್ಲ. ಆದರೆ ಅದರ ಗರಿಗಳು ನೆರೆಮನೆಯ ಆವರಣದಲ್ಲಿದ್ದುವು.

ರಾಮನು ಗೌರವಪ್ಪನ ಬಳಿಗೆ ಹೋಗಿ, "ನನ್ನ ಕೋಳಿಯನ್ನು ಏನುಮಾಡಿದಿರಿ ?" ಎಂದು ಕೇಳಿದ.

"ನನಗೇನು ಗೊತ್ತು ? ನಮ್ಮ ಬೆಕ್ಕು ಎಲ್ಲಿಂದಲೋ ಒಂದು ಕೋಳಿಯನ್ನು ತಂದು ತಿನ್ನಲು ನೋಡುತಿತ್ತು. ನಾನು ಆ ಕೋಳಿಯನ್ನು ಕಾಪಾಡೋಣ ಅಂತ ಮಾಡಿದೆ. ಅಷ್ಟರಲ್ಲೇ ಅದು ಸತ್ತುಹೋಗಿಬಿಟ್ಟಿತ್ತು. ಇನ್ನೇನು ಮಾಡುವುದು ಅಂತ ಅದನ್ನು ಅಡಿಗೆ ಮಾಡಿಸಿ ತಿಂದೆ. ಆ ಕೋಳಿ ನಿನ್ನದೆಂದು ನನಗೇನು ಗೊತ್ತು ?" ಎಂದ ಗೌರವಪ್ಪ.

ರಾಮನಿಗೆ ಬಹಳ ಸಿಟ್ಟು ಬಂತು. "ಅದೆಲ್ಲಾ ನಾನು ನಂಬೋದಿಲ್ಲ. ಕೋಳಿ ನನಗೆ ಸಿಗಲೇಬೇಕು. ಮರ್ಯಾದೆಯಿಂದ ನನ್ನ ಕೋಳಿಯನ್ನು ಕೊಡು

ಕೆ. ಸದಾಶಿವರಾವ್



ವಿರಾ? ಮಹಾರಾಜರ ಹತ್ತಿರ ಫಿರ್ಯಾದು ಮಾಡಲಾ?" ಎಂದು ಗೌರವಪ್ಪನನ್ನು ಕೇಳಿದ.

ಗೌರವಪ್ಪನಿಗೆ ಜುಲುಮಾನೆಯೋ ಜೈಲು ಶಿಕ್ಷೆಯೋ ಆಗದೆ ಹೋಗದು. ಆಮೇಲೆ ಅವನ ಗೌರವವೇನಾಗಬೇಕು? ಇದನ್ನೆಲ್ಲಾ ಯೋಚಿಸಿ ರಾಮನೊಂದಿಗೆ ರಾಜಿಯಾಗಿರುವುದೇ ಒಳ್ಳೆಯದೆಂದುಕೊಂಡು ಗೌರವಪ್ಪ, ರಾಮನ ಮುಂದೆ ಒಂದು ಬಾತುಕೋಳಿಯ ಮರಿಯನ್ನು ಇಟ್ಟು, "ನಿನ್ನ ಕೋಳಿಗೆ ಬದಲಾಗಿ ಇದನ್ನು ತೆಗೆದುಕೊಂಡು ಹೋಗಪ್ಪ. ಸುಮ್ಮನೆ ಈ ಸಣ್ಣ ವಿಷಯಕ್ಕೆ ಕೋಪ ಬೇಡ" ಎಂದನು.

ಬಂಗಾರದಂತಹ ತನ್ನ ಹೇಂಟೆ ಹೋದರೂ, ಮರಿ ಬಾತು ಕೋಳಿಯಾದರೂ ಸಿಕ್ಕಿದುದಕ್ಕೆ ರಾಮನು ಅಷ್ಟಕ್ಕೇ ಸುಮ್ಮನಾದನು.

ಆಮೇಲೆ ಬಾತುಮರಿ ಬೆಳೆದು ದೊಡ್ಡದಾದಾಗ ಮೊಟ್ಟೆ ಇಡತೊಡಗಿತು. ಅಷ್ಟರಲ್ಲಿ ಮಳೆಗಾಲ ಪ್ರಾರಂಭವಾಗಿತ್ತು. ಒಂದುದಿನ ರಾತ್ರಿ ಜಡಿ ಮಳೆ ಸುರಿಯುತ್ತಿರುವಾಗ ಒಬ್ಬ ಫಕೀರನು ಬಂದು ಗೌರವಪ್ಪನ ಮನೆಯ ಬಾಗಿಲನ್ನು ತಟ್ಟಿದನು.


"ಯಾರಯ್ಯಾ ಅದು? ಹೊತ್ತು ಗೊತ್ತೂ ಇಲ್ಲದೆ ಬಾಗಿಲು ತಟ್ಟುವುದು? ಈ ಮಳೆಯಲ್ಲಿ ಯಾರು ನಿನಗೆ ಬಾಗಿಲು ತೆರೆಯುತ್ತಾರೆ? ನಡಿನಡಿ. ಇದೇನೂ ಸತ್ರವಲ್ಲ" ಎಂದು ಗೌರವಪ್ಪ ಕಿಟಿಕಿಯಿಂದಲೇ ಫಕೀರನಿಗೆ ಗದರಿಸಿ, ಹಾಸಿಗೆಯ ಮುಸುಗಿನೊಳಗೆ ಸೇರಿಕೊಂಡನು.

ಫಕೀರನು ಬಂದು ರಾಮನ ಮನೆಯ ಬಾಗಿಲನ್ನು ತಟ್ಟಿದನು. ರಾಮನು ಬಾಗಿಲು ತೆರೆದು, ಒದ್ದೆಮುದ್ದೆಯಾಗಿ ನಡುಗುತ್ತಿರುವ ಫಕೀರನನ್ನು ನೋಡಿ, ಒಳಗೆ ಕರೆದೊಯ್ದು, ಅವನಿಗೆ ಒಣ ಬಟ್ಟೆಕೊಟ್ಟು, ಚಳಿ ಕಾಯಿಸಿಕೊಳ್ಳಲು ತರಗೆಲೆಯನ್ನು ಉರಿಸಿ ಬೆಂಕಿ ಮಾಡಿದನು. ಆ ಬೆಂಕಿಯಲ್ಲಿಯೇ ಎರಡು ಬಾತು ಮೊಟ್ಟೆಗಳನ್ನು ಬೇಯಿಸಿ ತಟ್ಟೆಯಲ್ಲಿಟ್ಟು ಫಕೀರನಿಗೆ ತಿನ್ನಲು ಕೊಟ್ಟನು.

"ಬಾತು ಮೊಟ್ಟೆ ಬಹಳ ರುಚಿಯಾಗಿದೆಯಪ್ಪಾ. ಎಲ್ಲಿದೆ ನಿನ್ನ ಬಾತುಕೋಳಿ?" ಎಂದು ಫಕೀರನು ರಾಮನನ್ನು ಕೇಳಿದನು. ರಾಮನು ಬುಟ್ಟಿಯ ಮುಚ್ಚಳವನ್ನು ತೆರೆದು ಬಾತುಕೋಳಿಯನ್ನು ಫಕೀರನಿಗೆ ತೋರಿಸಿದನು.

"ದೇವರು ನಿನಗೆ ಒಳ್ಳೇದು ಮಾಡುವನಪ್ಪಾ!" ಎನ್ನುತ್ತಾ ಫಕೀರನು ಬಾತುಕೋಳಿಯನ್ನು ನೀವಿ ರಾಮನಿಗೆ ತಿರುಗಿಕೊಟ್ಟನು. ಆಗ ಮಳೆಯೂ ನಿಂತುಹೋದುದರಿಂದ ಫಕೀರನು ಆ ಕತ್ತಲೆಯಲ್ಲೇ ಹೊರಟುಹೋದನು.

ಮರುದಿನದಿಂದ ಆ ಬಾತುಕೋಳಿ ಎಂದಿನಂತಹ ಮೊಟ್ಟೆಯಿಡುವುದರ ಬದಲು ಬಂಗಾರದ ಮೊಟ್ಟೆಗಳನ್ನು ಇಡತೊಡಗಿತು. ಅದರಿಂದಾಗಿ ರಾಮನ ದಾರಿದ್ರ್ಯವು ತೀರಿಹೋಯಿತು. ಅವನು ಕೂಲಿ



ಕೆಲಸಕ್ಕೆ ಹೋಗುವುದನ್ನು ಬಿಟ್ಟುಬಿಟ್ಟನು. ಬಂಗಾರದ ಬಾತು ಮೊಟ್ಟೆಗಳ ಆದಾಯದಿಂದ ತಾನೂ ಹೊಟ್ಟೆ ತುಂಬ ತಿಂದು, ಉಳಿದುದನ್ನು ದಾನಧರ್ಮ ಮಾಡಿಬಿಡುತ್ತಿದ್ದನು. ಆದರೆ ಅವನು ಆ ಗುಡಿಸಲು ಮನೆಯನ್ನು ಮಾತ್ರ ಬಿಡಲಿಲ್ಲ.

ರಾಮನ ಜೀವಿತದಲ್ಲಿ ಏನೋ ಒಂದು ಬದಲಾವಣೆಯಾದಂತೆ ಗೌರವಪ್ಪನಿಗೆ ತೋರತೊಡಗಿತು. ಆದರೆ ಯಾವುದರಿಂದ ಹಾಗಾಯಿತೆಂಬುದು ಅವನಿಗೆ ಗೊತ್ತಾಗಲಿಲ್ಲ. ಆದುದರಿಂದ ಅವನು ರಾಮನ ಮೇಲೆ ಒಂದು ಕಣ್ಣು ಇಟ್ಟುಕೊಂಡೇ ಇದ್ದ.

ಒಂದುದಿನ ರಾಮನು ಬಾತುಕೋಳಿಯ ಬುಟ್ಟಿಯನ್ನೆತ್ತಿ ಬಂಗಾರದ ಮೊಟ್ಟೆ ತೆಗೆಯುವುದನ್ನು ಗೌರವಪ್ಪ ನೋಡಿದ. ಅವನ ಎದೆಯಲ್ಲಿ ಅಸೂಯೆಯ ಬೆಂಕಿ ಭಗ್ಗನೆ ಎದ್ದಿತು. ಅದು ತಾನು ಕೊಟ್ಟ ಬಾತುಕೋಳಿಯೇ ಎಂಬುದರಿಂದ ಅವನ ಹೊಟ್ಟೆಯುರಿ ಇನ್ನಷ್ಟು ಹೆಚ್ಚಾಯಿತು.

ತನ್ನ ಬಾತುಕೋಳಿ ತನಗೇ ಬೇಕು, ಕೊಡೆಂದರೆ ರಾಮನು ಕೊಡಲಾರ. ಅಂತೆಯೇ ಗೌರವಪ್ಪ ಇಬ್ಬರು ಸೇವಕರನ್ನು ಕರೆದುಕೊಂಡು ರಾಜನ ದರ್ಬಾರಿಗೆ ಹೋಗಿ, ನ್ಯಾಯ ವಿಚಾರಣೆ ನಡೆಯುವ ಸಮಯದಲ್ಲಿ–"ಮಹಾಪ್ರಭುಗಳೇ, ನನ್ನ ನೆರೆಮನೆಯಲ್ಲಿರುವ ರಾಮನೆಂಬವನು ಬಹಳ ಕಾಲದಿಂದ ನನ್ನ ಬಾತು ಕೋಳಿಗಳನ್ನು ಕದ್ದುಕೊಳ್ಳುತ್ತಾನೆ. ನನ್ನದು ಒಂದೊಂದೇ ಬಾತು ಕೋಳಿ ಕಾಣೆಯಾದರೆ, ಯಾವುದೋ ಕಂಟಬೆಕ್ಕು ಕೊಂಡೊಯ್ದು ಹೋಗಿರಬೇಕು ಎಂದುಕೊಳ್ಳುತ್ತಿದ್ದೆ. ಆದರೆ ನಿನ್ನೆ ರಾತ್ರಿ ಈ ರಾಮ ನನ್ನ ಬಾತು ಕೋಳಿ ಕದಿಯುವಾಗ ಇವರಿಬ್ಬರೂ ನೋಡಿದ್ದಾರೆ. ಮಹಾಪ್ರಭುಗಳು ವಿಚಾರಣೆ ಮಾಡಿ ನನ್ನ ಬಾತು ಕೋಳಿಯನ್ನು ನನಗೆ ಕೊಡಿಸಬೇಕು" ಎಂದನು. ಅವನ ಮಾತನ್ನು ಕೇಳಿ ರಾಜನು ತನ್ನ ಭಟರನ್ನು ಕಳುಹಿಸಿ ರಾಮನನ್ನು ಬಾತು ಕೋಳಿಯೊಂದಿಗೆ ಸಭೆಗೆ ಕರೆಯಿಸಿದನು.

"ಏನೋ ರಾಮಾ, ನೀನು ನಿನ್ನೆ ರಾತ್ರಿ ಇವನ ಬಾತು ಕೋಳಿಯನ್ನು ಕದ್ದೆಯಂತೆ? ನಿಜವೆ?" ಎಂದು ರಾಜನು ರಾಮನನ್ನು ಕೇಳಿದನು.

ಗೌರವಪ್ಪನಿಗೆ ಬಾತುಕೋಳಿಯ ರಹಸ್ಯ ತಿಳಿದಿರಬೇಕೆಂದೂ, ಅದಕ್ಕೇ ಅವನು ತನ್ನ ಮೇಲೆ ಸುಮ್ಮನಾದರೂ ಕಳ್ಳತನವನ್ನು ಹಾಕುತ್ತಿದ್ದಾನೆಂದೂ ರಾಮನಿಗೆ ಅರ್ಥವಾಯಿತು.

"ಪ್ರಭುಗಳೇ, ನಾನು ಕಳ್ಳತನ ಮಾಡಲಿಲ್ಲ. ಇದು ಇವರ ಬಾತು ಕೋಳಿ ನಿಜವೇ. ಆದರೆ ಹಿಂದೆ ಇವರು ನನ್ನ ಕೋಳಿಯನ್ನು ಕದ್ದು ತಿಂದು, ಅದಕ್ಕೆ ಬದಲಾಗಿ ಈ ಬಾತು ಕೋಳಿಯನ್ನು ನನಗೆ ಕೊಟ್ಟರು" ಎಂದ ರಾಮ.

"ಸುಳ್ಳು. ಈ ಮನುಷ್ಯ ಕಳ್ಳತನ ಮಾಡುವಾಗ ನೋಡಿದ ಈ ಇಬ್ಬರು ಸಾಕ್ಷಿಗಳೂ ಇದ್ದಾರೆ. ಅವನು ಹೇಳುವುದಕ್ಕೆ ಸಾಕ್ಷಿಗಳಾರು?" ಎಂದ ಗೌರವಪ್ಪ.

ರಾಜನು ಅವರಿಬ್ಬರನ್ನೂ ಕುರಿತು, "ಈ ಬಾತು ಕೋಳಿಯನ್ನು ಸದ್ಯ ನನ್ನ ಬಳಿಯಲ್ಲಿಟ್ಟು ಹೋಗಿ ನಾಳೆ ನೀವಿಬ್ಬರೂ ಬನ್ನಿ. ನಾಳೆ ತೀರ್ಪು ಹೇಳುತ್ತೇನೆ" ಎಂದು ಹೇಳಿ ಇಬ್ಬರನ್ನೂ ಕಳುಹಿಸಿಬಿಟ್ಟನು.

ಆ ದಿನ ಕೂಡಾ ಆ ಬಾತು ಕೋಳಿ ರಾಜನ ಬಳಿಯಲ್ಲಿ ಬಂಗಾರದ ಮೊಟ್ಟೆ ಇಟ್ಟಿತು. ಅದನ್ನು ನೋಡಿ ರಾಜನಿಗೆ ತನ್ನ ಕಣ್ಣುಗಳ ಮೇಲೆಯೇ ಅಪನಂಬುಗೆ ಮೂಡಿತು. ಈ ರಹಸ್ಯವು ಫಿರ್ಯಾದಿಗಳು ಇಬ್ಬರಿಗೂ ತಿಳಿದಿರಬೇಕು. ಅವರಿಂದಲೇ ನಿಜಸಂಗತಿಯನ್ನು ಹೊರಡಿಸಬೇಕು, ಎಂದುಕೊಂಡನು ರಾಜ.

ಮರುದಿನ ರಾಜನ ದರ್ಬಾರಿಗೆ ಗೌರವಪ್ಪನೂ, ರಾಮನೂ ಬಂದರು. ರಾಜನು ಗೌರವಪ್ಪನಿಗೆ, ಒಂದು ಸಾಧಾರಣ ಬಾತು ಮೊಟ್ಟೆಯನ್ನು ತೋರಿಸಿ "ನಿನ್ನ ಬಾತು ಕೋಳಿ ಈ ಗಾತ್ರದ ಮೊಟ್ಟೆ ಇಡುತ್ತದೆಯೆ?" ಎಂದು ಕೇಳಿದನು. "ಇದಕ್ಕಿಂತಲೂ ತುಸು ದೊಡ್ಡದೇ ಇಡುತ್ತದೆ ಮಹಾಪ್ರಭುಗಳೇ" ಎಂದ ಗೌರವಪ್ಪ. ರಾಜನು ಅದೇ ಪ್ರಶ್ನೆಯನ್ನು ರಾಮನಿಗೂ ಮಾಡಿದ. ಆಗ ರಾಮನು, "ನನ್ನ ಬಾತು ಕೋಳಿ ಸಾಧಾರಣ ಮೊಟ್ಟೆಗಳನ್ನು ಇಡುವುದಿಲ್ಲ ಪ್ರಭುಗಳೇ. ದಿನಕ್ಕೆ ಒಂದೊಂದು ಬಂಗಾರದ ಮೊಟ್ಟೆ ಇಡುತ್ತದೆ" ಎಂದನು.


ಕೂಡಲೇ ಗೌರವಪ್ಪ ಬುದ್ಧಿವಂತಿಕೆಯಿಂದ "ಎಂಥ ಸುಳ್ಳು! ಬಾತು ಕೋಳಿ ಎಲ್ಲಿಯಾದರೂ ಬಂಗಾರದ ಮೊಟ್ಟೆ ಇಡುತ್ತದೆಯೆ? ನಂಬುವರಾರು? ಅಸಲು ಅದು ಅವನ ಬಾತುಕೋಳಿಯೂ ಅಲ್ಲ ಪ್ರಭುಗಳೇ" ಎಂದನು.


"ನಿನ್ನ ಮಾತು ನಿಜ. ಅದು ನಿನ್ನದೇ ಬಾತು. ಅದನ್ನು ನೀನು ತೆಗೆದುಕೊಂಡು ಹೋಗು" ಎಂದು ರಾಜನು ಗೌರವಪ್ಪನಿಗೆ ಸಾಧಾರಣದ ಬಾತು ಕೋಳಿಯೊಂದನ್ನು ಕೊಟ್ಟು ಕಳುಹಿಸಿದನು.

ತನಗೆ ಅನ್ಯಾಯವಾದುದಕ್ಕೆ ರಾಮನು ವ್ಯಸನಪಡುವಾಗ ರಾಜನು "ಹೆದರಬೇಡಪ್ಪ. ನಿನ್ನ ಬಾತು ಕೋಳಿ ನನ್ನ ಹತ್ತಿರವೇ ಇದೆ. ಅದು ಬಂಗಾರದ ಮೊಟ್ಟೆ ಇಡಲು ಕಾರಣವೇನು?" ಎಂದು ಕೇಳಿದ.

ರಾಮನು ಫಕೀರನ ಸಂಗತಿಯನ್ನೆಲ್ಲಾ ರಾಜನಿಗೆ ಹೇಳಿದ. ರಾಜನು ಆಶ್ಚರ್ಯಪಟ್ಟು, ರಾಮನನ್ನು ಬಾತು ಕೋಳಿಯೊಂದಿಗೆ ತನ್ನ ಮನೆಯಲ್ಲೇ ಒಂದು ಕೆಲಸದಲ್ಲಿರಲು ಹೇಳಿದನು. ಅದನ್ನು ಕೇಳಿ ರಾಮನಿಗೆ ತೃಪ್ತಿಯಾಯಿತು.

ಗೌರವಪ್ಪ ತೆಗೆದುಕೊಂಡು ಹೋದ ಬಾತು ಕೋಳಿ ಸಾದಾ ಮೊಟ್ಟೆಯಿಡುವುದನ್ನೂ, ರಾಮ ಅರಮನೆ ಸೇರಿದುದನ್ನೂ ನೋಡಿ, ಗೌರವಪ್ಪ ಬುದ್ಧಿ ತಂದುಕೊಂಡನು.





ಶಿಲಾರಥ


೧೭

[ನಿತ್ಯಾನಂದರಾಜನು ತನ್ನ ನಗರಕ್ಕೆ ಓಡಿಹೋಗುತ್ತಲೇ ವಿಘ್ನೇಶ್ವರ ಪೂಜಾರಿ ಆಟವಿಕರ ಗುಂಪಿನೊಂದಿಗೆ ನಗರದ ಮೇಲೆ ಬಂದನು. ಅವನು ನಗರದ್ವಾರವನ್ನು ಒಡೆಯುವುದರೊಳಗೆ, ಖಡ್ಗವರ್ಮ ಜೀವದತ್ತರು ರಾಜನಿಗೂ ಮಂತ್ರಿಗೂ ಒಂದು ಉಪಾಯ ಹೇಳಿದರು. ಅದರಂತೆ ಮಂತ್ರಿ ನಗರದ ದ್ವಾರವನ್ನು ತೆಗೆದು, ವಿಘ್ನೇಶ್ವರ ಪೂಜಾರಿಯನ್ನು ಉದ್ಯಾನಕ್ಕೆ ತಿರುಗಿಸಿದನು.]

ನಗರದೊಳಗಿನ ಉದ್ಯಾನವನದ ಕಡೆಗೆ ಹೋಗುವ ದಾರಿಯ ಎರಡು ಬದಿಗಳಲ್ಲಿಯೂ ದಟ್ಟವಾದ ಕರ್ಪೂರಗಳು ಸಾಲುಸಾಲಾಗಿದ್ದುವು. ಎರಡು ಬದಿಗಳಲ್ಲಿಯೂ ಬೆಳೆದ ಆ ಮರಗಳ ಕೊಂಬೆಗಳು ಒಂದರೊಡನೊಂದು ಹೆಣೆದುಕೊಂಡು ಹರಡಿದ್ದುವು. ವಿಘ್ನೇಶ್ವರ ಪೂಜಾರಿ ರಕ್ಕಸಾನೆಯ ಮೇಲೆ ಆ ದಾರಿಯಲ್ಲಿ ಸ್ವಲ್ಪ ದೂರ ಹೋಗುವಷ್ಟರಲ್ಲಿ, ಮರಗಳ ಮೇಲುಭಾಗದಿಂದ ಯಾರೋ ಕೂಗಿ ಹೇಳಿದ ಧ್ವನಿಯೊಂದು ಕೇಳಿಸಿತು: "ವಿಘ್ನೇಶ್ವರ ಪೂಜಾರಿಯ ಮೇಲೆ ಪನ್ನೀರಿನ ಮಳೆಯನ್ನು ಸುರಿಸಿರಿ!"

ಆ ಮಾತು ನಿಂತ ಬೆನ್ನಿಗೇ ಮರಗಳ ಮೇಲಿನಿಂದ ವಿಘ್ನೇಶ್ವರ ಪೂಜಾರಿಯ ಮೇಲೆ ಕರ್ಪೂರ ತೈಲದ ಕಾರಂಜಿ ಸುರಿಯಿತು. ಅದರ ವಾಸನೆ ಮೂಗಿಗೆ ತಗಲಿದ ಕೂಡಲೇ ವಿಘ್ನೇಶ್ವರ ಪೂಜಾರಿ ಮಹಾ ಕೋಪದಿಂದ "ಯಾವನೋ ಅದು ಮರದ ಕೊಂಬೆಯಲ್ಲಿ! ಈ ಅವಮಾನಕ್ಕೆ ನಿಮ್ಮನ್ನೆಲ್ಲಾ ಹಿಡಿದು ಚಿತ್ರವಧೆ ಮಾಡಿಸಿಬಿಡುತ್ತೇನೆ" ಎಂದು ಅರಚಿದನು.

"ಆಗಿಹೋಯಿತು ತೈಲಸ್ನಾನ! ಬಟ್ಟೇ ತುಂಡಿನ ಜ್ವಾಲೆಗಳನ್ನು ಬೀಸಿರಿ" ಎಂಬ ಕೂಗು ಇನ್ನೊಂದು ಕಂಠದಿಂದ ಹೊರಟಿತು. ಮರುಕ್ಷಣದಲ್ಲಿ ಮರಗಳ



ಮೇಲಿನಿಂದ ಭಗಭಗ್ಗನೆ ಉರಿಯುವ ಬಟ್ಟೆಯ ತುಂಡುಗಳು ರಕ್ಕಸಾನೆಯ ಮೇಲೆಯೂ ಪೂಜಾರಿಯ ಮೇಲೆಯೂ ಬೀಳತೊಡಗಿದುವು. ನೋಡನೋಡು ತ್ತಿರಲು ಕರ್ಪೂರ ತೈಲದಿಂದ ತೊಯ್ದು ಹೋಗಿದ್ದ ರಕ್ಕಸಾನೆಯ ಮೇಲೆ ಅಲ್ಲಲ್ಲಿ ಬೆಂಕಿ ಹಿಡಿದು ಉರಿಯ ತೊಡಗಿತು. ವಿಘ್ನೇಶ್ವರ ಪೂಜಾರಿಯ ತಲೆಯ ಮೇಲೆಯೂ ಉರಿ ಹತ್ತಿಕೊಂಡಿತು.

"ಓ! ಓ! ಮೋಸ! ದ್ರೋಹ! ಮುಂದೆ ಬರ ಲಿರುವ ರಾಜನಿಗೇ ದ್ರೋಹ! ರಾಜದ್ರೋಹ! ಹಿಡಿಯಿರಿ, ಹೊಡೆಯಿರಿ! ಕೊಚ್ಚಿರಿ!" ಎಂದು ವಿಘ್ನೇಶ್ವರಪೂಜಾರಿ ಕುಲುಕುತ್ತ ಕಿರುಚುತ್ತ ತನ್ನ ಕಿರೀಟವನ್ನು ಕಿತ್ತು ದೂರ ಬಿಸುಟನು. ಅದೇ ಸಮಯದಲ್ಲಿ ಆನೆಯ ಶರೀರದೊಳಗಿನಿಂದ ಅನೇಕ ಕಂಠಸ್ವರಗಳು ಒಂದೇ ಗೋಳಾಟದ ರೂಪದಲ್ಲಿ ಹೊರಡತೊಡಗಿತು. ಅದರ ನಾಲ್ಕು ಕಾಲುಗಳೂ ನಾಲ್ಕು ಕಡೆಗಳಿಗೂ ಡಲು ಪ್ರಯತ್ನಿಸುವಂತೆ ತಡಬಡಿಸುತ್ತಿತ್ತು. ಅಡ್ಡಾದಿಡ್ಡ ಕುಂಟುವ ದೇ ಗಳಿಂದ ಕುಣಿಯತೊಡಗಿತು. ಮರಗಳ ಮೇಲಿನ ಉರಿಯುವ ಬಟ್ಟೆ ಚೂರುಗಳು ಇನ್ನೂ ಬೀಳುತ್ತಲೇ ಇದ್ದುವು. ಆನೆ ಬೆಂಕಿಯಾನೆಯಾಗುತ್ತಿತ್ತು.

"ನೋಡಿದಿಯಾ ಖಡ್ಗಾ, ನಾವು ಊಹಿ ಕೊಂಡಂತೆಯೇ ಆಯಿತು. ಇದು ನಿಜವಾದ ಆ ಯಲ್ಲ. ಯಾವನೋ ಬುದ್ಧಿಯುಳ್ಳ ಕಳ್ಳ ಕೊರವ ತಂತ್ರ. ಆನೆಯ ಆಕಾರವನ್ನು ಮಾಡಿ, ಅದರೊ ಮನುಷ್ಯರನ್ನು ಕೂರಿಸಿ, ಇಷ್ಟು ಕಾಲದಿಂದ ನಿ ನಂದ ರಾಜನನ್ನು ನಡುಗಿಸಿದ್ದು ಈಗ ಬಯಲಾ ಯಿತು" ಎಂದ ಜೀವದತ್ತ.

"ಅಕೋ ನೋಡು, ಆನೆಯ ಹೊಟ್ಟೆಯಿಂದಲೂ ಕಾಲುಗಳಿಂದಲೂ ಒಬ್ಬೊಬ್ಬ ಆಟವಿಕ ಮನು ಹೊರಗೆ ಬೀಳುತ್ತಿದ್ದಾನೆ. ಆನೆಯ ರೂಪ ಮಾ ಚುತ್ತಾ ಇದೆ. ಬೆಂಕಿಯಲ್ಲಿ ಉರಿದು ಸಾಯು ಮೊದಲೇ ವಿಘ್ನೇಶ್ವರ ಪೂಜಾರಿಯನ್ನು ಎತ್ತಿ ಹಾ ಬೇಕು" ಎನ್ನುತ್ತಾ ಖಡ್ಗವರ್ಮನು ಮರದ ಕೊಂ ಯಿಂದ ಉರುಳು ಹಗ್ಗವೊಂದನ್ನು ಸುಳಿಸಿ, ಅದ ಉರುಳು ವಿಘ್ನೇಶ್ವರಪೂಜಾರಿಯ ಸೊಂಟಕ್ಕೆ ಬೀಳು ಹಾಗೆ ಬಿಸುಟನು. ಮರುನಿಮಿಷ ಹಗ್ಗವನ್ನೆಳೆ ಆ ಪೂಜಾರಿಯನ್ನು ಮೇಲಕ್ಕೆಳೆದಾಗ, ಪೂಜಾ "ಹೋ" ಎಂದು ಕೂಗುತ್ತಾ, ಕೈಕಾಲುಗಳನ್ನು ಚಡಪಡಿಸಿಕೊಂಡು "ಅಯ್ಯೊ! ರಕ್ಷಿಸಿ! ರಕ್ಷಿ ಬೆಂಕಿಯಲ್ಲಿ ಸತ್ತೆ! ಸ್ವರ್ಗಕ್ಕೆ ಎಳೆಯುತ್ತಿದ್ದ ರಪ್ಪೋ!" ಎಂದು ಕೂಗಿದನು.

ವಿಘ್ನೇಶ್ವರಪೂಜಾರಿ ಮರದ ಮೇಲೆ ಸೇರಿ ಹೊತ್ತಿಗೇ ಉರಿಯುತ್ತಿರುವ ರಕ್ಕಸಾನೆ ನೆಲದ ಬಿದ್ದುಹೋಯಿತು. ಅದರ ಶರೀರದಿಂದ ಏನೇನೋ ಶಬ್ದಗಳು ಹೊರಡಲು, ಅದರೊಳಗಿನಿಂದ ಅನೇ ಮಂದಿ ಆಟವಿಕರು ಹುಚ್ಚಾಬಟ್ಟೆ ಕಿರಿಚಾಡು ಹೊರಗೆ ಬರತೊಡಗಿದರು. ಹಾಗೆ ಬಂದವರನ್ನ

ಆಗಲೇ ಅಲ್ಲಿಗೆ ಬಂದ ಸೇನಾನಾಯಕನು ತನ್ನ ಸೈನಿಕರನ್ನು ಬಳಸಿ ಹಿಡಿದೆಳೆಯಿಸಿ ಒಂದುಕಡೆ ಮಂದೆ ಕೂಡಿದನು. ಆಗ ಖಡ್ಗವರ್ಮನು ಪೂಜಾರಿಯನ್ನು ಆನೆಯ ಮೇಲಿನಿಂದ ಕೆಳಕ್ಕೆ ಇಳಿಸಿದನು. ಪೂಜಾರಿ ತನ್ನ ದೇಹದಲ್ಲಿ ಉರಿಯುತ್ತಿದ್ದ ಬೆಂಕಿಯನ್ನು ಆರಿಸಲೆಂದು ನೆಲದ ಮೇಲೆ ಹೊರಳಾಡಿದನು.

ಅಷ್ಟರಲ್ಲಿ ಖಡ್ಗವರ್ಮ ಜೀವದತ್ತರೂ ಮರದಿಂದಿಳಿದು ಬಂದು ಪೂಜಾರಿಯ ಮೇಲೆ ಮಣ್ಣು ಸುರಿದು ಬೆಂಕಿಯನ್ನು ನಂದಿಸಿದರು. ಖಡ್ಗವರ್ಮ ಅವನ ಭುಜ ಹಿಡಿದು ನಿಲ್ಲಿಸಿ, ಹಲ್ಲುಕಡಿಯುತ್ತ ಕತ್ತಿಯನ್ನು ಅವನ ಕಂಠಕ್ಕೆ ಗುರಿಯಿಟ್ಟು, "ಎಲೋ ಚಂಡಾಲಾ, ನಮ್ಮ ದಾರಿಗೆ ಅಡ್ಡ ಬಂದು, ನಮ್ಮನ್ನು ಮೋಸದಿಂದ ಬಂಧನದಲ್ಲಿಟ್ಟಿದ್ದಕ್ಕೆ, ಈಗಲೇ ನಿನ್ನ ತಲೆಯನ್ನು ಹಾರಿಸಿಬಿಡುತ್ತೇನೆ. ನರಳಿ ಸಾಯುವ ಕಷ್ಟ ಬೇಡ" ಎಂದನು.

ವಿಘ್ನೇಶ್ವರಪೂಜಾರಿ ಗಾಳಿಗಿಕ್ಕಿದ ತರಗೆಲೆಯಂತೆ ನಡುಗುತ್ತ—"ಮಹಾಪ್ರಭುಗಳೇ ! ಕೊಲ್ಲಬೇಡಿ, ನಿಮ್ಮ ದಮ್ಮಯ್ಯ ! ನಾನು ನಂಬಿದ ದೇವರೇ ನನ್ನ ಕನಸಿನಲ್ಲಿ ಬಂದು ನನ್ನಲ್ಲಿ ರಾಜ್ಯಕಾಂಕ್ಷೆಯನ್ನು ಕೆರಳಿಸಿದನು. ಈ ಮಾಯದ ಆನೆಯನ್ನು ಮಾಡಿದ ತಂತ್ರ [illegible] ನಾನಲ್ಲ. ಅದೆಲ್ಲವೂ ಸ್ವರ್ಣಾಚಾರಿಯ ಕೆಲಸ" ಎಂದನು.

ಜೀವದತ್ತನು ಖಡ್ಗವರ್ಮನ ಕೈಹಿಡಿದು, ಪೂಜಾರಿಯನ್ನು ನೋಡಿ, "ಎಲ್ಲಿದ್ದಾನೆ ಆ ಸ್ವರ್ಣಾಚಾರಿ ?" ಎಂದು ಕೇಳಿದ.


ಪೂಜಾರಿ ಶರೀರದ ಉರಿಯಿಂದ ನರಳುತ್ತ—"ಅವನು ಆನೆಯ ಕುಂಭಸ್ಥಳದೊಳಗೆ ಕೂತಿರುತ್ತಾನೆ. ಅಲ್ಲಿದ್ದು ಅವನು ಆನೆಯೊಳಗಿನ ಆಟವಿಕರ ಸಹಾಯದಿಂದ ಕೀಲುಗಳನ್ನು ತಿರುಗಿಸಿ ಆನೆಯನ್ನು ನಡೆಸುತ್ತಾನೆ. ಅವನಿನ್ನೂ ಹೊರಗೆ ಬರಲಿಲ್ಲವೆ ? ಒಳಗೇ ಬೆಂದು ಸತ್ತನೇನೋ ?" ಎನ್ನುತ್ತ ಉರಿಯುತ್ತಿರುವ ಆನೆಯನ್ನು ಪಿಳಪಿಳನೆ ನೋಡುತ್ತ "ಸ್ವರ್ಣಾಚಾರೀ, ಸ್ವರ್ಣಾಚಾರೀ" ಎಂದು ಅಳುದನಿಯಲ್ಲಿ ಕೂಗಿದನು.



ಪೂಜಾರಿಯ ಮಾತು ಕೇಳಿದ ಕೂಡಲೇ ಜೀವದತ್ತನು ಗಬಗಬನೆ ಹೋಗಿ ಉರಿಯುತ್ತಿರುವ ಆನೆಯ ತಲೆಯ ಮೇಲೆ ಸೈನಿಕರಿಂದ ನೀರು ಹೊಯ್ಯಿಸಿದನು. ಬೆಂಕಿ ಆರಿಹೋದ ಕೂಡಲೇ ಆನೆಯ ಸುಂಡಿಲ ಭಾಗವನ್ನು ಹಿಡಿದು ಮೇಲಕ್ಕೆ ಎತ್ತಿಸಿದನು. ಆಗ ಅದರೊಳಗಿನಿಂದ ಒಬ್ಬ ಮನುಷ್ಯ ಕಲ್ಲಿನ ಹಾಗೆ ಧಢಾಲ್ಲನೆ ಕೆಳಗೆಬಿದ್ದ. ಅವನಲ್ಲಿ ಚಲನವಿದ್ದ ಸೂಚನೆ ಒಂದಿಷ್ಟೂ ಇರಲಿಲ್ಲ.

"ಇವನೇ ಸ್ವರ್ಣಾಚಾರಿ. ಇವನೂ ವಿಘ್ನೇಶ್ವರಸ್ವಾಮಿಯೂ ಕೂಡಿ ನನ್ನ ಪ್ರಾಣಕ್ಕೆ ತಂದಿದ್ದಾರೆ" ಎಂದ ಪೂಜಾರಿ.

"ತಪ್ಪು ! ನಿನ್ನ ದುರಾಶೆಯೇ ನಿನ್ನನ್ನು ಈ ಕಷ್ಟಕ್ಕೆ ಗುರಿಮಾಡಿತು. ಬೇರೆಯವರನ್ನು ನಿಂದಿಸ



ಬೇಡ" ಎಂದು ಜೀವದತ್ತ ಪೂಜಾರಿಗೆ ಬುದ್ಧಿ ಹೇಳಿದ. ಸ್ವರ್ಣಾಚಾರಿಯ ಮುಖಕ್ಕೆ ಸೈನಿಕರಿಂದ ನೀರು ಹಾಕಿಸಲು ತೊಡಗಿದರು.

ಸ್ವಲ್ಪ ಹೊತ್ತಿಗೆಲ್ಲಾ ಸ್ವರ್ಣಾಚಾರಿ ಕಣ್ಣು ತೆರೆದು ಸುತ್ತಲೂ ನೋಡಿ, "ನಾನು ಎಲ್ಲಿದ್ದೇನೆ? ಪೂಜಾರಿಗಳು ರಾಜರಾದರೆ?" ಎಂದು ಕೇಳಿದ.

"ಎಲೋ ಮೂರ್ಖ! ಅವನು ರಾಜನಾಗಲೂ ಇಲ್ಲ, ನೀನು ಮಂತ್ರಿಯಾಗಲೂ ಇಲ್ಲ. ನೀವಿಬ್ಬರೂ ಮೈಸುಟ್ಟುಕೊಂಡು ನರಳಾಡುತ್ತಿದ್ದೀರಿ. ಇನ್ನೀಗ ನಿತ್ಯಾನಂದ ರಾಜನೇ ಬಂದು ನಿಮಗಿಬ್ಬರಿಗೂ ಚಿತ್ರವಧೆಯ ಮೂಲಕ ಚೆನ್ನಾಗಿ ಮೋಕ್ಷ ಕೊಡುತ್ತಾನೆ" ಎಂದ ಖಡ್ಗವರ್ಮ.

ಖಡ್ಗವರ್ಮನ ಮಾತು ಕೇಳಿ ಸ್ವರ್ಣಾಚಾರಿ ಮೆಲ್ಲನೆ ಎದ್ದು ಕುಳಿತು ತಲೆಯನ್ನು ಆಚೆಗೂ ಈಚೆಗೂ ತಿರುಗಿಸಿ, ದೂರದಲ್ಲಿ ನಿಂತಿರುವ ವಿಘ್ನೇಶ್ವರ ಪೂಜಾರಿಯನ್ನು ನೋಡಿ. "ನಮ್ಮ ಐರಾವತವನ್ನು ನಗರದೊಳಗೆ ಕೊಂಡೊಯ್ಯಬೇಡವೆಂದು ನಾನೆಷ್ಟು ಹೇಳಿದೆ! ಕೇಳದೆ ಹೋದುದಕ್ಕೇ ಹೀಗಾಯಿತು. ಈಗ ನಾವಿಬ್ಬರೂ ಸಾಯಬೇಕಾಯಿತು!" ಎಂದ ಅಳುಮುಖದಿಂದ.

"ಬರೀ ಸಾವಾದರೆ ಆಗಲೇ ಬರುತ್ತಿತ್ತು. ಚಿತ್ರವಧೆಯಿಂದಲೇ ಸಾವು ಬರೆದಿದೆ ನಿಮ್ಮಿಬ್ಬರ ಹಣೆಯಲ್ಲಿ. ಹಾಗೆ ನಿಧಾನವಾಗಿ ಕೊಲ್ಲಿಸುತ್ತೇನೆ ನಿಮ್ಮಿಬ್ಬರನ್ನೂ!" ಎಂದು ಆಗ ತಾನೇ ಉದ್ಯಾನವನದ ಗಿಡಪೊದರುಗಳಾಚೆಗಿದ್ದ ನಿತ್ಯಾನಂದ ರಾಜನು ಅಲ್ಲಿಗೆ ಬಂದು ಕಣ್ಣು ತಿರುಗಿಸಿಕೊಂಡು ಹಲ್ಲು ಕಡಿದ.

ಆಮೇಲೆ ಅವನು ಖಡ್ಗವರ್ಮ ಜೀವದತ್ತರನ್ನು ನೋಡಿ, "ಮಹಾಶೂರರೆ, ನಿಮ್ಮ ಶಕ್ತಿ ಸಾಮರ್ಥ್ಯಗಳಿಂದ ನನ್ನನ್ನೂ, ನನ್ನ ರಾಜ್ಯವನ್ನೂ ಈ ದುಷ್ಟರ ಕೈಯಿಂದ ಕಾಪಾಡಿದಿರಿ. ನಿಮ್ಮನ್ನು ಸಂತೋಷಪಡಿಸುವುದು ನನ್ನ ಕರ್ತವ್ಯ. ನಿಮಗೆ ಏನು ಬೇಕೋ ಕೇಳಿರಿ, ಕೊಡುತ್ತೇನೆ" ಎಂದನು.

"ನಿಮ್ಮಿಂದ ನಾವು ಯಾವುದನ್ನೂ ಕೋರುವುದಿಲ್ಲ. ಯಾವ ಕೋರಿಕೆಯೂ ನಮಗಿಲ್ಲ. ನಿಮ್ಮ ಮೇಲೆ ಬಂದ ದೊಡ್ಡದೊಂದು ತೊಂದರೆ ತಪ್ಪಿ ಹೋದುದರಿಂದ, ಇನ್ನು ನಿಶ್ಚಿಂತೆಯಿಂದ ಸುಖವಾಗಿ ರಾಜ್ಯಭಾರ ಸಾಗಿಸಿಕೊಂಡಿರಿ. ಇವರಿಬ್ಬರನ್ನೂ ಇವರ ಅನುಚರರಾದ ಆಟವಿಕರನ್ನೂ ಕರೆದುಕೊಂಡು ನಾವು ನಮ್ಮ ಪಾಡಿಗೆ ಹೊರಟು ಹೋಗುತ್ತೇವೆ" ಎಂದ ಜೀವದತ್ತ.


"ಏನೆಂದಿರಿ? ಇವರಿಬ್ಬರು ದುಷ್ಟರನ್ನೂ, ಈ ಆಟವಿಕರನ್ನೂ ಜೀವದೊಂದಿಗೆ ಬಿಡಬೇಕೆ? ಆಟವಿಕರನ್ನೆಲ್ಲ ಆವರಣದೊಳಗೆ ಬಂಧಿಸಿ, ಕೋಟೆಗೋಡೆಗಳ ಮೇಲಿನಿಂದ ಅವರ ಮೇಲೆ ಕರು... ತೈಲ ಹೊಯ್ದು, ಉರಿಯುವ ಬಟ್ಟೆಗಳನ್ನು ಬಿಸುಟು ಎಲ್ಲರನ್ನೂ ಸುಡಿಸಿ ಹಾಕಿಸಿಬಿಡುತ್ತೇನೆ. ನಿಮ್ಮ ಈ ಮಾಯದ ಆನೆಯ ಮೇಲೆ ಪ್ರಯೋಗಿ...

ಅಸ್ತ್ರವನ್ನೇ ನಾನು ಅವರ ಮೇಲೆ ಪ್ರಯೋಗಿಸುತ್ತೇನೆ" ಎಂದ ನಿತ್ಯಾನಂದ ರಾಜ.

"ಮಹಾರಾಜರೆ, ಎಂತಹ ಕ್ರೂರ ಶತ್ರುವನ್ನಾದರೂ ಅಷ್ಟೊಂದು ಕ್ರೂರ ರೀತಿಯಲ್ಲಿ ಕೊಲ್ಲುವುದು ಸರಿ ಎನಿಸುವುದಿಲ್ಲ. ನಡೆದುದು ನಡೆದುಹೋಯಿತು. ಮುಗಿದೂ ಹೋಯಿತು. ಈಗ ಈ ವಿಘ್ನೇಶ್ವರ ಪೂಜಾರಿಯನ್ನೂ, ಸ್ವರ್ಣಾಚಾರಿಯನ್ನೂ, ಆಟವಿಕರನ್ನೂ ಕರೆದೊಯ್ದು ನಾವೇ ಈ ರಾಜ್ಯದ ಸರಹದ್ದನ್ನು ದಾಟಿಸಿಬಿಡುತ್ತೇವೆ. ಹಾಗೆ ಮಾಡಿದರೆ ಮುಂದೆ ಕೂಡಾ ನಿಮಗೆ ಯಾವ ಪ್ರಮಾದವೂ ಬರುವುದಿಲ್ಲ" ಎಂದು ಹೇಳಿ ಜೀವದತ್ತನು ಸ್ವರ್ಣಾಚಾರಿಯ ಎರಡು ಕೈಗಳನ್ನೂ ಹಿಡಿದು ನಿಲ್ಲಿಸಿ, ಪೂಜಾರಿಯನ್ನು ನೋಡಿ, "ವಿಘ್ನೇಶ್ವರ ಪೂಜಾರಿ, ಹಾಗೆ ನಡುಗದೆ ಬಲವಾಗಿ ನಿಲ್ಲು. ನಿನಗಿನ್ನು ಪ್ರಾಣಭಯವಿಲ್ಲವೆಂದು ನಂಬು. ನನ್ನೊಂದಿಗೆ ಬಾ. ಮೊದಲು ನಿನ್ನ ಅನುಚರರಾದ ಆಟವಿಕರನ್ನು ಕಾಪಾಡಬೇಕಾಗಿದೆ" ಎಂದು ಹೇಳಿ ಅವರನ್ನು ಕರೆದುಕೊಂಡು ಅತ್ತ ಹೊರಟನು.

"ಸ್ವಲ್ಪ ನಿಲ್ಲಪ್ಪಾ, ಮಹಾಶೂರಾ, ನಮ್ಮ ಆಜ್ಞೆ" ಎಂದು ನಿತ್ಯಾನಂದನು ಏನೋ ಹೇಳಲಿಕ್ಕಿರುವಾಗ ಖಡ್ಗವರ್ಮನು ಕತ್ತಿ ಹಿರಿದು "ನಿಲ್ಲಿಸು ರಾಜಾಜ್ಞೆ! ಶೂರ ವೀರ ಅಂತ ಬಾಯಿ ಹರಿದು ಮಾತಾಡಬೇಕಾಗಿಲ್ಲ. ಇಲ್ಲಿ ಈಗ ಆಜ್ಞೆ ಮಾಡುವವನು ನೀನಲ್ಲ, ಜೀವದತ್ತ! ತಿಳಿದುಕೋ!" ಎಂದನು ಗದರಿಸುವವನಂತೆ.

ರಾಜನಿಗೆ ಭರ್ರನೆ ಕೋಪವೆದ್ದಿತು. ಕೋಪದಿಂದ ನಡುಗುತ್ತ, ದೊಡ್ಡ ಕಂಠದಿಂದ, "ಹಾಂ! ನನ್ನ ರಾಜ್ಯದಲ್ಲಿ, ನನ್ನ ಭವನದ ಒಳಭಾಗದಲ್ಲಿ, ನನ್ನ ಎದುರಿನಲ್ಲಿ..." ಎಂದು ಪ್ರಾರಂಭಿಸುವಾಗ, ಮಂತ್ರಿ ರಾಜನ ಸಮೀಪ ಹೋಗಿ ಸಣ್ಣ ದನಿಯಿಂದ ಏನೋ ಹೇಳಿದನು. ರಾಜನು ತುಸು ಶಾಂತನಾದನು.




ಆದರೂ ಅವನು ಅಲ್ಲಿಂದ ಹೊರಟುಹೋಗುತ್ತಿರುವ ಖಡ್ಗವರ್ಮ ಜೀವದತ್ತರನ್ನು ನೋಡುತ್ತಾ ಹಲ್ಲು ಕಡಿದುಕೊಳ್ಳ ತೊಡಗಿದನು.

ಖಡ್ಗವರ್ಮ ಜೀವದತ್ತರು ಆಟವಿಕರನ್ನು ಬಂಧಿಸಿರುವ ಪ್ರದೇಶದ ಬಳಿಗೆ ಹೋದಾಗ, ಕೆಲಮಂದಿ ಸೈನಿಕರು ಗೋಡೆಯ ಮೇಲುಭಾಗವನ್ನು ಸೇರಿ ಕೆಳಗಿರುವ ಆಟವಿಕರ ಮೇಲೆ, ತಂಬಿಗೆ ಗಿಂಡಿ ಮೊದಲಾದ ಪಾತ್ರೆಗಳಲ್ಲಿ ಕರ್ಪೂರ ತೈಲವನ್ನು ಚೆಲ್ಲಿಕೊಂಡಿದ್ದರು. ಅದನ್ನು ನೋಡಿ ಖಡ್ಗವರ್ಮ ಜೀವದತ್ತರು "ನಿಲ್ಲಿಸಿರಿ, ನಿಲ್ಲಿಸಿರಿ! ಸುರಿಯಬೇಡಿರಿ!" ಎಂದು ಕೂಗಿ ಕೂಗಿ ಹೇಳಿದರು.

"ಈ ಕಾಡುಮನುಷ್ಯರನ್ನು ಸಜೀವವಾಗಿ ಸುಟ್ಟು ಕೊಲ್ಲಬೇಕೆಂದು ಸೇನಾಧಿಪತಿಗಳ ಆಜ್ಞೆ" ಎಂದು ಆ ಸೈನಿಕರು ಪ್ರತ್ಯುತ್ತರ ಕೊಟ್ಟರು.

ಅದನ್ನು ಕೇಳಿದ ಕೂಡಲೇ ಖಡ್ಗವರ್ಮ ಜೀವದತ್ತರು ಒಂದೆರಡು ಹಾರೋಟಗಳಿಂದ ಗೋಡೆಯ



ಬದಿಯನ್ನು ತಲಪಿ, ಅಲ್ಲಿಯ ಮೆಟ್ಟಲಿನ ಮೂಲಕ ಗೋಡೆಯ ಮೇಲೇರಿದರು. ಸೈನಿಕರು ಅಟ್ಟಹಾಸ ಮಾಡುತ್ತ ಸಿಕ್ಕಿಬಿದ್ದಿರುವ ಆಟವಿಕರ ಮೇಲೆ ಕರ್ಪೂರ ತೈಲವನ್ನು ಚೆಲ್ಲುವುದನ್ನೂ, ಆಟವಿಕರು ಭಯ ಕಂಪಿತರಾಗಿ ಗೋಳಾಡುತ್ತ ನಿರುಪಾಯರಾಗಿ ಮುಚ್ಚಿರುವ ಬಾಗಿಲನ್ನು ಒಡೆಯುವ ವ್ಯರ್ಥ ಪ್ರಯತ್ನ ಮಾಡುವುದನ್ನೂ ನೋಡಿದರು.

"ನಮ್ಮ ಆಜ್ಞೆ ಇನ್ನೂ ನಿಮ್ಮ ಕಿವಿಗೆ ಬಿದ್ದ ಹಾಗಿಲ್ಲ!" ಎಂದು ಗರ್ಜಿಸಿ ಖಡ್ಗವರ್ಮ ಜೀವದತ್ತರು ಸೈನಿಕರ ಮೇಲೆ ಹಾರಿ ಹಾರಿ, ಕಾಲಿನಿಂದ ತುಳಿದೂ, ಕೈಯಿಂದೆತ್ತಿ ಬಿಸುಟೂ ತಾಂಡವಿಸಲು ತೊಡಗಿದರು. ಅನೇಕ ಸೈನಿಕರು ಅಗಾಧದಲ್ಲಿರುವ ಆಟವಿಕರ ಮೇಲೆಯೇ ಬಿದ್ದರು. ಅದನ್ನೆಲ್ಲ ನೋಡಿ ಆಟವಿಕರಿಗೆ ಹೋದ ಪ್ರಾಣ ಬಂದ ಹಾಗಾಯಿತು. ಇನ್ನೂ ಸ್ವಲ್ಪ ಕಾಲದವರೆಗೆ ಬದುಕುವ ದಾರಿ ತೆರೆಯ ಬಹುದೆಂಬ ಆಶೆ ಅವರಲ್ಲಿ ಮೂಡಿತು. ಅಂತೆಯೇ ಅವರು ಖಡ್ಗವರ್ಮ ಜೀವದತ್ತರ ಕಡೆಗೆ ನೋಡಿ ಆರ್ತಸ್ವರದಿಂದ ಕೈಯೆತ್ತಿ "ಅಯ್ಯಾ, ನಮ್ಮನ್ನು ಈ ರಾಜಭಟರಿಂದ ರಕ್ಷಿಸಿರಿ. ಬಾಗಿಲು ತೆರೆಯಿಸಿರಿ. ನಮ್ಮ ಪಾಡಿಗೆ ಕಾಡಿನೊಳಗೆ ಓಡಿಹೋಗಿ ಬಿಡುತ್ತೇವೆ. ಮತ್ತೆ ಉಸಿರಿದ್ದರೆ ಈ ಕಡೆಗೆ ತಿರುಗಿ ಕೂಡಾ ನೋಡುವುದಿಲ್ಲ" ಎಂದು ಗೋಳಿಟ್ಟರು. ಕೆಲವರು "ರಕ್ಷಿಸಿರೋ" ಎಂದು ಕೂಗುತ್ತ ದೀರ್ಘದಂಡ ನಮಸ್ಕಾರ ಮಾಡಿದರು.

ಸ್ವಲ್ಪ ಹೊತ್ತಿಗೆ ಆಟವಿಕರ ಮಧ್ಯೆ ಬಿದ್ದವರ ಹೊರತು ಉಳಿದ ಸೈನಿಕರೆಲ್ಲಾ ಓಡಿಹೋದರು. ಖಡ್ಗವರ್ಮ ಜೀವದತ್ತರು ಗೋಡೆಯ ಮೇಲಿನಿಂದ ಕೆಳಗಿಳಿದು ಆವರಣದ ದ್ವಾರದ ಬಳಿಗೆ ಹೋದರು. ಆ ದ್ವಾರವನ್ನು ಕಾಯುತ್ತಿದ್ದ ಇಬ್ಬರು ಕಾವಲುಗಾರರು ಅವರನ್ನು ನೋಡಿ "ಸೇನಾಧಿಪತಿಗಳ ಆಜ್ಞೆ..." ಎಂದರೋ ಇಲ್ಲವೋ, ಜೀವದತ್ತನು ತನ್ನ ದಂಡದಿಂದ ಅವರಿಬ್ಬರನ್ನೂ ಹೊಡೆದನು. ಆ ಭಟರಿಬ್ಬರೂ ತಾಗಿದ ನೋವನ್ನು ಒರೆಸಿಕೊಳ್ಳುತ್ತಾ ಸುಮ್ಮನೆ ಓಡಿಹೋದರು.

ಖಡ್ಗವರ್ಮನು ಕತ್ತಿಯಿಂದ ಬಾಗಿಲಿಗೆ ಕಟ್ಟಲ್ಪಟ್ಟ ಹಗ್ಗವನ್ನು ಕಡಿದು, ಬಾಗಿಲನ್ನು ತೆರೆದುಬಿಟ್ಟನು. ಒಡನೇ ಸಿಕ್ಕಿಕೊಂಡ ಆಟವಿಕರೆಲ್ಲ ದಬದಬನೆ ಹೊರಗೆ ಬಂದರು. ಅವರಲ್ಲಿ ಕೆಲವರು ಖಡ್ಗವರ್ಮ ಜೀವದತ್ತರಿಗೆ ಸಾಷ್ಟಾಂಗ ಬಿದ್ದರು.

"ನಿಮಗೆ ಪ್ರಾಣಭಯವೇನಿಲ್ಲ. ನೀವು ನಿಮ್ಮ ಪಾಡಿಗೆ ಅರಣ್ಯ ಪ್ರಾಂತಕ್ಕೆ ಹೋಗಿಬಿಡಿ. ಆದರೆ ಎಂದಿಗೂ ವಿಘ್ನೇಶ್ವರ ಪೂಜಾರಿಯಂತಹ ದುಷ್ಟರ ಬಲೆಗೆ ಬಿದ್ದು ಕಷ್ಟಕ್ಕೆ ಸಿಕ್ಕಿಕೊಳ್ಳಬೇಡಿ" ಎಂದು ಬುದ್ಧಿ ಹೇಳಿದನು.

"ಅಯ್ಯಾ, ಈಗ ಆ ಪೂಜಾರಿಯೂ, ಆಚಾರಿಯೂ ಎಲ್ಲಿದ್ದಾರೆ? ಅವರಿಬ್ಬರೂ ನಮಗೆ ಬಹಳ ದ್ರೋಹ ಮಾಡಿಬಿಟ್ಟರು. ಹಾಗೆ ಮಾಡಿದವರನ್ನು ಹಿಡಿಯ


CHITRA

ಬೇಕಾದುದು ನಮ್ಮ ಕರ್ತವ್ಯ. ಅವರನ್ನು ಹಿಡಿದುಕೊಂಡು ಹೋಗಿ ನಮ್ಮ ಕಾಳೀ ಮಾತೆಗೆ ಬಲಿಕೊಟ್ಟರೆ ಆ ಮಹಾಮಾತೆ ಸಂತೋಷಪಡುತ್ತಾಳೆ. ಅವರನ್ನು ತೋರಿಸಿರಿ" ಎಂದ ಒಬ್ಬ ಆಟವಿಕ.

ವಿಘ್ನೇಶ್ವರ ಪೂಜಾರಿ ಎತ್ತ ಹೋದನೆಂದು ಖಡ್ಗವರ್ಮ ಜೀವದತ್ತರು ಅತ್ತಿತ್ತ ನೋಡಿದರು. ಪೂಜಾರಿಯೂ ಸ್ವರ್ಣಾಚಾರಿಯೂ ತುಸುದೂರ ಒಂದು ಮರದ ಬುಡದಲ್ಲಿ ನಿಂತು ಮಾತಾಡಿಕೊಳ್ಳುವುದನ್ನು ಅವರು ನೋಡಿದರು. ಅವರಿಗೆ ತುಸುದೂರದಲ್ಲಿರುವ ಇನ್ನೊಂದು ಮರದ ಬುಡದಲ್ಲಿ ನಿತ್ಯಾನಂದ ರಾಜನೂ ಮಂತ್ರಿಯೂ ನಿಂತುಕೊಂಡು ಏನೋ ಗುಸುಗುಸು ಮಾತಾಡಿಕೊಳ್ಳುತ್ತಿದ್ದರು. ಅವರ ಹಿಂದೆ ಸೈನಿಕರು ಸಾಲು ಹಿಡಿದು ನಿಂತುಕೊಂಡಿದ್ದರು.

"ಖಡ್ಗಾ, ಈ ರಾಜನ ರೀತಿ ನೋಡಿದರೆ ಆಟವಿಕರನ್ನೂ, ಪೂಜಾರಿಯನ್ನೂ, ಸ್ವರ್ಣಾಚಾರಿಯನ್ನೂ ಇಲ್ಲಿಯೇ ಕೊಲ್ಲಿಸುವಂತಹ ತಂತ್ರ ಏನೋ ಆಲೋಚಿಸುತ್ತಿದ್ದಾರೆಂದು ಅನುಮಾನವಾಗುತ್ತಿದೆ. ಸೇನೆಗಳನ್ನು ಕ್ರಮಗೊಳಿಸಿ ಅಣಿಗೂಡಿಸುತ್ತಿದ್ದಾರೆ ನೋಡಿದಿಯಾ?" ಎಂದಜೀವದತ್ತ.

"ದುಷ್ಟರಾದ ಪೂಜಾರಿ ಮತ್ತು ಸ್ವರ್ಣಾಚಾರಿಗಳ ಗತಿ ಹೇಗಾಗುವುದೋ ಎಂಬುದಕ್ಕಿಂತ, ಪಾಪವರಿಯದ ಆಟವಿಕರನ್ನು ಕ್ಷೇಮವಾಗಿ ಕಾಡಿನೊಳಗೆ ಸೇರಿಸುವ ಬಾಧ್ಯತೆ ನಮ್ಮ ಮೇಲಿದೆ. ಅವರನ್ನು ತಮ್ಮ ಕಪಟ ನಾಟಕದಲ್ಲಿ ತೊಗಲಿನ ಬೊಂಬೆಗಳನ್ನಾಗಿ ಮಾಡಿಕೊಂಡವರು ಅವರಿಬ್ಬರೂ" ಎಂದ ಖಡ್ಗವರ್ಮ. ಜೀವದತ್ತನು ಏನೋ ಹೇಳುವವನಿದ್ದನು. ಅಷ್ಟರೊಳಗೆ ನಿತ್ಯಾನಂದ ರಾಜನು ಅವಸರವಾಗಿ ಸೈನಿಕರ ಕಡೆಗೆ ನಡೆದುದನ್ನು ನೋಡಿದನು. ಸೇನಾಪತಿಯೂ ಕೈಹಿಸುಕಿಕೊಳ್ಳುತ್ತಾ ರಾಜನ ಹಿಂದೆಯೇ ಹೋದನು. ಮಂತ್ರಿ ಮಾತ್ರ ಇದ್ದಲ್ಲೇ ಇದ್ದು ಸೈನಿಕರ ಕಡೆಗೂ, ಖಡ್ಗವರ್ಮ ಜೀವದತ್ತರ ಕಡೆಗೂ ನೋಡುತ್ತಿದ್ದನು.

"ಖಡ್ಗಾ! ಅಪಾಯ ಪ್ರಸಂಗವಿದು! ಆ ರಾಜ ತನ್ನ ಸೈನಿಕರನ್ನು ಆಟವಿಕರ ಮೇಲೆ ಏರಿಸು ಹಾಗಿದೆ. ಹೌದು, ಅದೇ ನಿಜ. ಸಂದೇಹವಿಲ್ಲ" ಎಂದು ಹೇಳಿ ಜೀವದತ್ತನು ಆಟವಿಕರನ್ನು ನೋಡಿ "ನೀವೆಲ್ಲರೂ ನಿಮ್ಮ ಆಯುಧಗಳೇನೋ ಅದನ್ನು ತೆಗೆದುಕೊಂಡು ಸಿದ್ಧರಾಗಿರಿ. ನಿಮ್ಮ ನಾಯಕನಾಗಿ ಯಾರಾದರೂ ಇದ್ದಾರೋ?" ಎಂದು ಕೇಳಿದ.

ಆಟವಿಕರ ಗುಂಪಿನಿಂದ ಆಜಾನುಬಾಹುವಾದ ಒಬ್ಬನು ಮುಂದೆ ಬಂದು ಖಡ್ಗವರ್ಮ ಜೀವದತ್ತರಿಗೆ ತಲೆವಾಗಿ ನಮಸ್ಕರಿಸಿ, "ಅಯ್ಯಾ, ನಾನೇ ಇವರಿಗೆಲ್ಲ ನಾಯಕ" ಎಂದನು.

(ಇನ್ನೂ ಇದೆ)






ಪರಸ್ಪರ ಸಹಾಯ

ಛಲವೇ ಅಭ್ಯಾಸವಾಗಿ ಹೋದವನಂತೆ ತ್ರಿವಿಕ್ರಮನು ಏನೂ ಬೇಸರಪಡದೆ ಮತ್ತೆ ಮರದ ಬಳಿಗೆ ಹಿಂತಿರುಗಿ, ಕೊಂಬೆಯಲ್ಲಿ ನೇತಾಡುತ್ತಿದ್ದ ಶವವನ್ನು ಕೆಳಕ್ಕಿಳಿಸಿ, ತನ್ನ ಭುಜದ ಮೇಲೇರಿಸಿಕೊಂಡು, ಎಂದಿನಂತೆ ಮೌನವಾಗಿ ಶ್ಮಶಾನದ ಕಡೆಗೆ ನಡೆಯತೊಡಗಿದನು. ಆಗ ಶವದೊಳಗಿನ ಬೇತಾಳವು ಮಾತಾಡಲು ತೊಡಗಿ, "ರಾಜಾ, ದೊಡ್ಡ ದೊಡ್ಡ ಅಸಾಧ್ಯ ಕಾರ್ಯಗಳನ್ನು ಸಾಧಿಸಬೇಕಾದರೆ ಎಂತಹ ಸಮರ್ಥರಿಗಾದರೂ ಬೇರೆಯವರ ಸಹಾಯ ಬೇಕಾಗುತ್ತದೆ. ರಾಮನು ಅವತಾರ ಪುರುಷನಾಗಿದ್ದರೂ, ವಾನರ ಸೇನೆಯ ಸಹಾಯವಿದ್ದುದರಿಂದಲೇ ರಾವಣನನ್ನು ಸಂಹಾರ ಮಾಡಿ ಸೀತೆಯನ್ನು ತಂದುಕೊಳ್ಳಲು ಸಾಧ್ಯವಾಯಿತು. ನೀನು ನಿನ್ನ ಸ್ವಂತ ಶಕ್ತಿಯನ್ನೇ ನಂಬಿರುವ ಕಾರಣ ಕಾರ್ಯ ಸಾಧನೆಯಾಗುವುದಿಲ್ಲವೆಂದು ಕಾಣುತ್ತದೆ. ಪರಸ್ಪರ ಸಹಾಯದಿಂದ ದೇವಗುಪ್ತನ ಮಗಂದಿರು ತಮ್ಮ ತಲೆಗೆ ಮೀರಿದ ಕಾರ್ಯವನ್ನು ಹೇಗೆ ಸಾಧಿಸಿಕೊಂಡರೆಂಬುದನ್ನು ಹೇಳುತ್ತೇನೆ. ಶ್ರಮ ತಿಳಿಯದಂತೆ ಕೇಳು" ಎಂದು ಕಥೆಯನ್ನು ಪ್ರಾರಂಭ ಮಾಡಿತು:

ಬೇತಾಳ ಕಥೆಗಳು





ಹಿಂದೆ ಕೃಷ್ಣಾ ನದೀ ತೀರದಲ್ಲಿದ್ದ ಧಾನ್ಯಕಟಕವೆಂಬಲ್ಲಿ ವಿಷ್ಣುಗುಪ್ತನೆಂಬ ಕೋಟೀಶ್ವರನು ವಾಸವಾಗಿದ್ದನು. ಅವನಿಗೆ ಕಮಲಾಕ್ಷಿ ಎಂಬ ಒಬ್ಬಳು ಮಗಳಿದ್ದಳು. ಆ ಮಗಳು ಬಹಳ ಸುಂದರಿಯೆಂದು ಖ್ಯಾತಳಾದುದರಿಂದ, ಪ್ರಾಯಕ್ಕೆ ಬರುವಾಗ ಅವಳಿಗಾಗಿ ಅನೇಕ ಸಂಬಂಧಗಳು ಬರತೊಡಗಿದುವು. ಅಂತಹವರಲ್ಲಿ ಅನೇಕರು ಕೋಟೀಶ್ವರರೇ ಆಗಿದ್ದರು. ಆದರೆ ಅವರೆಲ್ಲ ಬಹುದೂರ ಪ್ರಾಂತದವರು. ತನ್ನ ಒಬ್ಬಳೇ ಒಬ್ಬಳು ಮಗಳನ್ನು ಅಷ್ಟು ದೂರಕ್ಕೆ ಕಳುಹಿಸಲು ಇಷ್ಟವಿಲ್ಲದೆ ವಿಷ್ಣುಗುಪ್ತನು ಆ ಸಂಬಂಧಗಳನ್ನು ಹಿಂದಿರುಗಿಸಿಬಿಟ್ಟನು. ಹೀಗೆ ಸರಿಯಾದ ಸಂಬಂಧವು ಸಿಗುವ ಲಕ್ಷಣವೇನೂ ಕಾಣಿಸಲಿಲ್ಲ.

ಧಾನ್ಯಕಟಕದೊಳಗಿನವರೇ ಆದ ಕೆಲವು ಮಂದಿ ವೈಶ್ಯಕುಮಾರರು ಕಮಲಾಕ್ಷಿಯನ್ನು ಮದುವೆಯಾಗಲು ಆಶೆಪಟ್ಟರು. ಆದರೆ ಅವರಲ್ಲಿ ಒಬ್ಬನೂ ವಿಷ್ಣುಗುಪ್ತನಿಗೆ ಹಿಡಿಸಲಿಲ್ಲ. ಕೆಲವರಿಗೆ ಹಣವಿಲ್ಲದಿದ್ದರೆ ಮತ್ತೆ ಕೆಲವರಿಗೆ ರೂಪವಿಲ್ಲ. ಇನ್ನೂ ಕೆಲವರಿಗೆ ವಂಶಪ್ರತಿಷ್ಠೆ ಇರಲಿಲ್ಲ. ಮತ್ತೆ ಕೆಲವರಿಗೆ ಗು[ಣ]ವಿರಲಿಲ್ಲ. ಹೀಗೆ ಏನೋ ಒಂದು ಲೋಪದಿಂದ ಬರುವ ಸಂಬಂಧ ಸರಿಹೊಂದಲಿಲ್ಲ.

ಅದೇ ಊರಿನಲ್ಲಿ ದೇವಗುಪ್ತನೆಂಬ ವೈಶ್ಯಶ್ರೇಷ್ಠನೊಬ್ಬನಿದ್ದ. ಅವನದು ವಿಷ್ಣುಗುಪ್ತನ ವಂಶಕ್ಕಿಂತಲೂ ಪ್ರತಿಷ್ಠೆಯುಳ್ಳ, ವಂಶವಾಗಿತ್ತು. ಒಂದು ಕಾಲದಲ್ಲಿ ದೇವಗುಪ್ತನ ತಂದೆತಾತಂದಿರು ಕೋಟೀಶ್ವರರಾಗಿಯೆ ಇದ್ದರು. ಆದರೆ ದೇವದತ್ತನ ತಂದೆ ಬೌದ್ಧಮ[ತ]ವನ್ನು ಸ್ವೀಕರಿಸಿ, ಅನೇಕವಾಗಿ ತನಗಿರುವ ಧ[ನ]ವನ್ನೆಲ್ಲಾ ಬೌದ್ಧಮತದ ವ್ಯಾಪಕಕ್ಕೂ, ಭಿಕ್ಷುಗಳಿಗೂ ಧಾರೆಯೆರೆದು, ಸಾಧಾರಣ ಕುಟುಂಬದ ಸ್ಥಾಯಿಗೆ ಇಳಿದುಬಿಟ್ಟಿದ್ದನು. ಆದರೆ ಪೂರ್ತಿ ಬಡವನಾಗದೆ ಏನೋ ಒಂದು ದುಡಿಮೆಗೆ ಇಳಿದನು.

ದೇವಗುಪ್ತನು ಚಿಕ್ಕಚಿಕ್ಕ ವ್ಯಾಪಾರಗಳನ್ನು ಮಾಡುತ್ತ, ತನ್ನ ಸಂಸಾರದ ಗಾಡಿಯನ್ನು ಎಳೆದು ಕೊಂಡು ಹೋಗುತ್ತಿದ್ದ. ಅವನಿಗೆ ಇಬ್ಬರು ಗಂಡು ಮಕ್ಕಳಿದ್ದರು. ದಾನಗುಪ್ತನು ಹಿರಿಯವ. ಧ[...] ಗುಪ್ತನು ಕಿರಿಯವ. ಅವರಿಬ್ಬರಿಗೂ ಒಂದುವ[...] ಮಾತ್ರವೇ ವ್ಯತ್ಯಾಸವಿತ್ತು. ಇಬ್ಬರೂ ನೋಡಲು ಸುಂದರ ಯುವಕರು. ನೋಡಿದರೆ ಅವಳಿಜವ[ಳಿ]ಗಳಂತೆ ಭ್ರಮೆ ಹುಟ್ಟುತ್ತಿತ್ತು. ಯಾವಾಗಲೂ ಒಟ್ಟೊಟ್ಟಿಗೇ ತಿರುಗಾಡಿಕೊಂಡಿರುವವರು.

ಆ ತರುಣರಿಬ್ಬರಿಗೂ ಒಂದೇ ಬಗೆಯ ಆಲೋಚನೆ ಬಂದಿತು. ಕಮಲಾಕ್ಷಿಯನ್ನು ಮದುವೆಯಾಗಿ ವಿಷ್ಣುಗುಪ್ತನ ನೆರಳಿನಲ್ಲಿರುತ್ತ ಕೋಟೀಶ್ವರರಾಗಲು ಪ್ರಯತ್ನಿಸಬೇಕೆಂಬುದೇ ಅವರಿಬ್ಬರಿಗೆ ಬಂದ ಆಲೋಚನೆ. ಅವರಿಬ್ಬರೂ ತಮ್ಮ ಕೋರಿಕೆಯನ್ನು ತಂ[...]ಯೊಂದಿಗೆ ಹೇಳಿದರು.


"ನಿಮ್ಮ ಕೋರಿಕೆ ಆಕಾಶಗೋಪುರದ ಹಾ[...] ಕಾಣಿಸುತ್ತದೆ. ನಮಗಿಂತಲೂ ಐಶ್ವರ್ಯವಂ[...]

ಸಂಬಂಧಗಳನ್ನೇ ವಿಷ್ಣುಗುಪ್ತನು ನಿರಾಕರಿಸಿದ್ದಾನೆ. ಆದರೂ ಪ್ರಯತ್ನಿಸುವುದರಿಂದ ತಪ್ಪೇನಿಲ್ಲ, ನಷ್ಟವೂ ಇಲ್ಲ. ನೀವಿಬ್ಬರೂ ಆ ಹುಡುಗಿಗೆ ತಕ್ಕವರೆಂಬುದೂ ನಿಜ. ವಿಷ್ಣುಗುಪ್ತನ ಮನೆಗೆ ಹೋಗಿ ನಿಮ್ಮಿಬ್ಬ ರಲ್ಲಿ ಒಬ್ಬನಿಗಾದರೂ ಅವನು ತನ್ನ ಮಗಳನ್ನು ಕೊಡುತ್ತಾನೋ ಕೇಳಿರಿ" ಎಂದ ದೇವಗುಪ್ತ.

ಅಣ್ಣತಮ್ಮಂದಿರಿಬ್ಬರೂ ವಿಷ್ಣುಗುಪ್ತನ ಮನೆಗೆ ಹೋಗಿ ಕುಶಲ ಪ್ರಶ್ನೆಗಳನ್ನು ಮಾಡಿ, ತಾವು ಬಂದ ಕಾರ್ಯವನ್ನು ಕುರಿತು ಕೇಳಿದರು.

ಅವರಿಬ್ಬರಲ್ಲಿ ಒಬ್ಬನನ್ನಾದರೂ ತನ್ನ ಅಳಿಯ ನನ್ನಾಗಿ ಮಾಡಿಕೊಳ್ಳಲು ವಿಷ್ಣುಗುಪ್ತನಿಗೆ ಇಷ್ಟವಿರ ಲಿಲ್ಲ. ಆದರೆ ಹಾಗೆಂದು ಸ್ಪಷ್ಟವಾಗಿ ಹೇಳಲಿಕ್ಕೆ ವಿಷ್ಣುಗುಪ್ತನಿಗೆ ಬಾಯಿಬರಲಿಲ್ಲ. ಏಕೆಂದರೆ ದೇವ ಗುಪ್ತನು ತುಂಬಾ ಗೌರವಕ್ಕೆ ಅರ್ಹವಾದ ಮನೆತನದ ವನು. ಅವರ ವಂಶವು ಪ್ರಸಿದ್ಧವಾದುದು. ಅವನ ಕುಮಾರರಾದ ದಾನಗುಪ್ತ ಧನಗುಪ್ತರು ಕೂಡಾ ಒಳ್ಳೆಯ ಬುದ್ಧಿವಂತ ಯುವಕರೇ. ಅವರಿಗಿರುವ ಕೊರತೆಯೆಂದರೆ ಧನವಂತರ ಮಗಂದಿರಲ್ಲವೆಂಬುದೇ. ಅದನ್ನು ಸ್ಪಷ್ಟ ಹೇಳುವುದು ಹೇಗೆ ?

ಅಂತೆಯೇ ವಿಷ್ಣುಗುಪ್ತನು ಅವರನ್ನು ಕುರಿತು "ಅಪ್ಪಗಳಿರಾ, ನಾನು ನನ್ನ ಮಗಳನ್ನು ಧನಿಕನಾದ ವನಿಗೆ ಕೊಡುವೆನೆಂದು ಪ್ರತಿಜ್ಞೆ ಮಾಡಿ, ಧನಿಕರಲ್ಲದ ಅನೇಕ ಸಂಬಂಧಗಳನ್ನು ಹಿಂದಿರುಗಿಸಿಬಿಟ್ಟಿದ್ದೇನೆ. ಈಗ ನಾನು ನಿಮ್ಮೊಳಗೆ ಒಬ್ಬನಿಗೆ ಮಗಳನ್ನು ಕೊಟ್ಟು ಮದುವೆ ಮಾಡಿಬಿಟ್ಟರೆ, ಹೇಳಿದ ಮಾತು ತಪ್ಪಿಸಿಕೊಂಡವನ ಲೆಕ್ಕಕ್ಕೆ ಬಿದ್ದವನಾಗುತ್ತೇನೆ. ಅನೇಕರ ಕೋಪಕ್ಕೆ ಬೀಳಬೇಕಾಗುತ್ತದೆ. ಅದೂ ಅಲ್ಲದೆ, ನನ್ನ ವ್ಯಾಪಾರ ವ್ಯವಹಾರಗಳನ್ನು ಕೂಡಾ ನನ್ನ ಅನಂತರ ನನ್ನ ಅಳಿಯನೇ ನಿರ್ವಹಿಸಬೇಕಾಗಿದೆ. ಆದುದರಿಂದ ನನಗೆ ಬರಲಿರುವ ಅಳಿಯನು ವ್ಯಾಪಾರ ದಕ್ಷನಾಗಿರಲೂ ಬೇಕು. ನಿಮಗೆ ಅದು ಇರಲಾರ ದೆಂದು ಕಾಣುತ್ತದೆ" ಎಂದು ಅಡ್ಡದಾರಿಯಾಗಿ ಹೇಳಿದನು. ಯುವಕರಿಗೂ ಅವನ ಭಾವ ಅರ್ಥ ವಾಯಿತು. ಅವರು ಅಷ್ಟಕ್ಕೆ ಬಿಡದೆ, "ವ್ಯಾಪಾ





ರದ ವಿಷಯ ಈಗ ಹೇಗೆ ನಿಮಗೆ ಗೊತ್ತಾಗುತ್ತದೆ? ನಮ್ಮಲ್ಲಿ ವ್ಯಾಪಾರ ದಕ್ಷತೆ ಇಲ್ಲವೆಂಬುದನ್ನು ಮುಂದಾಗಿ ಹೇಗೆ ನೀವು ಹೇಳುವಿರಿ?" ಎಂದು ವಿಷ್ಣುಗುಪ್ತನಿಗೆ ತಿರುಗಿ ಕೇಳಿದರು.

ವಿಷ್ಣುಗುಪ್ತನಿಗೆ ಅವರನ್ನು ನಿರಾಕರಿಸಲು ದಾರಿ ಕಾಣಲಿಲ್ಲ. ಅವನು ಸ್ವಲ್ಪ ಆಲೋಚನೆ ಮಾಡಿ. "ಒಂದು ಕೆಲಸ ಮಾಡಿ. ನಿಮ್ಮಿಬ್ಬರಿಗೂ ತಲಾ ಒಂದೊಂದು ಸಾವಿರ ವರಹಗಳನ್ನು ಕೊಡುತ್ತೇನೆ. ಅದನ್ನು ಮೂಲಧನವಾಗಿಟ್ಟುಕೊಂಡು ವ್ಯಾಪಾರ ಮಾಡಿ, ಸರಿಯಾಗಿ ಒಂದು ವರ್ಷವಾಗುವಾಗ ಅದನ್ನು ನೂರುಪಾಲು ಬೆಳೆಯಿಸಿ, ಲಕ್ಷ ವರಹಗಳನ್ನು ಯಾರು ತರುವಿರೋ ಅವರಿಗೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡುತ್ತೇನೆ. ಹೊರಡಿರಿ. ನಿಮಗೆ ಒಳ್ಳೆಯದಾಗಲಿ" ಎಂದನು.

ಈ ಹುಡುಗರು ವ್ಯಾಪಾರ ಮಾಡಿ ತಮ್ಮ ಮೂಲ ಧನವನ್ನು ನೂರು ನೂರು ಪಾಲು ಹೆಚ್ಚಿಸಲು ಸಮರ್ಥರಾಗುವರೆಂದು ವಿಷ್ಣುಗುಪ್ತನಿಗೆ ಒಂದಿಷ್ಟೂ ನಂಬುಗೆ ಇರಲಿಲ್ಲ. ಆದರೆ ಅವರಿಂದ ಬಿಡುಗಡೆ ಹೊಂದಲು ಕೇವಲ ಎರಡುಸಾವಿರ ವರಹಗಳನ್ನು ಖರ್ಚು ಮಾಡುವುದರಿಂದ ತನ್ನ ಪ್ರತಿಷ್ಠೆ ಹೆಚ್ಚಾಗುವುದೆಂದುಕೊಂಡು ಇಬ್ಬರಿಗೂ ಒಂದೊಂದು ಸಾವಿರ ವರಹಗಳನ್ನು ಕೊಟ್ಟನು.

ಆದರೆ ದಾನಗುಪ್ತ, ಧನಗುಪ್ತರು ಮಾತ್ರ ಕಮಲಾಕ್ಷಿಯನ್ನು ಮದುವೆಯಾಗಲು ಒಂದು ಮಾರ್ಗ ದೊರೆಯಿತೆಂದುಕೊಂಡು ಸಂತೋಷಪಟ್ಟರು. ಅವರು ತಂದೆಯೊಂದಿಗೆ ಹೇಳಿ ನಡೆದ ಸಂಗತಿಯನು ಮನೆಯಿಂದ ಹೊರಟರು. ತಾವು ವ್ಯಾಪಾರ ಮಾಡಲು ಇಬ್ಬರೂ ಬೇರೆ ಬೇರೆ ದೇಶಗಳನ್ನು ಆರಿಸಿಕೊಂಡು ಅಲ್ಲಿಗೆ ಹೋದರು. ಒಂದು ವರ್ಷ ಮುಗಿಯುವ ಸಮಯದಲ್ಲಿ ತಾವಿಬ್ಬರೂ ಎಲ್ಲಿ ಕೂಡಿಕೊಳ್ಳಬೇಕೆಂಬುದನ್ನೂ ಮುಂದಾಗಿ ನಿರ್ಣಯಿಸಿಕೊಂಡಿದ್ದರು.

ವರ್ಷದ ಗಡುವು ಸಮೀಪಿಸುತ್ತಾ ಬಂದಿತು. ನಿರ್ಣಯಿಸಿಕೊಂಡ ಪ್ರಕಾರ ಇಬ್ಬರೂ ಸಂಕೇತ ಸ್ಥಳದಲ್ಲಿ ಬಂದು ಕೂಡಿದರು. ಆದರೆ ಇಬ್ಬರ ಮುಖದಲ್ಲಿಯೂ ಸಂತೋಷದ ಚಿಹ್ನೆ ಇರಲಿಲ್ಲ. ನಿರಾಶೆಯೂ ನಿರುತ್ಸಾಹವೂ ಕಾಣಿಸುತಿತ್ತು.

"ನೀನು ಎಷ್ಟು ಸಂಪಾದಿಸಿದೆ?" ಎಂದು ದಾನಗುಪ್ತನು ತಮ್ಮನನ್ನು ಕೇಳಿದ. ಅದಕ್ಕೆ ಧನಗುಪ್ತನು "ಮೂವತ್ತುಸಾವಿರ ವರಹಗಳನ್ನು ಸಂಪಾದಿಸಿದೆ. ನೀನಾದರೂ ಲಕ್ಷ ವರಹ ಪೂರ್ಣ ಮಾಡಿಕೊಂಡು ಬಂದಿರುವಿಯಾ?" ಎಂದು ಕೇಳಿದ.

"ಇಲ್ಲ. ಎಂಬತ್ತುಸಾವಿರ ಸಂಪಾದಿಸುವಷ್ಟರಲ್ಲಿ ಬಹಳ ಕಷ್ಟವಾಯಿತು" ಎಂದ ದಾನಗುಪ್ತ. "ಹಾಗಾದರೆ ವಿಷ್ಣುಗುಪ್ತನು ಇಟ್ಟ ಪರೀಕ್ಷೆಯಲ್ಲಿ ನಾವಿಬ್ಬರೂ ಸೋತೆವು. ನಾವು ಪಟ್ಟ ಶ್ರಮವೆಲ್ಲಾ ವ್ಯರ್ಥವಾಗಿ ಹೋಯಿತು" ಎಂದು ಧನಗುಪ್ತ ನಿಟ್ಟುಸಿರು ಬಿಟ್ಟ.

"ಇಲ್ಲ, ವ್ಯರ್ಥವಾಗಲಿಲ್ಲ. ನಾನು ಹೇಳಿದಂತೆ ಮಾಡು. ನಿನ್ನ ಹತ್ತಿರ ಮೂವತ್ತುಸಾವಿರವಿದೆ ಯಷ್ಟೆ? ನಾನು ನಿನಗೆ ಎಪ್ಪತ್ತು ಸಾವಿರ ಕೊಟ್ಟು ಬಿಡುತ್ತೇನೆ. ಆ ಒಂದು ಲಕ್ಷವನ್ನು ತೆಗೆದುಕೊಂಡು ಹೋಗಿ ವಿಷ್ಣುಗುಪ್ತನಿಗೆ ಕೊಟ್ಟು ಕಮಲಾಕ್ಷಿಯನ್ನು ಮದುವೆಮಾಡಿಕೋ" ಎಂದ ದಾನಗುಪ್ತ.

"ಹಾಗಾದರೆ ನೀನು?" ಎಂದು ಧನಗುಪ್ತನು ಕೇಳಲು, "ನಾನು ಮನೆಗೆ ಬರಲಾರೆ. ಈ ಒಂದು ವರ್ಷದವರೆಗೆ ವ್ಯಾಪಾರ ಮಾಡಿದ ದೇಶಕ್ಕೇ ಹೋಗಿ ಅಲ್ಲೇ ಇರುತ್ತೇನೆ" ಎಂದು ಹೇಳಿದ ದಾನಗುಪ್ತ.

ಅವನು ತನ್ನ ಮಾತಿಗೆ ಧನಗುಪ್ತನನ್ನು ಒಪ್ಪಿಸಿ, ಅವನನ್ನು ಮನೆಗೆ ಕಳುಹಿಸಿ ತಾನು ಹಿಂದಿರುಗಿ ಹೊರಟುಹೋದನು.

ಧನಗುಪ್ತನು ಲಕ್ಷ ವರಹದೊಂದಿಗೆ ವಿಷ್ಣುಗುಪ್ತನ ಬಳಿಗೆ ತಿರುಗಿ ಬಂದು, ಅವನ ಮಗಳನ್ನು ಮದುವೆ ಯಾಗಿ ಸುಖವಾಗಿದ್ದನು.

ಬೇತಾಳವು ಹೀಗೆ ಕಥೆಯನ್ನು ಮುಗಿಸಿ, "ರಾಜಾ, ದಾನಗುಪ್ತನು ತಾನೇ ಹೆಚ್ಚು ಸಂಪಾದಿಸಿದ್ದು ಕೂಡಾ, ಕಮಲಾಕ್ಷಿಯನ್ನು ಮದುವೆಯಾಗಲು ತನ್ನ ತಮ್ಮ ನಿಗೇ ಏಕೆ ಸಹಾಯ ಮಾಡಿದ? ತಮ್ಮನ ಮೇಲಿನ ಪ್ರೇಮದಿಂದಲೊ? ಅಥವಾ ಅವನು ಹಾಗೆ ತ್ಯಾಗ ಮಾಡಲು ಪ್ರೇರೇಪಿಸಿದ್ದು ಯಾವುದು? ಈ ಪ್ರಶ್ನೆಗೆ ಸಮಾಧಾನ ತಿಳಿದು ಕೂಡಾ ಹೇಳದೆ ಹೋದರೆ ನಿನ್ನ ತಲೆ ಒಡೆದುಹೋಗುತ್ತದೆ" ಎಂದು ಎಚ್ಚರಿಸಿ ಸುಮ್ಮನಾಯಿತು.

ಅದಕ್ಕೆ ತ್ರಿವಿಕ್ರಮನು ಹೀಗೆಂದ: "ದೇವಗುಪ್ತನ ಕುಮಾರರಿಬ್ಬರೂ ಕಮಲಾಕ್ಷಿಯನ್ನು ಮದುವೆ ಯಾಗಲು ಬಯಸಿದ್ದು, ಅವಳ ತಂದೆಯು ಧನ ಸಹಾಯದಿಂದ ಕೋಟೀಶ್ವರರಾಗಬೇಕೆಂತಲೇ. ವಿಷ್ಣು ಗುಪ್ತನು ಅವರ ಸಂಪಾದನೆಯ ಶಕ್ತಿಗೆ ಪರೀಕ್ಷೆ ಇಟ್ಟಾಗ, ತಮ್ಮನಿಗಿಂತಲೂ ಅಣ್ಣನೇ ಹೆಚ್ಚಿನವನೆನಿಸಿ ದನು. ಆದುದರಿಂದ ಕಮಲಾಕ್ಷಿಯನ್ನು ಮದುವೆ ಯಾಗಿ ಧನಿಕನಾಗುವ ಅಗತ್ಯ ತಮ್ಮನಿಗೇ ಹೆಚ್ಚಿಗೆ ಇರುವುದು ಸ್ಪಷ್ಟವಾಯಿತು. ಅಣ್ಣ ತನ್ನ ಸ್ವಂತ ಶಕ್ತಿಯಿಂದಲೇ ಕೋಟೀಶ್ವರನಾಗಬಲ್ಲನೆಂಬುದೂ ರುಜುವಾಯಿತು. ಅವನು ಒಂದುವರ್ಷದಲ್ಲಿ ತನ್ನ ಮೂಲಧನವನ್ನು ಎಂಭತ್ತು ಪಾಲು ಹೆಚ್ಚಿಸಿ ಕೊಂಡನು. ಅಂತಹ ಶಕ್ತಿ ಇರುವವನು ಮೂರು ನಾಲ್ಕು ವರ್ಷಗಳಲ್ಲಿ ಕೋಟೀಶ್ವರನಾಗುವುದು ನಿಜ. ಆದುದರಿಂದಲೇ ಅವನು ತನ್ನ ಸಂಪಾದನೆಯನ್ನು ತಮ್ಮನಿಗೇ ಧಾರೆಯೆರೆದು ಕೊಟ್ಟನು."

ರಾಜನಿಗೆ ಹೀಗೆ ಮೌನಭಂಗವಾದ ಕೂಡಲೇ ಬೇತಾಳವು ಮಾಯವಾಗಿ ಹೋಗಿ ಮರದ ಕೊಂಬೆ ಯಲ್ಲಿ ನೇತಾಡಿತು.




ಯಾರು ಸನ್ಯಾಸಿ?


ಒಬ್ಬ ರಾಜನಿಗೆ ಸನ್ಯಾಸಿಗಳೆಂದರೆ ಬಹಳ ಭಕ್ತಿ. ಸಂಸಾರವನ್ನು ತ್ಯಜಿಸಿ ಮುಕ್ತಿ ಮಾರ್ಗದಲ್ಲಿ ನಡೆಯುತ್ತಿರುವ ಸನ್ಯಾಸಿಗಳು ಎಲ್ಲರಿಗಿಂತ ಹೆಚ್ಚಿನವರೆಂದು ಅವನ ವಿಶ್ವಾಸ. ಅಂತಹ ಸನ್ಯಾಸಿಗಳು ಭಿಕ್ಷಾಟನೆಯಿಂದ ಬದುಕುವುದು ಅವನಿಗೆ ಹಿಡಿಸಲಿಲ್ಲ. ಆದುದರಿಂದ ಅವನು ಒಂದುದಿನ ಮಂತ್ರಿಯನ್ನು ಕುರಿತು "ನಮ್ಮ ರಾಜ್ಯದಲ್ಲಿರುವ ಸನ್ಯಾಸಿಗಳಿಗೆಲ್ಲಾ ಒಬ್ಬೊಬ್ಬರಿಗೆ ಹತ್ತು ಸಾವಿರ ವರಹಗಳಂತೆ ಹಂಚಿ ಕೊಡಿರಿ. ಆಗ ಅವರು ಮುಕ್ತಿ ಮಾರ್ಗದಲ್ಲಿ ನಿಶ್ಚಿಂತೆಯಿಂದ ಸಾಗುವರು" ಎಂದನು.

ದೇಶದಲ್ಲಿ ಸನ್ಯಾಸಿಗಳಿಗೆ ಕೊರತೆ ಇರಲಿಲ್ಲ. ಅವರಿಗೆಲ್ಲ ತಲಾ ಹತ್ತುಸಾವಿರ ಕೊಟ್ಟು ಬಿಟ್ಟರೆ ಖಜಾನೆಯೇ ಖಾಲಿಯಾಗುತ್ತದೆ. ಆದರೂ ರಾಜನ ಮಾತಿಗೆ ಇದಿರಾಡಲಾರದೆ, "ಹಾಗೆಯೇ ಆಗಲಿ" ಎಂದು ಹೇಳಿ ಮಂತ್ರಿ ಹೊರಟುಹೋದನು.

ಮರುದಿನ ಸಭೆಯಲ್ಲಿ ರಾಜನು ಮಂತ್ರಿಯನ್ನು ಕುರಿತು, "ನಿನ್ನೆ ಹೇಳಿದ ಕೆಲಸ ನೆರವೇರಿಸಿ ದಿರಾ?" ಎಂದು ಕೇಳಿದ.

"ಕ್ಷಮಿಸಬೇಕು ಮಹಾರಾಜರೆ, ಸನ್ಯಾಸಿಯಾದವರಾರೂ ನನಗೆ ಕಾಣಿಸಲಿಲ್ಲ" ಎಂದ ಮಂತ್ರಿ. ಈ ಮಾತು ಕೇಳಿ ರಾಜನಿಗೆ ಆಶ್ಚರ್ಯವಾಯಿತು. "ಪ್ರಭುಗಳೇ, ನಿಜವಾದ ಸನ್ಯಾಸಿ ಹಣವನ್ನು ತುಚ್ಛವೆಂದು ತಿಳಿಯುತ್ತಾನೆ. ಹಣವನ್ನು ತೆಗೆದುಕೊಂಡವನು ಸನ್ಯಾಸಿಯೇ ಅಲ್ಲ, ಯಾರಿಗೆ ಕೊಡಲಿ?" ಎಂದ ಮಂತ್ರಿ.





ಅಬೂ-ಕೀರ್ ಸೀರ್


೨

...ಥವಾಗಿ ನಲುವತ್ತು ದಿನಗಳು ಕಳೆದುವು. ...ಗೆ ಹಿಡಿದ ಪಿತ್ಥವಿಕಾರವು ಇನ್ನೂ ತಗ್ಗಲಿಲ್ಲವೆಂದು ... ಅಬೂಕೀರ್ ಮಲಗಿದ ಹಾಗೇ ದಿನಗಳನ್ನು ... ಅಬೂಸೀರ್ ಅವನನ್ನು ಮೇಯಿಸಿಕೊಂಡೇ ... ಅಬೂಕೀರ್ ಎರಡು ಹೊತ್ತು ಹೊಟ್ಟೆ ... ಜಡಿದುಕೊಂಡೇ ಇದ್ದ. ಅಬೂಸೀರ್ ...ಗೆ ಉತ್ಸಾಹ ಬರಲಿಕ್ಕಾಗಿ "ನಗರವು ... ಸುಂದರವಾಗಿದೆ ಗೊತ್ತೆ? ಅದನ್ನು ...ದಿರುವವನ ಜನ್ಮ ವೃಥಾ" ಎಂದು ಹೇಳಿದರೆ ...ಕೀರ್ ತನ್ನ ಪಿತ್ಥವಿಕಾರವನ್ನು ಕುರಿತು ಹೇಳಿ ... ಸಾಧ್ಯವಿಲ್ಲದೆ ಮಲಗಿ ನಿದ್ದೆ ಮಾಡಿ ...ರುವನು.

...ದಿನಗಳವರೆಗೂ ಅಬೂಸೀರ್ ತನ್ನ ಮಿತ್ರ ... ಮನಸ್ಸಿನಲ್ಲಿ ಕೂಡಾ ರವಷ್ಟೂ ನಿಂದಿಸುವ ... ಹೋಗಿರಲಿಲ್ಲ.

...ಗಿರುವಾಗ ಅಬೂಸೀರನಿಗೆ ಕಾಯಿಲೆ ಬಂತು. ... ಕೆಲಸಕ್ಕೆ ಹೋಗಲು ಅವನಿಗಾಗಲಿಲ್ಲ. ... ಅಬೂಕೀರನಿಗೆ ಆಹಾರ ತಂದು ಕೊಡುವಂತೆ ಸತ್ರದ ದರ್ವಾನನೊಂದಿಗೆ ಕೇಳಿಕೊಂಡ ಅಬೂಸೀರ್. ಕೆಲವು ದಿನಗಳಲ್ಲಿ ಅಬೂಸೀರನ ರೋಗ ಬೆಳೆಯಿತು. ಅವನು ನಿಶ್ಶಕ್ತಿಯಿಂದ ಮೈಮರೆತ ಸ್ಥಿತಿಯಲ್ಲಿ ಶವದ ಹಾಗೇ ಬಿದ್ದುಕೊಂಡಿದ್ದ. ಆಗ ಹಸಿವೆಯು ಬೆಂಕಿ ಅಬೂಕೀರನನ್ನು ಮಲಗಿದಲ್ಲಿಂದ ಎಬ್ಬಿಸಿತು. ಅವನು ಎದ್ದು ತಿನ್ನಲಿಕ್ಕೆ ಏನಾದರೂ ಇದೆಯೋ ಎಂದು ಕೋಣೆಯೊಳಗೆಲ್ಲಾ ಹುಡುಕಿದ. ಏನೂ ಸಿಗಲಿಲ್ಲ. ಅಬೂಸೀರನ ದುಸ್ತುಗಳನ್ನು ಶೋಧಿಸುವಾಗ ಅವನ ಹಣದ ಚೀಲ ಸಿಕ್ಕಿತು. ಅದು ಅಬೂಸೀರ್ ಬೆವರು ಸುರಿಸಿ ಕೂಡ ಹಾಕಿದ ಕಷ್ಟಾರ್ಜಿತದ ಧನವಾಗಿತ್ತು.

ಅಬೂಕೀರ್ ಆ ಚೀಲವನ್ನು ಟೊಂಕದಲ್ಲಿ ತುರುಕಿಕೊಂಡು, ಅಬೂಸೀರನ ಗತಿ ಹೇಗಾಗುವುದೆಂಬ ಯಾವ ಯೋಚನೆಯೂ ಇಲ್ಲದೆ ಕೋಣೆಯ ಬಾಗಿಲು ತೆರೆದು, ಹೊರಗಿನಿಂದ ಚಿಲಕ ಹಾಕಿ ಎತ್ತಲೋ ಹೊರಟನು. ಅವನು ಹೊರಟು ಹೋಗುವುದನ್ನು ಸತ್ರದ ದರ್ವಾನನು ನೋಡಲಿಲ್ಲ. ಅಬೂಕೀರ್ ನೆಟ್ಟಗೆ ಆಹಾರ ಪದಾರ್ಥಗಳನ್ನು



ಮಾರುವ ಅಂಗಡಿಗೆ ಹೋಗಿ, ಹೊಟ್ಟೆ ತುಂಬಾ ತಿಂದು ಕುಡಿದು, ಜವುಳಿ ಅಂಗಡಿಗೆ ಹೋಗಿ ಒಳ್ಳೆಯ ಬಟ್ಟೆಗಳನ್ನೂ, ಅಂಗಿಗಳನ್ನೂ ಕೊಂಡುಕೊಂಡು, ಅವು ಗಳನ್ನು ಧರಿಸಿ ಹೊರಟನು. ಅವನು ಸುಮ್ಮನೆ ನಗರದ ಬೀದಿಗಳ ಎರಡು ಬದಿಗಳಲ್ಲಿ ಕಾಣಿಸುವ ವಿಚಿತ್ರಗಳನ್ನು ನೋಡಿ ಆನಂದಿಸುತ್ತಾ ನಡೆಯು ತ್ತಿದ್ದನು. ಅವನಿಗೆ ಆ ನಗರದಲ್ಲಿ ಕಣ್ಣಿಗೆ ಹೊಡೆಯು ವಂತೆ ಕಾಣಿಸಿದ ವಿಚಿತ್ರವೇನೆಂದರೆ, ಯಾರನ್ನು ನೋಡಿದರೂ ಒಂದೇ ಬಿಳೀ ದುಸ್ತು ಧರಿಸಿದವರು, ಇಲ್ಲವೇ ನೀಲ ದುಸ್ತು ಧರಿಸಿದವರು. ಬಣ್ಣದ ಬಟ್ಟೆ ಎಂದರೆ ನೀಲ ಬಣ್ಣವೇ. ಎಷ್ಟೋಕಡೆ ನಡೆದರೂ ಅವೆರಡು ಬಣ್ಣಗಳ ಹೊರತು ಬೇರೆ ಬಣ್ಣ ಕಾಣಿಸಲೇ ಇಲ್ಲ. ಅವನಿಗೆ ಆಶ್ಚರ್ಯವಾಗಲು ತೊಡಗಿತು.

ಜವುಳಿ ಅಂಗಡಿಗಳಲ್ಲಿಯೂ ನೀಲ ಅಥವಾ ಬಿಳಿಯ ಬಣ್ಣಗಳ ಬಟ್ಟೆಗಳ ಹೊರತು ಬೇರೆ ಬಣ್ಣ ದವು ಇಲ್ಲವೇ ಇಲ್ಲ. ಅಬೂಕೀರ್ ಒಬ್ಬ ರಂಗಾರಿಯ ಅಂಗಡಿಯೊಳಗೆ ಬಾಗಿ ನೋಡಿದ. ಆ ಅಂಗ ಯೊಳಗಿನ ತೊಟ್ಟಿಗಳಲ್ಲೆಲ್ಲಾ ಒಂದೇ ಬಗೆಯ ನೀ ಬಣ್ಣವೇ ಅವನಿಗೆ ಕಾಣಿಸಿತು.

ಅಬೂಕೀರ್ ಆ ಅಂಗಡಿಯೊಳಗೆ ಹೊಕ್ಕು, ತ ಕೈವಸ್ತ್ರವನ್ನು ಅವನಿಗೆ ತೋರಿಸಿ "ಅಯ್ಯಾ, ಇದ ಬಣ್ಣ ಹಾಕಲು ಎಷ್ಟು ತೆಗೆದು ಕೊಳ್ಳುವಿ ಯಾವ ಬಣ್ಣ ಹಾಕುವಿರಿ ?" ಎಂದು ಕೇಳಿದ.

"ಯಾವ ಬಣ್ಣವೆಂದರೇನು ? ನೀಲ ಹಾಕುತ್ತೇ ಇದಕ್ಕೆ ಇಪ್ಪತ್ತು ದಿರಾಂ ತೆಗೆದುಕೊಳ್ಳುತ್ತೇ ಎಂದ ಬಣ್ಣದ ಅಂಗಡಿಯವ.

"ಏನಿದು ? ಈ ಒಂದು ಚೂರು ವಸ್ತ್ರಕ್ಕೆ ನೀ ಬಣ್ಣ ಹಾಕಲಿಕ್ಕೆ ಇಪ್ಪತ್ತು ದಿರಾಂಗಳೋ ? ನ ದೇಶದಲ್ಲಿ ಇದಕ್ಕೆ ಅರ್ಧ ದಿರಾಂಗಿಂತ ಹೆಚ್ಚು ಕೊ ವುದೇ ಇಲ್ಲ" ಎಂದ ಅಬೂಕೀರ್ ಅತ್ಯಾಶ್ಚರ್ಯದಿಂ

"ಹಾಗಾದರೆ ನಿಮ್ಮ ದೇಶದಲ್ಲೇ ಬ ಹಾಕಿಸಿಕೋ. ಯಾರು ಬೇಡಾಂದರು ? ಈ ದೇ ದಲ್ಲಿ ಇಪ್ಪತ್ತು ದಿರಾಂ ಕಡಮೆಗೆ ಬಣ್ಣದ ಕೆಲಸ ಇಲ್ಲ" ಎಂದ ಅಂಗಡಿಯವ.

"ಸರಿ. ನೀನು ಕೇಳಿದಷ್ಟೇ ಕೊಡುತ್ತೇನೆ. ಕೈವಸ್ತ್ರಕ್ಕೆ ಕೆಂಪು ಬಣ್ಣ ಹಾಕು" ಎಂದ ಅಬೂಕೀ

"ಕೆಂಪು ಬಣ್ಣ ಅಂದರೇನದು ? ಅಂತಹ ಬ ಎಲ್ಲಿದೆ ?" ಎಂದ ಅಂಗಡಿಯವ.

"ಹೋಗಲಿ, ಹಸಿರು ಬಣ್ಣ ಹಾಕು ಹಾಗಾದ ಎಂದ ಅಬೂಕೀರ್.

"ಹಸಿರುಬಣ್ಣವೆ ? ಅದೆಲ್ಲಿದೆ ? ನಾನು ಅ ರನ್ನೇ ಕೇಳಲಿಲ್ಲ" ಎಂದ ಅಂಗಡಿಯವ.

ಅಬೂಕೀರ್ ತನಗೆ ತಿಳಿದಿರುವ ಬಣ್ಣಗಳ ರನ್ನೆಲ್ಲಾ ಹೇಳಿದ. ಆ ಹೆಸರುಗಳಲ್ಲಿ ಒಂದನ್ನು ಕೂ ಆ ರಂಗಾರಿ ಅರಿಯನೆಂಬುದು ಸ್ಪಷ್ಟವಾಯ ಇನ್ನೂ ಸ್ಪಷ್ಟ ಪಡಿಸಿಕೊಳ್ಳೋಣವೆಂದುಕೊಂ "ಹೋಗಲಿ, ನಾನು ಹೇಳಿದ ಬಣ್ಣಗಳ

ವವರು ಬೇರೆ ಯಾರಾದರೂ ಈ ನಗರದಲ್ಲಿ ಇರುವರೇನು ?" ಎಂದು ಅಬೂಕೀರ್ ಕೇಳಿದ.

"ಈ ನಗರದಲ್ಲಿ ರಂಗಾರಿಗಳಾಗಿ ಕೆಲಸ ಮಾಡುವ ಒಟ್ಟು ನಲುವತ್ತು ಮಂದಿ ಇದ್ದೇವೆ. ನಾವೆಲ್ಲಾ ಸಂಘವಾಗಿ ಸೇರಿದವರು. ನಮ್ಮ ಹೊರತು ಯಾರೂ ರಂಗುಗಾರಿಕೆ ಮಾಡಲು ಸಾಧ್ಯವಿಲ್ಲ. ನಮಗೇ ವಂಶ ಪರಂಪರೆಯಾಗಿ ಬಂದ ವಿದ್ಯೆ. ಹೊಸಬರಿಗೆ ಹೇಳಿ ಕೊಡಲಾರೆವು. ಬಟ್ಟೆಗಳಿಗೆ ನೀಲಿ ಬಣ್ಣವನ್ನೇ ಹಾಕು... ಬಣ್ಣವೆಂದರೆ ನೀಲಿಬಣ್ಣವೆಂದು ಅರ್ಥ" ಅಂಗಡಿಯ ರಂಗಾರೀ ಅಬೂಕೀರನೊಂದಿಗೆ ತಿಳಿಸಿ ಹೇಳಿದ.

ಆಗ ಅಬೂಕೀರ್ ಅವನನ್ನು ನೋಡಿ, "ಅಯ್ಯಾ, ಕೆಲಸಕ್ಕೆ ತೆಗೆದುಕೋ. ನಾನೂ ರಂಗಾರೀ ಸೇರಿದವನೇ. ಯಾವ ಬಣ್ಣ ಬೇಕೋ ಆ ಹಾಕುವ ರಹಸ್ಯಗಳನ್ನೆಲ್ಲ ನಿನಗೆ ಹೇಳಿ ಕೊಡು... ನೀನು ಉಳಿದವರನ್ನೆಲ್ಲಾ ಲೀಲಾ ಜಾಲವಾಗಿ ಬಿಡಬಹುದು. ಬಹಳ ದೊಡ್ಡ ಹೆಸರೂ ಬರುತ್ತದೆ" ಎಂದನು.

"ಅದೆಲ್ಲಾ ಹೇಗೆ ಬೇಕಾದರೂ ಇರಲಿ. ನಾವು ...ಯವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದೇ ಇಲ್ಲ" ಆ ಅಂಗಡಿಯವ.

"ನಾನೇ ಸ್ವಂತವಾಗಿ ರಂಗಾರೀ ಅಂಗಡಿ ತೆರೆದರೆ ...ಗುತ್ತದೆ ?" ಎಂದು ಕೇಳಿದ ಅಬೂಕೀರ್.

"ಅದು ನಿನ್ನಿಂದ ಸಾಧ್ಯವಿಲ್ಲ" ಎಂದ ಅಂಗಡಿ ಖಂಡಿತ ಸ್ವರದಲ್ಲಿ.

ಅಬೂಕೀರ್ ಮತ್ತೇನೂ ಹೇಳದೆ ಆ ಅಂಗಡಿ ಹೊರಟು, ಮತ್ತೆ ಕೆಲವು ರಂಗಾರೀ ಅಂಗಡಿ ವಿಚಾರಿಸಿದ. ಎಲ್ಲಿಗೆ ಹೋದರೂ ಯಾರೂ ಕೆಲಸಕ್ಕಿಟ್ಟು ಕೊಳ್ಳುವುದಕ್ಕೆ ಒಪ್ಪಲಿಲ್ಲ. ಅವನು ರಂಗಾರೀ ಸಂಘದ ಮುಖ್ಯಸ್ಥನ



ಬಳಿಗೇ ಹೋಗಿ ತನ್ನ ಹಾಲಹವಾಲನ್ನು ಹೇಳಿದನು. ಅವನು ಹೇಳಿದುದನ್ನು ಕೇಳಿ ಆ ಮುಖ್ಯಸ್ಥ, "ನಾನುಮಾತ್ರ ಏನು ಮಾಡಲಿ ? ಬೇರೆಯವರನ್ನು ನಮ್ಮ ವೃತ್ತಿಯಲ್ಲಿ ಸೇರಿಸಿ ಕೊಳ್ಳುವುದು ನಮ್ಮ ಆಚಾರ ಪದ್ಧತಿಗಳಿಗೆ ವಿರುದ್ಧ. ಅದು ಎಂದಿಗೂ ಸಾಧ್ಯವಾಗದು" ಎಂದು ಹೇಳಿಬಿಟ್ಟ.

ಅಬೂಕೀರನ ಹೊಟ್ಟೆಯೊಳಗೆ ಕೋಪದ ಬೆಂಕಿ ಎದ್ದಿತು. ಅವನು ನೆಟ್ಟಗೆ ಆ ದೇಶದ ರಾಜನ ಬಳಿಗೆ ಹೋಗಿ, "ಮಹಾ ಪ್ರಭುಗಳೇ, ನಾನು ರಂಗಾರಿ, ಬಣ್ಣಗಾರ ಕೆಲಸದವ, ಪರದೇಶಿ. ನಾನು ನಿಮ್ಮ ಬಣ್ಣಗಾರರ ಹಾಗೆ ಬಟ್ಟೆಗಳಿಗೆ ಒಂದೇಬಗೆಯ ಬಣ್ಣವನ್ನು ಹಾಕುವವನಲ್ಲ. ನಿಜವಾದ ಬಣ್ಣಗಾರ ನಾನು. ನಲುವತ್ತು ಬಣ್ಣಗಳನ್ನು ಹಾಕಬಲ್ಲೆ. ಆದರೂ ತಮ್ಮ ನಗರದಲ್ಲಿರುವ ರಂಗಾರಿಗಳು ನನಗೆ ತಮ್ಮ ವೃತ್ತಿಯಲ್ಲಿ ಸ್ಥಳವಿಲ್ಲದಂತೆ ಮಾಡಿದ್ದಾರೆ. ಅವರಿಗೆಲ್ಲ ನೀಲಬಣ್ಣ ಒಂದರಹೊರತು ಬೇರೊಂದು



ಬಣ್ಣವೇ ಗೊತ್ತಿಲ್ಲ. ನಾನು ಯಾವ ಬಟ್ಟೆಗೆ ಬೇಕಾದರೂ ಅನೇಕ ಬಗೆಯ ಕೆಂಪು, ಹಳದಿ, ಹಸಿರು ಮುಂತಾದ ಬಣ್ಣಗಳನ್ನು ಹಾಕಬಲ್ಲೆ" ಎಂದು ತನ್ನ ಗೋಳನ್ನು ಹೇಳಿಕೊಂಡನು.

ಅಬೂಕೀರ್ ಹೇಳಿದ ಬಣ್ಣಗಳ ಪಟ್ಟಿಯನ್ನು ಕೇಳಿ, ರಾಜನು ದಿಗ್ಭ್ರಮೆಗೊಂಡು, "ನೀನು ಬಟ್ಟೆಗಳಿಗೆ ಇಷ್ಟೆಲ್ಲಾ ಬಣ್ಣಗಳನ್ನು ಹಾಕುವವನು ನಿಜವೇ ಆದರೆ, ನಿನಗೆ ಬೇಕಾದಷ್ಟು ಹಣ ನಾನೇ ಕೊಟ್ಟು ರಂಗಾರೀ ಅಂಗಡಿ ತೆರೆಯಿಸುತ್ತೇನೆ. ನಗರದೊಳಗಿನ ರಂಗಾರಿಗಳ ಗೊಡವೆಯೇ ನಿನಗೆ ಬೇಡ. ಅವರೊಳಗೆ ಯಾವನಾದರೂ ನಿನ್ನ ಗೊಡವೆಗೆ ಬಂದರೆ ಅವನನ್ನು ಅವನ ಅಂಗಡಿಯ ಮುಂದೆಯೇ ಉರುಳು ಹಾಕಿಸಿ ಬಿಡುತ್ತೇನೆ. ಧೈರ್ಯದಿಂದ ನಿನ್ನ ಕೆಲಸ ಸಾಗಿಸು" ಎಂದು ಆಶ್ರಯವಿತ್ತನು.

ಬಳಿಕ ರಾಜನು ತನ್ನ ಆಸ್ಥಾನ ವಾಸ್ತು ಪ್ರವೀಣರನ್ನು ಕರೆಯಿಸಿ "ನೀವು ಇವನ ಹಿಂದೆ ಹೋಗಿ, ಇವನು ಆರಿಸಿದ ಪ್ರದೇಶದಲ್ಲಿ ಎಂತಹ ಭವನವಿದ್ದರೂ ಸರಿ, ತೋಟವಿದ್ದರೂ ಸರಿ, ಅದನ್ನೆಲ್ಲಾ ನೆಲಮಟ್ಟ ಮಾಡಿ ಅಲ್ಲಿ ಒಂದು ರಂಗಾರೀ ಕಾರಖಾನೆಯನ್ನು ನಿರ್ಮಿಸಿರಿ. ಅದರಲ್ಲಿ ನಲುವತ್ತು ದೊಡ್ಡ ತೊಟ್ಟಿಗಳೂ, ನಲುವತ್ತು ಚಿಕ್ಕ ತೊಟ್ಟಿಗಳೂ ಇರುವುದಕ್ಕೆ ಅವಕಾಶವಿರಲಿ. ಇವನು ಏನು ಹೇಳುವನೋ ಅದನ್ನೆಲ್ಲಾ ಸ್ವಲ್ಪವೂ ತಪ್ಪಿಲ್ಲದಂತೆ ಮಾಡಿಸಿ ಕೊಡತಕ್ಕದ್ದು" ಎಂದು ಆಜ್ಞೆ ಮಾಡಿದನು. ಬೇಕಾದಷ್ಟು ಧನಕ್ಕೂ ಅಪ್ಪಣೆ ಕೊಟ್ಟನು.

ತರುವಾಯ ರಾಜನು ಅಬೂಕೀರನನ್ನು ಹೊಸ ಶಾಲುವೆಗಳಿಂದ ಸತ್ಕಾರ ಮಾಡಿ, ಸಾವಿರ ದಿನಾರಗಳನ್ನೂ, ಇಬ್ಬರು ಹುಡುಗರನ್ನೂ ಕೊಟ್ಟು, "ಈ ಹುಡುಗರನ್ನು ನಿನ್ನ ಸ್ವಂತ ಕೆಲಸ ಕಾರ್ಯಗಳಿಗೆ ಇಟ್ಟುಕೋ. ಈ ಹಣ ನಿನ್ನ ಕಾರಖಾನೆ ತಯಾರಾಗುವವರೆಗೆ ನಿನ್ನ ಖರ್ಚುಗಳಿಗೆ ಇಟ್ಟುಕೊ" ಎಂದನು. ಅಬೂಕೀರ್ ವಾಸಮಾಡಲು ಒಳ್ಳೆಯ ಭವನವನ್ನೂ ಅನೇಕಮಂದಿ ಗುಲಾಮರನ್ನೂ ಕೊಟ್ಟನು. ಅವನು ಊರು ತಿರುಗಾಡಲು ಒಳ್ಳೆಯದೊಂದು ಕುದುರೆಯನ್ನೂ ಕೊಟ್ಟನು. ಹೀಗೆ ರಾಜನ ಕೃಪೆಯಿಂದ ನಿಮಿಷಮಾತ್ರದಲ್ಲಿ ಅಬೂಕೀರ್ ದೊಡ್ಡ ಧನಿಕನಾದನು.

ಮರುದಿನ ಅಬೂಕೀರ್ ಮಿರುಮಿರುಗುವ ಚಮ್ಕೀ ದುಸ್ತುಗಳನ್ನು ಧರಿಸಿ ದೊಡ್ಡ ಅಮೀರನ ಹಾಗೆ ಕುದುರೆಯ ಮೇಲೇರಿಕೊಂಡು ಊರೊಳಗೆ ಹೋದನು. ಅವನ ಸ್ವಂತ ಸೇವಕ ಹುಡುಗರೂ, ವಾಸ್ತು ಪ್ರವೀಣರೂ, ಇತರ ಆಳುಗಳೂ ಅವನ ಮುಂದಿನಿಂದ ನಡೆಯುತ್ತಿದ್ದರು.

ಅಬೂಕೀರ್ ಬೀದಿಗಳಲ್ಲೆಲ್ಲಾ ತಿರುಗಾಡಿ ಕಡೆಗೆ ವರ್ತಕರ ಪೇಟೆಯ ಮಧ್ಯದಲ್ಲಿರುವ ದೊಡ್ಡದೊಂದು ಅಂಗಡಿ ಪ್ರದೇಶವನ್ನು ಆರಿಸಿಕೊಂಡನು. ಕೂಡಲೇ ರಾಜ ಸೇವಕರು ಆ ಪ್ರದೇಶದವರನ್ನು


ಅಲ್ಲಿಂದ ಹೊರಡಿಸಿ, ಕೆಲಸವನ್ನು ಭರದಿಂದ ಪ್ರಾರಂಭಿಸಿದರು. ಒಂದು ಬದಿಯಿಂದ ಹಳೆಯ ಗೋಡೆಗಳನ್ನು ಉರುಳಿಸಿ ಹೊಸದಾಗಿ ಗೋಡೆಗಳನ್ನು ಕಟ್ಟಲು ತೊಡಗಿದರು.

ಅಬೂಕೀರ್ ಕುದುರೆಯ ಮೇಲೆ ಕುಳಿತುಕೊಂಡೇ "ಇಲ್ಲಿ ಹೀಗೆ ಕಟ್ಟಿ, ಅಲ್ಲಿ ಹಾಗೆ ಕಟ್ಟಿ" ಎಂದು ಕೆಲಸಗಾರರಿಗೆ ಹೇಳಿ ಮಾಡಿಸುತ್ತಿದ್ದನು. ಕೆಲವೇ ದಿನಗಳಲ್ಲಿ ಪ್ರಪಂಚದಲ್ಲೇ ಇಂತಹುದು ಬೇರೊಂದು ಇಲ್ಲವೆಂಬಂತೆ ರಂಗಾರೀ ಕಾರ್ಖಾನೆಯೊಂದು ತಯಾರಾಯಿತು.

ಆಗ ರಾಜನು ಅಬೂಕೀರನ್ನು ಕರೆಯಿಸಿ, "ಇನ್ನು ನೀನು ಕೆಲಸವನ್ನು ಪ್ರಾರಂಭ ಮಾಡು. ಅದಕ್ಕಾಗಿ ನಿನಗೆ ಹಣ ಬೇಕಾದೀತು. ಪ್ರಸ್ತುತ ಈ ಐದು ಸಾವಿರ ದೀನಾರಗಳನ್ನು ತೆಗೆದುಕೋ. ನಿನ್ನ ನಲುವತ್ತು ಬಗೆಯ ಬಣ್ಣಗಾರಿಕೆಯ ಜಾಣತನವನ್ನು ನೋಡಬೇಕೆಂದು ನಾನು ಆತುರದಲ್ಲಿದ್ದೇನೆಂಬುದನ್ನು ಮರೆಯಬೇಡ" ಎಂದನು.

ಅಬೂಕೀರ್ ರಾಜನು ಕೊಟ್ಟ ಹಣವನ್ನು ತನ್ನ ಮನೆಯಲ್ಲಿ ಅಡಗಿಸಿಟ್ಟು, ಸ್ವಲ್ಪ ಚಿಲ್ಲರೆ ಹಣದಿಂದ ತನಗೆ ಬೇಕಾದ ಮದ್ದುಗಳನ್ನು ಅಂಗಡಿಗಳಲ್ಲಿ ಬಹಳ ಅಗ್ಗಕ್ಕೆ ಕೊಂಡುಕೊಂಡು, ಎಲ್ಲಾ ತೊಟ್ಟಿಗಳಲ್ಲಿಯೂ ಅನೇಕ ಬಣ್ಣಗಳನ್ನು ಕಲಸಿಟ್ಟನು.

ರಾಜನು ಅವನಬಳಿಗೆ ಹತ್ತಿ ನೂಲಿನದೂ, ಪಟ್ಟೆಯದೂ, ಉಣ್ಣೆಯದೂ ಐನೂರು ಬಟ್ಟೆ ಥಾನುಗಳನ್ನು ಕಳುಹಿಸಿದನು. ಅಬೂಕೀರ್ ಅವುಗಳಲ್ಲಿ ಕೆಲವಕ್ಕೆ ಪ್ರತ್ಯೇಕವಾದ ಬಣ್ಣಗಳನ್ನೂ, ಮತ್ತೆ ಕೆಲವಕ್ಕೆ ಮಿಶ್ರಬಣ್ಣಗಳನ್ನೂ ಹಾಕಿ, ಯಾವ ಎರಡು ಬಟ್ಟೆಗಳೂ ಒಂದೇ ಬಣ್ಣದಲ್ಲಿ ಕಾಣದಂತೆ ನೋಡಿಕೊಂಡು, ತನ್ನ ಕಾರಖಾನೆಯ ಹೊರಗೆ ಬೀದಿಯುದ್ದಕ್ಕೂ ಆರಲು ಹಾಕಿದನು. ಬಿಸಿಲಿನಲ್ಲಿ ಅವುಗಳೆಲ್ಲ ಬಣ್ಣಗಳ ತೋರಣಗಳಂತೆ ಬಹಳ ಸುಂದರವಾಗಿ ಹೊಳೆದು ಕಾಣಿಸುತ್ತಿದ್ದುವು. ಆ ದೇಶದವರಿಗೆ ಅದೊಂದು ಅದ್ಭುತವಾದ ದೃಶ್ಯವಾಯಿತು. ಈ ಹೊಸ ದೃಶ್ಯವನ್ನು ನೋಡಲು ನಗರವಾಸಿಗಳು ಬಹಳ ಕುತೂಹಲ




ದಿಂದ ತಂಡೋಪತಂಡವಾಗಿ ಬರತೊಡಗಿದರು. ವರ್ತಕರು ತಮ್ಮ ಅಂಗಡಿಗಳನ್ನು ಮುಚ್ಚಿ ಬೀಗ ಹಾಕಿ ಇದನ್ನು ನೋಡಲು ಬಂದರು. ಮಕ್ಕಳೂ ಹೆಂಗಸರೂ ಆ ಬಣ್ಣಬಣ್ಣದ ಬಟ್ಟೆಗಳನ್ನು ನೋಡಿ ಆನಂದೋದ್ರೇಕವನ್ನು ತಾಳಲಾರದೆ ಕೇಕೇ ಹಾಕಿದರು. ಅನೇಕಮಂದಿ ಅಬೂಕೀರನ ಹತ್ತಿರ ಬೇರೆಬೇರೆ ಬಣ್ಣಗಳ ಹೆಸರನ್ನು ಕೇಳಿ ಹೇಳಿಸಿಕೊಂಡರು. ನೆನಪಿಗಾಗಿ ಕೆಲವರು ಬರೆದುಕೊಂಡರು. ಬೀದಿಗಳಲ್ಲಿ ಎಲ್ಲಿ ನೋಡಿದರೂ ಬಣ್ಣದ ಮಾತುಗಳೇ.


ಹೀಗೆ ಜನರು ಮಾಡುವ ಕೋಲಾಹಲವು ಬಹಳ ಜೋರಾಗಿರಲು, ರಾಜನು ಸ್ವತಃ ಅದನ್ನು ನೋಡಲು ಬಂದನು. ಬಿಸಿಲಿನಲ್ಲಿ ನೇತ್ರಾನಂದಕರವಾಗಿ ಬಣ್ಣಗಳ ತೋರಣಗಳಂತೆ ಕಾಣುವ ಬಗೆಬಗೆಯ ಬಟ್ಟೆಗಳನ್ನು ನೋಡಿ, ಬಹಳ ಹೊತ್ತು ಸ್ತಂಭಿತನಾಗಿ ನಿಂತುಬಿಟ್ಟ ಆ ರಾಜ. ಬಣ್ಣಗಾರನ ಮಹತ್ವವನ್ನು ಊಹಿಸಲೂ ಅವನಿಗಾಗಲಿಲ್ಲ.

ಇಷ್ಟೊಂದು ಜಾಣನಾಗಿರುವ ಈ ಬಣ್ಣಗಾರರ ಅರಸನಿಗೆ ಹೇಗೆ ಮರ್ಯಾದೆ ಮಾಡಬೇಕೆಂದು ತಿಳಿಯದೆ ರಾಜನು ಮೂಢನಾದನು.

ಸ್ವಲ್ಪ ಹೊತ್ತಿನ ಮೇಲೆ ರಾಜನು ತನ್ನ ವಜೀರನನ್ನು ಅವನ ಕುದುರೆಯಿಂದ ಇಳಿಯಲು ಹೇಳಿ, ಅದರ ಮೇಲೆ ಅಬೂಕೀರನನ್ನು ಕುಳ್ಳಿರಿಸಿದನು. ತರುವಾಯ ಅವನು ಬಣ್ಣದ ಬಟ್ಟೆಗಳನ್ನೆಲ್ಲಾ ಕಟ್ಟಿಸಿಕೊಂಡು ಅಬೂಕೀರನನ್ನೂ ತನ್ನೊಂದಿಗೆ ಕರೆದುಕೊಂಡು ತನ್ನ ಮನೆಗೆ ಹೋದನು. ಅಲ್ಲಿ ರಾಜನು ಅಬೂಕೀರನಿಗೆ ಚಿನ್ನವನ್ನೂ, ವಿಶೇಷವಾದ ಅಧಿಕಾರಗಳನ್ನೂ ಕೊಟ್ಟು, ಗೌರವಿಸಿ ಔತಣ ಹಾಕಿಸಿ ಕಳುಹಿಸಿಕೊಟ್ಟನು. ಆಮೇಲೆ ರಾಜನು ತನಗೂ, ತನ್ನ ಹೆಂಡಂದಿರಿಗೂ, ಇತರ ಉದ್ಯೋಗಿಗಳಿಗೂ ಅನೇಕ ದುಸ್ತುಗಳನ್ನು ತಯಾರು ಮಾಡಿಸಿ, ಒಟ್ಟು ಒಂದು ಸಾವಿರ ಥಾನುಗಳಿಗೆ ಬಣ್ಣ ಹಾಕಿಸಲು ಅಬೂಕೀರನ ಕಾರಖಾನೆಗೆ ಕಳುಹಿಸಿದನು.

ಸ್ವಲ್ಪಕಾಲ ಕಳೆಯಲು ನಗರದೊಳಗಿನ ಅನೇಕ ದೊಡ್ಡದೊಡ್ಡ ಮನುಷ್ಯರು ಬೇರೆಬೇರೆ ಬಣ್ಣಗಳ ದುಸ್ತುಗಳೊಂದಿಗೆ ಕಾಣಿಸಿದರು. ಆಸ್ಥಾನದ ರಂಗಾರಿಯಾದ ಅಬೂಕೀರ್ ನಗರದೊಳಗೆಲ್ಲಾ ದೊಡ್ಡ ಧನವಂತನೆನಿಸಿದನು. ನಗರದೊಳಗಿನ ನಲುವತ್ತು ಮಂದಿ ರಂಗಾರಿಗಳೂ ಅವನಬಳಿಗೆ ಬಂದು ಕ್ಷಮಾಪಣೆ ಕೇಳಿಕೊಂಡು, ತಮ್ಮನ್ನು ಸಂಬಳವಿಲ್ಲದೆ ಕೆಲಸ ಕಲಿಯುವವರನ್ನಾಗಿ ಸೇರಿಸಿಕೊಳ್ಳಬೇಕೆಂದು ಪ್ರಾರ್ಥಿಸಿದರು. ಆದರೆ ಅಬೂಕೀರ್ ಅವರನ್ನೆಲ್ಲಾ ಅವಮಾನಪಡಿಸಿ ಕಳುಹಿಸಿಬಿಟ್ಟನು. ಕಾಲಕ್ರಮದಲ್ಲಿ ನಗರದಲ್ಲಿ ಎಲ್ಲಿ ನೋಡಿದರೂ ಬಣ್ಣಬಣ್ಣದ ಉಡುಗೆ ತೊಡುಗೆಗಳವರೇ ಕಾಣಿಸ ತೊಡಗಿದರು. —(ಇನ್ನೂ ಇದೆ)





ವಿಚಿತ್ರ ಘಟನೆ

ಪೂರ್ವಕಾಲದಲ್ಲಿ ಮಣಿಪುರವೆಂಬ ದೇಶದ ಚಂದ್ರಸೇನನೆಂಬ ರಾಜನಿಗೆ, ಒಬ್ಬಳು ಮಗಳು ಮಾತ್ರವೇ ಇದ್ದಳು. ಅವಳ ಹೆಸರು ಚಂದ್ರಮುಖಿ. ಅವಳು ಚಿಕ್ಕ ಮಗುವಾಗಿರುವಾಗಲೇ ತಾಯಿ ತೀರಿಹೋಗಿದ್ದಳು. ಆದುದರಿಂದ ರಾಜನು ಮಗಳನ್ನು ಅತ್ಯಂತ ಪ್ರೀತಿಯಿಂದ ಬೆಳೆಸಿದನು.

ಚಂದ್ರಮುಖಿ ಪ್ರಾಯಕ್ಕೆ ಬರುವುದರೊಳಗೆ ಅವಳು ಎಲ್ಲಾ ವಿದ್ಯೆಗಳಲ್ಲಿಯೂ ಪ್ರವೀಣೆಯಾಗಿದ್ದಳು. ಆಮೇಲೆ ಚಂದ್ರಸೇನ ರಾಜನು ತನ್ನ ಮಗಳಿಗೆ ಮದುವೆ ಮಾಡಬೇಕೆಂದು ಬಯಸಿದಾಗ, ಯಾಕೋ ಚಂದ್ರಮುಖಿ ಮದುವೆಗೆ ಅಭಿಮುಖಳಾಗಿರುವಂತೆ ಕಾಣಲಿಲ್ಲ. "ಮುಂದೆ ನೋಡೋಣ" ಎನ್ನುತ್ತಿದ್ದಳು.

ಚಂದ್ರಮುಖಿ ಆಗಾಗ ಸಖಿಯರೊಂದಿಗೆ ಬೇಟೆಯಾಡಲು ಕಾಡಿಗೆ ಹೋಗುತ್ತಿದ್ದಳು. ಒಂದುದಿನ ಅವಳು ಬೇಟೆಯಾಡುತ್ತಾ, ತನಗೆ ತಿಳಿಯದಂತೆಯೇ ಸಖಿಯರನ್ನೂ ಪರಿವಾರವನ್ನೂ ಬಿಟ್ಟು ಕಾಡಿನೊಳಗೆ ಒಂಟಿಯಾಗಿ ಸಿಕ್ಕಿಕೊಂಡಳು. ದಾರಿತಪ್ಪಿಹೋಯಿತು. ಸೇವಕರು ಅವಳಿಗಾಗಿ ಎಷ್ಟೋ ಹುಡುಕಾಡಿದರು. ಏನೂ ಪ್ರಯೋಜನವಾಗಲಿಲ್ಲ. ಕತ್ತಲೆ ಬೀಳುವವರೆಗೂ ಹುಡುಕಾಡಿ ರಾಜಕುಮಾರಿಯನ್ನು ಯಾವುದೋ ಕ್ರೂರ ಮೃಗ ಹಿಡಿದಿರಬಹುದೆಂದು ನಿರಾಶೆಗೊಂಡು ರಾಜಭವನಕ್ಕೆ ಹಿಂದಿರುಗಿ ನಡೆದ ಸಂಗತಿಗಳನ್ನು ರಾಜನೊಂದಿಗೆ ಹೇಳಿದರು. ಆಶ್ಚರ್ಯವೇನೆಂದರೆ, ಅದನ್ನು ಕೇಳಿ ರಾಜನೇನೂ ಚಿಂತೆಗೀಡಾಗಲಿಲ್ಲ.

ಕಾರಣವೇನೆಂದರೆ ಚಂದ್ರಮುಖಿ ಅದಕ್ಕಿಂತ ಮೊದಲೇ ಮನೆಗೆ ಬಂದು ಸೇರಿದ್ದಳು. ಅವಳು ತನ್ನ ಪರಿವಾರದ ಸಮಾಚಾರವನ್ನು ಯಾರಿಗೂ ಹೇಳದೆ, ಕತ್ತಲೆ ಬೀಳುವುದಕ್ಕೆ ಸ್ವಲ್ಪ ಹೊತ್ತು ಇರುವಾಗಲೇ ತನ್ನ ಮಲಗುವ ಕೋಣೆಗೆ ಹೋದಳು. ಬೆಳಗಾಗುವವರೆಗೂ ಯಾರೂ ತನ್ನನ್ನು ಎಬ್ಬಿಸಬಾರದೆಂದು ಎಲ್ಲರಿಗೂ ಎಚ್ಚರಿಕೆ ಕೊಟ್ಟಿದ್ದಳು. ಇದಕ್ಕೆ ಕಾರಣವೇನೆಂದು ಯಾರೂ ಏನೂ ಕೇಳಬಾರದು.

ಅಂದಿನಿಂದ ಅವಳು ಏನೋ ಪರಧ್ಯಾನದಿಂದಲೂ, ಚಿಂತೆಯಿಂದಲೂ ಕಂದಿಕೊಂಡಿರುವ ಹಾಗೆ ಕಾಣಿಸುತ್ತಿದ್ದಳು. ಅದಕ್ಕೆ ಕಾರಣವೇನೆಂಬುದನ್ನು ಅವಳ

ಜಿ. ವಿಮಲಾದೇವಿ




ಬಾಯಿಯಿಂದ ಹೊರಡಿಸಲು ಯಾರಿಗೂ ಸಾಧ್ಯವಾಗಲಿಲ್ಲ. ಪ್ರತಿದಿನಾ ಅವಳು ಕತ್ತಲೆ ಬೀಳುವುದಕ್ಕೆ ಮೊದಲೇ ಬಾಗಿಲು ತಾಳಹಾಕಿಕೊಂಡು ಮಲಗುವ ಕೋಣೆ ಸೇರಿದ ಮೇಲೆ ಬೆಳತನಕ ಹೊರಗೆ ಬರುತ್ತಿರಲಿಲ್ಲ. ಹೀಗೇಕೆಂಬುದು ಎಲ್ಲರಿಗೂ ಪ್ರಶ್ನೆಯೇ. ಅದು ಹೇಳುವಂತಹುದಲ್ಲವಂತೆ.

ಅವಳಿಗೆ ಬೇಗದಲ್ಲಿ ಮದುವೆ ಮಾಡುವುದು ಒಳ್ಳೆಯದೆಂದು ರಾಜನಿಗೆ ತೋರಿತು. ತಂದೆಯ ಆಲೋಚನೆಗೆ ಚಂದ್ರಮುಖಿ ವಿರೋಧವೇನೂ ಹೇಳಲಿಲ್ಲ. ಅಷ್ಟಕ್ಕೇ ರಾಜನು ಸಂತೋಷಗೊಂಡು ಸ್ವಯಂವರದ ಏರ್ಪಾಡು ಮಾಡಿದನು. ಸ್ವಯಂವರದದಿನ ಅನೇಕ ಮಂದಿ ರಾಜಕುಮಾರರು ಬಂದು ಕೂಡಿದರು. ಏಕೆಂದರೆ ಚಂದ್ರಮುಖಿ ಬಹಳ ಲಾವಣ್ಯವತಿಯೆಂದೂ, ಗುಣವತಿಯೆಂದೂ ಎಲ್ಲರೂ ಕೇಳಿದ್ದರು.

ಚಂದ್ರಮುಖಿ ದಟ್ಟವಾದ ಸೀರೆಯ ಮೇಲು ಮುಸುಗು ಹಾಕಿಕೊಂಡು, ಕೈಯಲ್ಲಿ ವರಮಾಲಿಕೆ ಹಿಡಿದು ಸ್ವಯಂವರ ಮಂಟಪಕ್ಕೆ ಬಂದಳು. ಅವಳು ಯಾವ ರಾಜಕುಮಾರನನ್ನೂ ಪರೀಕ್ಷಿಸಿ ನೋಡಿದಂತೆ ಕಾಣಿಸಲಿಲ್ಲ. ಏನೋ ಹರಕೆ ತೀರಿಸಿಕೊಳ್ಳುವವಳ ಹಾಗೆ ಯಾವನೋ ಒಬ್ಬನ ಕೊರಳಿಗೆ ವರಮಾಲೆ ಹಾಕಿ, ಬೇಗಬೇಗನೇ ಅಂತಃಪುರದೊಳಗೆ ಹೋಗಿ ಬಾಗಿಲು ಹಾಕಿಕೊಂಡು ಬಿಟ್ಟಳು. ಆಗಲೇ ಹೊತ್ತು ಮುಳುಗುವ ವೇಳೆಯಾಗುತಿತ್ತು.

ರಾಜಕುಮಾರಿಯ ಪ್ರವರ್ತನೆ ಎಲ್ಲರನ್ನೂ ಆಶ್ಚರ್ಯಗೊಳಿಸಿತು. ಹುಡುಗಿ ವಿಪರೀತ ಲಜ್ಜಾಸ್ವಭಾವದವಳೆಂದು ಅನೇಕರು ಹೇಳಿಕೊಂಡರು. ಆದರೂ ಇಂತಹ ಸ್ವಯಂವರವನ್ನು ಇಷ್ಟರವರೆಗೂ ಯಾರೂ ನೋಡಿರಲಿಲ್ಲ. ಏನಾದರೂ ಸ್ವಯಂವರ ಮುಗಿದು ಹೋದದರಿಂದ, ವರಮಾಲೆ ಹಾಕಿಸಿಕೊಂಡ ಚೇದಿದೇಶದ ಯುವರಾಜನಾದ ಚಕ್ರಸೇನನ ಹೊರತು ಉಳಿದೆಲ್ಲರೂ ತಮ್ಮ ತಮ್ಮ ದೇಶಗಳಿಗೆ ಹೊರಟು ಹೋದರು. ಚಕ್ರಸೇನನು ಮಾತ್ರ ಆ ದಿನ ಚಂದ್ರಸೇನ ಮಹಾರಾಜನ ಆತಿಥ್ಯವನ್ನು ಸ್ವೀಕರಿಸಿದನು. ಮರುದಿನ ಚಂದ್ರಸೇನನು ತನ್ನ ಅಳಿಯನ ಕತ್ತಿಯನ್ನು ತೆಗೆದುಕೊಂಡು, ಮದುವೆಯ ಶಾಸ್ತ್ರವನ್ನು ಅದರೊಂದಿಗೆ ಮಾಡಿಸಿ, ಅವನನ್ನೂ ಅವನ ಪರಿವಾರವನ್ನೂ ಸಗೌರವದಿಂದ ಚೇದಿದೇಶಕ್ಕೆ ಒಂದೆ ಕಳುಹಿಸಿ ಕೊಟ್ಟನು.

ಕತ್ತಿಗೆ ಮದುವೆ ಮಾಡುವುದು ಮಣಿಪುರದ ಸಂಪ್ರದಾಯವಾಗಿತ್ತು. ಹುಡುಗಿ ಬಹಳ ನಾಚಿಕೆಯವಳೆಂಬ ಕಾರಣದಿಂದ ಈ ಸಂಪ್ರದಾಯಕ್ಕೆ ಎಲ್ಲರೂ ಒಪ್ಪಿದರು. ಅಂತೆಯೇ ಮರುದಿನ ಚಂದ್ರಮುಖಿಗೆ ಚೇದಿ ಯುವರಾಜನ ಕತ್ತಿಯೊಂದಿಗೆ ವೈಭವದಿಂದ ವಿವಾಹ ನಡೆದರೂ ಚಂದ್ರಮುಖಿಯ ಪ್ರವರ್ತನೆಯಲ್ಲಿ ಯಾವ ಬದಲಾವಣೆಯೂ ಕಾಣಿಸಲಿಲ್ಲ. ಚಂದ್ರಸೇನ ರಾಜನು ಮಗಳನ್ನು ಒಂದು ತಿಂಗಳವರೆಗೆ ತನ್ನ ಬಳಿ ಇಟ್ಟುಕೊಂಡು



ಆಮೇಲೆ ಒಂದು ಒಳ್ಳೆಯದಿನ ಶುಭ ಮುಹೂರ್ತ ದಲ್ಲಿ ಅವಳನ್ನು ಮಿತಪರಿವಾರದೊಂದಿಗೆ ಗಂಡನ ಮನೆಗೆ ಕಳುಹಿಸಿಕೊಟ್ಟನು.

ಚಂದ್ರಮುಖಿ ಬಂದದಿನ ಚೇದಿ ನಗರದಲ್ಲಿ ಆನಂದದ ವಿನೋದೋತ್ಸವಗಳು ನಡೆದುವು. ಆ ರಾತ್ರಿ ವಧೂವರರಿಗೆ ಶೋಭನದ ಏರ್ಪಾಡು ನಡೆ ದಿದ್ದಿತು. ಚಂದ್ರಮುಖಿ ಕತ್ತಲೆ ಬೀಳುವ ಮೊದಲೇ ಊಟ ಮುಗಿಸಿ, ಸಖಿಯರೊಂದಿಗೆ ಶಯ್ಯಾಗೃಹಕ್ಕೆ ಹೋಗಿ, ಅವರನ್ನೆಲ್ಲ ಹೊರಗೆ ಕಳುಹಿಸಿ ಕೋಣೆ ಯೊಳಗೆ ಒಬ್ಬಳೇ ಉಳಿದಳು.

ಮದುಮಗನೂ ಯುವರಾಜನೂ ಆದ ಚಕ್ರ ಸೇನನು ರಾತ್ರಿ ಸ್ವಲ್ಪ ತಡವಾಗಿಯೇ ಶಯ್ಯಾಗೃಹಕ್ಕೆ ಹೋದನು. ಆದರೆ ಶಯ್ಯಾಗೃಹದಲ್ಲಿ ಯಾರೂ ಇರಲಿಲ್ಲ. ತನ್ನ ಹೆಂಡತಿ ಬಹಳ ಸುಂದರಿ ಎಂದು ಕೇಳಿದ್ದನೇ ಹೊರತು ಚಕ್ರಸೇನನು ಇನ್ನೂ ಅವಳ ಮುಖವನ್ನು ನೋಡಿರಲಿಲ್ಲ. ಅವಳು ಕೋಣೆ ಯೊಳಗೆ ಕಾಣಿಸದಿರಲು ಅವನಿಗೆ ನಿರಾಶೆಯಾಯಿತು. ಪತ್ನಿಯನ್ನು ಕುರಿತು ಎಲ್ಲರನ್ನೂ ಕೇಳಿ ನೋಡಿದನು. ಅವಳು ಎಲ್ಲಿಗೆ ಹೋದಳು, ಏನಾದಳು ಎಂಬ ಸಂಗತಿ ಯಾರಿಗೂ ತಿಳಿಯದು. ರಾಜಭವನದೊಳಗೆಲ್ಲ ಹುಡುಕಾಡಿದರೂ ಅವಳ ಜಾಡು ಕಾಣಿಸಲಿಲ್ಲ.

ಚಕ್ರಸೇನನು ಆ ರಾತ್ರಿಯೇ ಕುದುರೆಯ ಮೇಲೆ ಏರಿಕೊಂಡು ತನ್ನ ಹೆಂಡತಿಯನ್ನು ಹುಡುಕುತ್ತಾ ಹೊರಟನು. ಅವನು ನಗರವನ್ನು ದಾಟಿದ ಕೂಡಲೇ, ಮಸುಕು ತಿಂಗಳ ಬೆಳಕಿನಲ್ಲಿ ನಡೆಯುತ್ತಿರುವ ಒಬ್ಬಳು ಮುದುಕಿಯನ್ನು ನೋಡಿದನು. ಅವನು ಅವಳ ಹತ್ತಿರ ಹೋಗಿ, "ಅವ್ವಾ, ಈ ದಾರಿಯಲ್ಲಿ ಪ್ರಾಯದ ಹುಡುಗಿಯೊಬ್ಬಳು ಹೋದಳೇನು ?" ಎಂದು ಕೇಳಿದನು. ಮುದುಕಿ ತನಗೆತಾನೇ ಗೊಣಗಿಕೊಂಡವ ಳಂತೆ "ಯಾರು ಎತ್ತ ಏಕೆ ಹೋದರೂ ನನಗೇನಾಗ ಬೇಕಾಗಿದೆ ?" ಎಂದಳು. ಆಮೇಲೆ ಅವನ ಕಡೆಗೆ ತಿರುಗಿ, "ಯಾರಪ್ಪಾ ನೀನು ? ಏನು ಕಥೆ ?" ಎಂದು ಕೇಳಿದಳು. ಚಕ್ರಸೇನನು ಆ ಮುದುಕಿಗೆ ನಡೆದ ಸಮಾ ಚಾರವನ್ನೆಲ್ಲಾ ಹೇಳಿದನು.

"ಸರಿ ಸರಿ. ಹಾಗಾದರೆ ಅದು ಅವಳೇ ಆಗಿರ ಬೇಕು. ಸ್ವಲ್ಪಹೊತ್ತಿಗೆ ಮುಂಚೆ ಈ ದಾರಿಯಾಗಿ ಓಡುತ್ತಾ ಒಬ್ಬಳು ಹೋದಳು. ಎಂತಹ ಘೋರ ಏದು ! ನನ್ನನ್ನು ಕೂಡಾ ನಿನ್ನ ಕುದುರೆಯ ಮೇಲೆ ಏರಿಸಿಕೊಂಡರೆ, ಇಬ್ಬರೂ ಕೂಡಿ ಅವಳನ್ನು ಹುಡು ಕೋಣ" ಎಂದಳು ಮುದುಕಿ.

ಇಬ್ಬರೂ ಕುದುರೆಯ ಮೇಲೆ ಬಹಳ ಹೊತ್ತಿನ ವರೆಗೆ ಆ ಪ್ರಾಂತದಲ್ಲಿರುವ ದಾರಿಗಳಲ್ಲಿ ತಿರುಗಾಡಿ ದರು. ಎಲ್ಲಿಯೂ ಚಂದ್ರಮುಖಿಯ ಸುಳಿವು ಕಾಣಿಸ ಲಿಲ್ಲ. ಕಡೆಗೆ ಮುದುಕಿ ಅವನನ್ನು ಕುರಿತು, "ಅಪ್ಪಾ, ಬಹಳದೂರ ತಿರುಗಾಡಿದೆವು. ಇನ್ನು ರಾತ್ರಿಯೂ ಹೆಚ್ಚಿಗಿಲ್ಲ. ಇನ್ನೊಂದು ಜಾಮದಲ್ಲಿ ಬೆಳಗಾಗಿ ಹೋಗುತ್ತದೆ. ಅಕೋ, ಅಲ್ಲಿ ಕಾಣುವ ಮರದ

ಬುಡದಲ್ಲಿ ಸ್ವಲ್ಪ ವಿಶ್ರಾಂತಿ ತೆಗೆದು ಕೊಳ್ಳೋಣ. ಆಗದೆ ?" ಎಂದಳು.

ಆ ಸಮಯದಲ್ಲಿ ಕುರುಡು ಬೆಳುದಿಂಗಳು ಕೂಡಾ ಇರಲಿಲ್ಲ. ನಾಲ್ಕು ಸುತ್ತಲೂ ಕಗ್ಗತ್ತಲೆ ಕವಿದಿತ್ತು. ಚಕ್ರಸೇನನು ಮುದುಕಿಯ ಸೂಚನೆಯನ್ನು ಆಮೋದಿಸಿಕೊಂಡು ಅಲ್ಲಿಯ ಮರದ ಕೆಳಗೆ ಮಲಗಿದನು. ಮುದುಕಿಯೂ ಇನ್ನೊಂದು ಬದಿಯಲ್ಲಿ ಒರಗಿ ಕುಳಿತಳು. ಕೂಡಲೇ ಚಕ್ರಸೇನನಿಗೆ ನಿದ್ದೆಬಂದಿತು.

ಮರುದಿನ ಅವನ ಮುಖದ ಮೇಲೆ ಸೂರ್ಯನ ಕಿರಣಗಳು ಹರಡಿದಾಗ ಅವನಿಗೆ ಎಚ್ಚರವಾಯಿತು. ಎದ್ದ ಕೂಡಲೇ ಅವನು ಮುದುಕಿಗಾಗಿ ಅತ್ತಿತ್ತ ನೋಡಿದನು. ಅವಳು ಆಗಲೇ ಎದ್ದು ಎಲ್ಲಿಗೋ ಹೋಗಿರಬೇಕೆಂದು ಭಾವಿಸಿದನು.

ಅವನು ಅಲ್ಲಿಯೇ ಕಾಲಾಡಿಸುತ್ತಿದ್ದಾಗ ಅಲ್ಲಿಗೆ ಸ್ವಲ್ಪ ದೂರದಲ್ಲಿ ಚಿಕ್ಕದೊಂದು ತೊರೆ ಹರಿಯುತ್ತಿದ್ದಿತು. ಅದರ ಬದಿಯಲ್ಲಿ ಒಂದು ಗುಡಿಸಲು ಕಾಣಿಸುತಿತ್ತು. ಆ ಗುಡಿಸಲಿನ ಹೊರಬದಿಯಲ್ಲಿ ಯಾವಳೋ ಒಬ್ಬಳು ಯುವತಿ ನಿಂತಿದ್ದಳು. ಚಕ್ರಸೇನನು ಅವಳ ಬಳಿಗೆ ಹೋದನು. ಅಲ್ಲಿ ಕೂಡಾ ಮುದುಕಿ ಕಾಣಿಸಲಿಲ್ಲ. ಆದರೆ ಆ ಯುವತಿ ಧರಿಸಿದ ಸೀರೆ ಮುದುಕಿ ಉಟ್ಟುಕೊಂಡಿದ್ದುದೇ ಎಂದು ಗುರುತಿಸಿದನು. ಯುವತಿ ಅತ್ಯಂತ ಚೆಲುವೆಯಾಗಿದ್ದಳು. ಚಕ್ರಸೇನನು ಅವಳನ್ನು ನೋಡಿ, "ಯಾರು ನೀನು ? ಒಬ್ಬಳು ಅವ್ವ ಇಲ್ಲೆಲ್ಲಿಯಾದರೂ ಬಂದಳೆ? ನೋಡಿದಿಯಾ?" ಎಂದು ಕೇಳಿದನು.

"ನನ್ನ ಹೆಸರು ಚಂಪಾ. ನೀವು ಹೇಳುವ ಅವ್ವ ನನ್ನ ಅವ್ವನೇ ಆಗಿರಬೇಕು. ನನ್ನ ಅವ್ವ ಒಬ್ಬಳು ಮಂತ್ರವಾದಿನಿ. ಯಾವುದೋ ಮೂಲಿಕೆಗಳನ್ನು ತರಲು ಹೋಗಿರುತ್ತಾಳೆ. ಅವಳು ಹಗಲಿನಲ್ಲಿ ಇಲ್ಲಿರುವುದಿಲ್ಲ. ಯಾವಾಗಾದರೂ ರಾತ್ರಿಗೆ ಬರುತ್ತಾಳೆ. ನಾವಿಬ್ಬರೂ ಈ ಗುಡಿಸಲಿನೊಳಗೇ ಇರುತ್ತೇವೆ" ಎಂದಳು ಆ ಯುವತಿ.

ಚಕ್ರಸೇನನಿಗೆ ಆ ಯುವತಿಯನ್ನು ಬಿಟ್ಟು ಹೋಗಲು ಮನಸ್ಸು ಬರಲಿಲ್ಲ. ಅವಳ ಮೇಲೆ




ಅವನಿಗೆ ಪಾರವಿಲ್ಲದಷ್ಟು ಮೋಹ ಉಂಟಾಯಿತು. ಅವನು ಅವಳನ್ನು ಗಾಂಧರ್ವ ವಿವಾಹ ಮಾಡಿಕೊಂಡು ಆ ಗುಡಿಸಲಿನಲ್ಲಿ ಬಹಳ ಹೊತ್ತನ್ನು ಕಳೆದು, ಮತ್ತೆ ಬರುವೆನೆಂದು ಹೇಳಿ, ತನ್ನ ಉಂಗುರವನ್ನು ಅವಳ ಬೆರಳಿಗೆ ಹಾಕಿ ತನ್ನ ಮನೆಗೆ ಹಿಂದಿರುಗಿಬಿಟ್ಟನು.

ಚಂದ್ರಮುಖಿ ಏನಾದಳೆಂಬುದು ಗೊತ್ತೇ ಆಗಲಿಲ್ಲ. ಅವಳನ್ನು ಬಹಳ ದಿನಗಳವರೆಗೆ ಹುಡುಕಿಸಿ ನೋಡಿದರೂ ಪ್ರಯೋಜನವಾಗಲಿಲ್ಲ. ಇನ್ನು ಅವಳು ಕಾಣಿಸಲಾರಳೆಂದೂ, ಒಂದುವೇಳೆ ಕಾಣಿಸಿದರೂ ಸೊಸೆಯನ್ನಾಗಿ ಸ್ವೀಕರಿಸಬಾರದೆಂದೂ ಚಕ್ರಸೇನನ ತಂದೆ ತಾಯಿಯರು ನಿಶ್ಚಯಿಸಿಕೊಂಡರು. ಚಕ್ರಸೇನನು ಪ್ರತಿದಿನ ಬೆಳಿಗ್ಗೆ ಚಂಪೆಯ ಗುಡಿಸಲಿಗೆ ಬಂದು, ಅವಳೊಂದಿಗೆ ಸಾಯಕಾಲದವರೆಗೂ ಇದ್ದು ಹೊತ್ತು ಮುಳುಗುವ ಸಮಯಕ್ಕೆ ಮನೆಗೆ ಹಿಂದಿರುಗುತ್ತಿದ್ದನು. ಬರಬರುತ್ತ ಅವನಿಗೆ ಅವಳ ಮೇಲೆ ಅಪಾರವಾದ ಪ್ರೇಮ ಉಂಟಾಯಿತು. ಅವಳನ್ನು ಒಂದು ಗಂಟೆ ಬಿಟ್ಟಿರುವುದೂ ಅಸಾಧ್ಯವಾಗಿ ತೋರಿತು. ಆದರೆ ರಾತ್ರಿಯಲ್ಲಿ ಅವನು ಅಲ್ಲಿ ಇರಲೇಬಾರದೆಂದು ಅವಳು ಮೊದಲೇ ಅವನಿಂದ ಮಾತು ಪಡೆದಿದ್ದಳು.

ಆದುದರಿಂದ ಅವನು ಒಂದುದಿನ ಚಂಪೆಯೊಂದಿಗೆ, "ನೀನು ನನ್ನೊಂದಿಗೆ ಮನೆಗೇ ಬಂದುಬಿಡು. ನಾವಿಬ್ಬರೂ ಮದುವೆ ಮಾಡಿಕೊಂಡು ಸಂತೋಷವಾಗಿರೋಣ. ನಮ್ಮವರಾರೂ ಅಭ್ಯಂತರ ಹೇಳದ ಹಾಗೆ ನಾನು ನೋಡಿಕೊಳ್ಳುತ್ತೇನೆ" ಎಂದನು.

"ಅದು ಈಗ ಸಾಧ್ಯವಾಗುವುದಿಲ್ಲ. ನನ್ನ ಅಪ್ಪ ನನ್ನನ್ನು ಅಗಲುವ ದಿನ ಬೇಗನೇ ಬರುತ್ತದೆ. ಆಗ ನಾನು ನಿಮ್ಮ ಮನೆಗೇ ಬರುತ್ತೇನೆ. ನಮಗಿನ್ನು ಬೇರೆ ಮದುವೆಯೇಕೆ? ಗಾಂಧರ್ವ ವಿವಾಹ ಮಾಡಿಕೊಂಡಿದ್ದೇವಲ್ಲ? ಸ್ವಲ್ಪಕಾಲ ತಾಳ್ಮೆ ವಹಿಸಿರಿ" ಎಂದಳು ಚಂಪಾ. ಆಗ ಅವಳು ಗರ್ಭವತಿಯಾಗಿದ್ದು, ತಿಂಗಳು ತುಂಬುತ್ತಾ ಬರುತ್ತಿದ್ದುವು.

ಒಂದುದಿನ ಚಕ್ರಸೇನನು, "ಚಂಪಾ, ಈ ಸ್ಥಿತಿಯಲ್ಲಿ ನೀನು ಇಲ್ಲಿ ಪ್ರಸವಿಸುವುದು ಸಾಧ್ಯವಿಲ್ಲ.





ನನ್ನೊಂದಿಗೆ ಬಂದುಬಿಡು. ನೀನು ಪ್ರಸವಿಸಲು ಬೇಕಾದ ಏರ್ಪಾಡುಗಳನ್ನು ನಾನು ಮಾಡಿಸುತ್ತೇನೆ" ಎಂದ ಚಕ್ರಸೇನ.

"ಅದಾವುದೂ ನನಗೆ ಬೇಡ. ನನಗೆ ಹಿಡಿಸದು" ಎಂದಳು ಚಂಪಾ. "ಹಾಗಾದರೆ ಕೆಲವಂದಿ ಪರಿಚಾರಿಕೆಯರನ್ನೂ ಮಂತ್ರಸಾನಿಗಳನ್ನೂ ಕಳುಹಿಸಲೆ?" ಎಂದು ಚಕ್ರಸೇನನು ಕೇಳಲು, ಅದಕ್ಕೆ ಸಹಾ ಅವಳು ಒಪ್ಪಿಕೊಳ್ಳದೆ, "ಯಾರನ್ನೂ ಕರೆದುಕೊಂಡು ಬರಬೇಡಿ. ನನ್ನ ಅವ್ವ ಸಾವಿರಮಂದಿ ಮಂತ್ರಸಾನಿಗಳಿಗೆ ಸಮಾನ. ನನ್ನ ಪ್ರಸವವನ್ನು ಕುರಿತು ನಿಮಗೆ ಯಾವ ಬಗೆಯ ಭಯವೂ ಬೇಡ" ಎಂದಳು.

ಚಕ್ರಸೇನನು ದಿನಾ ಬಂದು ಚಂಪೆಯನ್ನು ನೋಡಿಕೊಂಡು ಹೋಗುತ್ತಿದ್ದ. ಒಂದುದಿನ ಅವನಿಗೆ ತನ್ನ ಮನೆಯಲ್ಲಿ ನಿದ್ದೆಯೇ ಬರಲಿಲ್ಲ. ಆ ರಾತ್ರಿ ಚಂಪೆ ಪ್ರಸವಿಸುತ್ತಾಳೆಂದು ಅವನಿಗೇನೋ ಅನುಮಾನ ಉಂಟಾಯಿತು. ಪ್ರಸವದ ವೇಳೆಯಲ್ಲಿ ತಾನಾದರೂ ಹತ್ತಿರವಿರಬೇಕೆಂದು ಅವನಿಗೆ ತೋರಿತು. ಆದ್ದರಿಂದ ಅವನು ಚಂದ್ರಮುಖಿಯ ಇಷ್ಟಸಖಿಯಾದ ಮಾಲತಿ ಎಂಬವಳನ್ನು ಕರೆದುಕೊಂಡು ಯಾರಿಗೂ ಹೇಳದೆ ಚಂಪೆಯ ಗುಡಿಸಲಿಗೆ ಬಂದನು.

ಆಗ ಗುಡಿಸಲಿನೊಳಗಿನಿಂದ ಪ್ರಸವವೇದನೆಯ ಶಬ್ದ ಕೇಳಿಸುತ್ತಿದ್ದಿತು. ಚಕ್ರಸೇನನು ಹೊರಗೇ ಇದ್ದು ಮಾಲತಿಯನ್ನು ಒಳಗೆ ಹೋಗಿ ಸಹಾಯವಾಗಿರಲು ಹೇಳಿದನು. ಮಾಲತಿ ಒಳಗೆ ಹೋದಕೂಡಲೆ ಕಿಟ್ಟನೆ ಕಿರುಚಿ ಹೊರಕ್ಕೆ ಬಂದುಬಿಟ್ಟಳು. ಒಳಗೆ ಏನೋ ಆಗಬಾರದ್ದು ಆಗಿರಬೇಕೆಂದು ಗಾಬರಿಗೊಂಡು, ಚಕ್ರಸೇನನು ತಾನೇ ಒಳಗೆ ಹೋಗಿ ಅಲ್ಲಿಯ ದೃಶ್ಯವನ್ನು ನೋಡಿ ಮರದ ಹಾಗೆ ನಿಂತನು.

ಒಳಗೆ ಪ್ರಸವವೇದನೆ ಪಡುತ್ತಿರುವವಳು ಚಂಪೆಯಲ್ಲ, ಮುದುಕಿ, ಅವ್ವ !

ಚಕ್ರಸೇನನಿಗೆ ತಲೆ ತಿರಿಗಿಹೋಯಿತು. "ಅವ್ವಾ! ನಿನಗೆ ಇಂಥಾ ಸ್ಥಿತಿ ಹೇಗೆ ಬಂತು? ಚಂಪೆ ಎಲ್ಲಿದ್ದಾಳೆ?" ಎಂದನು.

ಅವ್ವ ನೋವನ್ನು ಅನುಭವಿಸುತ್ತ "ಅದೆಲ್ಲ ಮತ್ತೆ ಹೇಳುತ್ತೇನೆ. ಸಹಾಯಬೇಕು, ನೀವು ಹೋಗಿ ಮಾಲತಿಯನ್ನು ಕಳುಹಿಸಿರಿ" ಎಂದಳು ನರಳುತ್ತ.

ಉಪಾಯಗಾಣದೆ ಚಕ್ರಸೇನನು ಹೊರಗೆ ಬಂದು ಮಾಲತಿಯನ್ನು ಒಳಗೆ ಕಳುಹಿಸಿದನು. ಆ ಮುದುಕವ್ವನಿಗೆ ಮಾಲತಿಯ ಹೆಸರು ಹೇಗೆ ಗೊತ್ತಾಯಿತೆಂಬ ಅನುಮಾನ ಕೂಡಾ ಅವನಿಗೆ ಬರಲಿಲ್ಲ.

ಮಾಲತಿ ಒಳಗೆಹೋದ ಮರುಕ್ಷಣದಲ್ಲಿ ಅವ್ವ ಹಣ್ಣಿನಂತಹ ಗಂಡು ಮಗುವನ್ನು ಹಡೆದಳು. ಮರುಕ್ಷಣವೇ ಅವಳ ಮುದಿರೂಪವು ಮಾಯವಾಗಿ ಹೋಗಿತ್ತು. ಅವಳನ್ನು ನೋಡಿ ಮಾಲತಿ, "ಚಂದ್ರಮುಖಿ! ನೀನಾ?" ಎಂದು ಕೂಗಿದುದನ್ನು ಹೊರಗಿರುವ ಚಕ್ರಸೇನನೂ ಕೇಳಿದನು. ಕೂಡಲೇ ಅವನು ಒಳಗೆ ಹೋಗಿ ಮಗುವನ್ನೂ ಚಂಪಳನ್ನೂ ನೋಡಿ

ದರು. ಮುದುಕಿಯನ್ನು ಕಾಣದೆ ಪುನಃ ಆಶ್ಚರ್ಯಗೊಂಡು. "ಚಂಪಾ, ಪ್ರಸವಿಸಿದವಳು ನೀನೇನಾ? ಹಾಗೆ, ಆ ಮುದುಕಿ ಎಲ್ಲಿ ಹೋದಳು?" ಎಂದು ಕೇಳಿದ ಚಕ್ರಸೇನ.

"ನಾನೇ ಆ ಮುದುಕಿ. ನಿಮ್ಮ ಚಂದ್ರಮುಖಿಯೂ ನಾನೇ. ಚಂಪೆಯೂ ನಾನೇ, ಗೊತ್ತಿಲ್ಲದೆ ಮಾಡಿದ ಒಂದು ಪಾಪದಿಂದಾಗಿ ಶಾಪ ಪಡೆದು, ಪಡಬಾರದ ಕಷ್ಟಗಳನ್ನೆಲ್ಲಾ ಪಟ್ಟುಬಿಟ್ಟೆ. ಈ ಮಗು ಹುಟ್ಟಿದುದರಿಂದ ನನ್ನ ಶಾಪ ತೀರಿಹೋಯಿತು" ಎಂದು ಚಂದ್ರಮುಖಿ ತನ್ನ ಸಮಾಚಾರವನ್ನೆಲ್ಲಾ ಹೇಳಿದಳು.

ಅದೇನೆಂದರೆ, ಹಿಂದೆ ಅವಳು ಬೇಟೆಗೆ ಹೋಗಿ, ಅರಣ್ಯದಲ್ಲಿ ಒಂಟಿಯಾಗಿ ಸಿಕ್ಕಿಕೊಂಡಾಗ, ಪೊದೆಗಳ ಸಂದಿನಿಂದ ಜಿಂಕೆಯೊಂದು ಇರುವ ಹಾಗೆ ಭ್ರಮಿಸಿ ಬಾಣಪ್ರಯೋಗ ಮಾಡಿದಳು. ಆ ಬಾಣ ಅಲ್ಲಿದ್ದ ಮುನಿಗೆ ತಾಗಿತು. ಅವನು ಕೋಪದಿಂದ ಮುದುಕಿಯಾಗಿ ಹೋಗುವಂತೆ ಅವಳನ್ನು ಶಪಿಸಿಬಿಟ್ಟ. ಚಂದ್ರಮುಖಿ ಅವನ ಕಾಲಮೇಲೆ ಬಿದ್ದು ಅತ್ತು ಗೋಳಾಡಿ ವಿಮೋಚನೆ ಬೇಡಿಕೊಂಡಾಗ, ರಾತ್ರಿಯ ಹೊತ್ತಿನಲ್ಲಿ ಮಾತ್ರ ಅವಳು ಮುದುಕಿಯಾಗಿರುವಂತೆಯೂ, ಒಬ್ಬ ಮಗನನ್ನು ಹೆತ್ತ ಕೂಡಲೇ ಶಾಪವಿಮೋಚನೆಯಾಗುವಂತೆಯೂ ಆ ಮುನಿ ಅನುಗ್ರಹ ಮಾಡಿದನು. ಆದುದರಿಂದಲೇ ಅವಳು ರಾತ್ರಿಯ ಹೊತ್ತಿನಲ್ಲಿ ಯಾರ ಕಣ್ಣಿಗೂ ಕಾಣಿಸುತ್ತಿರಲಿಲ್ಲ. ಅವಳು ವಿವಾಹ ಮಾಡಿಕೊಂಡುದು ಕೂಡಾ ಮಗನನ್ನು ಪಡೆದು ಶಾಪದಿಂದ ಮುಕ್ತಳಾಗಬೇಕೆಂಬ ಉದ್ದೇಶದಿಂದಲೇ. ತನ್ನ ಗಂಡ ಯಾರು ಎಂಥವನೆಂದು ಕೂಡ ಆಗ ಅವಳು ಯೋಚಿಸಿರಲಿಲ್ಲ. ಮದುವೆಯಾದ ಮಾತ್ರದಿಂದಲೂ ಅವಳ ಸಮಸ್ಯೆ ತೀರುವುದಿಲ್ಲವಷ್ಟೆ? ರಾತ್ರಿಯ ಹೊತ್ತಿನಲ್ಲಿ ಗಂಡನ ಕಣ್ಣಿಗೆ ಬೀಳಲು ಸಾಧ್ಯವಿರಲಿಲ್ಲ. ಅದೃಷ್ಟವಶಾತ್ ಹಗಲಿನಲ್ಲಿ ಗಂಡನಿಗೆ ಕಾಣಿಸುವವಳಾಗಿದ್ದು ಗರ್ಭವತಿಯಾದಳು. ಮಗುವಿನಿಂದ ಶಾಪವಿಮೋಚನೆಯೂ ಆಯಿತು. ಆದರೆ ಪರಿಪೂರ್ಣ ಒಂದುವರ್ಷ ಕಾಲ ಮನುಷ್ಯ ಸಂಪರ್ಕಕ್ಕೆ ದೂರವಾಗಿ ಗುಡಿಸಲಿನಲ್ಲಿದ್ದು, ಆ ರಾಜಕುಮಾರಿ ಬಹಳ ಕಷ್ಟಪಟ್ಟಿದ್ದಳು.

ಅದನ್ನೆಲ್ಲಾ ಕೇಳಿ ಚಕ್ರಸೇನನು ತನ್ನ ಹೆಂಡತಿಯ ಧೈರ್ಯ ಸಾಹಸ ದೃಢನಿಶ್ಚಯಗಳಿಗೆ ಮೆಚ್ಚಿಕೊಂಡನು. ಅವಳ ಮೇಲಿನ ಪ್ರೇಮ ಇಮ್ಮಡಿ ಮುಮ್ಮಡಿಯಾಯಿತು. ಅವಳನ್ನೂ ಮಗನನ್ನೂ ಕರೆದುಕೊಂಡು ಮನೆಗೆ ಹೋಗಿ, ನಡೆದ ಸಮಾಚಾರವನ್ನೆಲ್ಲಾ ತನ್ನ ತಾಯಿ ತಂದೆಗಳಿಗೆ ಹೇಳಿದನು. ಅವರೂ ಈ ವಿಚಿತ್ರ ಘಟನೆಗೆ ಆಶ್ಚರ್ಯಪಟ್ಟರು. ಆಮೇಲೆ ಚಂದ್ರಮುಖಿ ಯಾವ ಕಷ್ಟಗಳೂ ಇಲ್ಲದೆ ಗಂಡನೊಂದಿಗೂ ಮಗನೊಂದಿಗೂ ಸುಖವಾಗಿದ್ದಳು.



ತಲೆಯ ಬೆಲೆ ನಾಲಗೆಯಲ್ಲಿದೆ

ಒಂದುದಿನ ಒಬ್ಬ ರಾಜನು ಬೇಟೆಗೆ ಹೋಗಿ, ಬಹಳ ಹೊತ್ತು ಬೇಟೆಯಾಡಿ, ಬಳಲಿ ಬಾಯಾರಿ, ಒಂದು ಬಾವಿಯ ಹತ್ತಿರ ಹೋದನು. ಬಾವಿ ಇದ್ದರೂ ನೀರು ಸೇದಲು ಯಾವುದೂ ಇರಲಿಲ್ಲ.


ಸಮೀಪದಲ್ಲಿ ಒಂದು ಗುಡಿಸಲಿದ್ದಿತು. ಅದರಲ್ಲಿ ಕುರುಡ ಸಾಧುವೊಬ್ಬನಿದ್ದ. ಅಲ್ಲಿಗೆ ಹೋಗಿ ಹಗ್ಗವನ್ನೂ ಬಿಂದಿಗೆಯನ್ನೂ ತರುವಂತೆ ರಾಜನು ಒಬ್ಬ ಭಟನನ್ನು ಕಳುಹಿಸಿದ. ಆ ಭಟನು ಸಾಧುವನ್ನು ನೋಡಿ, "ಲೋ ಬಕ್ಕ ಬೈರಾಗೀ, ನೀರು ಸೇದಲು ಹಗ್ಗ ಬಿಂದಿಗೆ ಕೊಡಯ್ಯ" ಎಂದ. "ನನ್ನ ಹತ್ತಿರ ಇಲ್ಲ" ಎಂದ ಕುರುಡ ಸಾಧು.


ತರುವಾಯ ರಾಜ ಮಂತ್ರಿಯನ್ನು ಕಳುಹಿಸಿದ. ಮಂತ್ರಿ ಬಂದು, "ಏನಯ್ಯಾ ಸಾಧು! ನಿನ್ನ ಹತ್ತಿರ ಹಗ್ಗಬಿಂದಿಗೆ ಇಲ್ಲದೆ ಇರುತ್ತೆಯೆ? ಒಂದುಸಾರಿ ಕೊಡು, ನೀರು ಸೇದಿ ಕೊಟ್ಟು ಬಿಡುತ್ತೇವೆ" ಎಂದನು.

"ಅಯ್ಯಾ ನನ್ನ ಹತ್ತಿರ ನೀರು ಸೇದುವ ಸಾಧನ ನಿಜಕ್ಕೂ ಇಲ್ಲ" ಎಂದ ಬೈರಾಗಿ.

ಆಮೇಲೆ ರಾಜನೇ ಹೊರಟು ಅವನಬಳಿಗೆ ಬಂದು, "ಸ್ವಾಮಿ, ಬಹಳ ಬಾಯಾರಿಕೆಯಾಗಿದೆ. ಬಾವಿಯಿಂದ ನೀರು ತೋಡಲು ಹಗ್ಗವೂ ಬಿಂದಿಗೆಯೂ ಕೊಟ್ಟರೆ ಬಹಳ ಉಪಕಾರ" ಎಂದ. ಕೂಡಲೇ ಸಾಧು, "ಮಹಾರಾಜರೆ, ನಿಮಗೆ ಕುಡಿಯುವ ನೀರನ್ನೇ ಕೊಡುತ್ತೇನೆ. ಒಂದು ಕ್ಷಣ ಇರಿ" ಎನ್ನುತ್ತಾ ಎದ್ದನು.

ರಾಜನು ಆಶ್ಚರ್ಯದಿಂದ "ನಾನು ರಾಜನೆಂದು ನಿಮಗೆ ಹೇಗೆ ಗೊತ್ತಾಯಿತು?" ಎಂದು ಕೇಳಿದ. "ಮಹಾರಾಜರೇ, ತಲೆಯ ಬೆಲೆಯನ್ನು ನಾಲಗೆ ಹೇಳುತ್ತದೆ" ಎಂದ ಆ ಕುರುಡು ಸಾಧು.





ಧೈರ್ಯದಿಂದ ಲಾಭ

ಒಂದು ಗ್ರಾಮದಲ್ಲಿ ಒಬ್ಬ ಬ್ರಾಹ್ಮಣನು ವಾಸ ಮಾಡಿಕೊಂಡಿದ್ದನು. ಅವನು ಹೆಚ್ಚಾಗಿ ಪ್ರೇತ ಕರ್ಮಗಳನ್ನು ಮಾಡಿಸುವವನಾದುದರಿಂದ ಪ್ರೇತ ಬ್ರಾಹ್ಮಣನೆಂದು ಹೆಸರಾಗಿದ್ದನು. ಅದರ ಮೇಲೆ ಆತನು ತುಂಬಾ ಧೈರ್ಯವಂತ. ದುರ್ಮರಣ ಹೊಂದಿದವರಿಗೆ ಕೂಡಾ ಅವನು ದಹನ ಸಂಸ್ಕಾರಾದಿಗಳನ್ನು ಮಾಡಿಸುತ್ತಿದ್ದನು. ಎಲ್ಲಿಯಾದರೂ ನವರ ಹತ್ಯೆಯಾದರೂ, ಉರುಳು ಹಾಕಿಕೊಂಡು ಆತ್ಮಹತ್ಯೆಯಿಂದ ಸತ್ತರೂ, ಅಂತಹರ ದಹನ ಸಂಸ್ಕಾರಗಳನ್ನು ಮಾಡಿಸಲು ಈ ಬ್ರಾಹ್ಮಣನನ್ನೇ ಕರೆಯುತ್ತಿದ್ದರು. ಏಕೆಂದರೆ, ಅಂತಹ ಶವಗಳಿಗೆ ಸಂಸ್ಕಾರವನ್ನು ಮಾಡಿಸಲು ಸಾಧಾರಣ ಬ್ರಾಹ್ಮಣರು ಹೆದರುತ್ತಿದ್ದರು. ಬಲವಂತದ ಸಾವು ಸತ್ತವರು ದೆವ್ವಗಳಾಗುವರೆಂದು ಎಲ್ಲರೂ ನಂಬಿಕೊಂಡಿದ್ದರು.

ಈ ಪ್ರೇತಕರ್ಮದ ಬ್ರಾಹ್ಮಣನಿಗೆ ಒಂದುಸಾರಿ, ಐವತ್ತು ಮೈಲು ದೂರದಲ್ಲಿದ್ದ ಒಂದು ಗ್ರಾಮದ ಜನರು ಮರಣೋತ್ತರ ಕರ್ಮಕಾಂಡ ನಡೆಯಿಸಲು ಕರೆ ಕಳುಹಿಸಿದ್ದರು. ಅಲ್ಲಿಗೆ ಹೋಗಿ ಆ ಬ್ರಾಹ್ಮಣನು ತನ್ನ ಕೆಲಸಗಳನ್ನೆಲ್ಲ ಕ್ರಮವಾಗಿ ಮುಗಿಸಿ ಹೊರಡುವಾಗ ಹೊತ್ತು ಮುಳುಗಿ ಹೋಯಿತು. "ಈ ಕತ್ತಲೆಯಲ್ಲಿ ನಿಮ್ಮ ಊರಿಗೆ ಹೋಗಬೇಡಿ ಸ್ವಾಮಿ. ಈ ರಾತ್ರಿ ಇಲ್ಲೇ ಮಲಗಿ ನಾಳೆ ಬೆಳಿಗ್ಗೆ ಹೋಗಿ" ಎಂದರು ಗ್ರಾಮಸ್ಥರು.

"ಯಾಕೆ? ಊಟದ ವೇಳೆಗೆ ಮನೆ ಸೇರಿಬಿಡಲಾರೆನಾ?" ಎಂದ ಬ್ರಾಹ್ಮಣ. ಆದರೂ ಗ್ರಾಮಸ್ಥರು, "ಮತ್ತೇನಿಲ್ಲ ಸ್ವಾಮಿ, ಈ ಊರಿಗೂ ನಿಮ್ಮೂರಿಗೂ ನಡುವಿನಲ್ಲಿರುವ ಸ್ಮಶಾನದಲ್ಲಿ ದೆವ್ವಗಳಿವೆ ಎಂದು ಹೇಳುತ್ತಾರೆ. ಅವು ರಾತ್ರಿಯಲ್ಲಿ ಪ್ರಯಾಣಿಕರನ್ನು ಹಿಡಿದು ಬಹಳ ತೊಂದರೆ ಕೊಡುತ್ತವಂತೆ. ಯಾವ ಮಂತ್ರ ತಂತ್ರಗಳಿಗೂ ಬಾಗುವಂಥವಲ್ಲವಂತೆ" ಎಂದರು.

ಅದನ್ನು ಕೇಳಿ ಬ್ರಾಹ್ಮಣನು ನಕ್ಕು, "ದೆವ್ವಗಳೂ, ಭೂತ ಪಿಶಾಚಿಗಳೂ ನನ್ನನ್ನೇನು ಮಾಡಿಯಾವು? ನಾನು ಈ ರಾತ್ರಿಯಲ್ಲಿ ಮನೆ ಸೇರಲೇಬೇಕು. ನನ್ನ ಮುಂದೆ ಅವಾವುದೂ ನಿಲ್ಲಲಿಕ್ಕಿಲ್ಲ" ಎಂದು ಹೇಳಿ ಹೊರಟೇಬಿಟ್ಟನು.

ಆಕಾಶವು ನಿರ್ಮಲವಾಗಿದ್ದುದರಿಂದ, ಚಂದ್ರ ಪ್ರಕಾಶವು ನಿಚ್ಚಳವಾಗಿ ದಾರಿಯ ಮೇಲೆ ಬಿದ್ದಿತ್ತು.

ಟಿ. ಶಿವಲಿಂಗಯ್ಯ



ಆದುದರಿಂದ ಬ್ರಾಹ್ಮಣನು ಒಂದಿಷ್ಟೂ ಭಯ ಸಂದೇಹಗಳಿಲ್ಲದೆ ನಿಶ್ಚಿಂತೆಯಿಂದ ಸಾಗಿದನು. ಸುಮಾರು ಅರ್ಧವಾಸಿ ದಾರಿ ಸಾಗಿದಾಗ ಅವನಿಗೊಂದು ಓಲೆಯ ಗುಡಿಸಲು ಕಾಣಿಸಿತು. ಅದು ಹಗಲಲ್ಲಿ ಕೆಲಸಗಾರರು ತಂಗುವಕೊಟ್ಟಿಗೆ. ರಾತ್ರಿಯಲ್ಲಿ ಯಾರೂ ಇಲ್ಲವೆಂದೇ ಬ್ರಾಹ್ಮಣನು ಅಂದುಕೊಂಡನು. ಆದರೆ ಆ ಗುಡಿಸಲಿನ ನೆರಳಿನಲ್ಲಿ ಯಾವಳೋ ಒಬ್ಬಳು ನಿಂತಿರುವಂತೆ ಬ್ರಾಹ್ಮಣನಿಗೆ ತೋರಿತು. ಅವಳು ಗುಡಿಸಲ ಕಡೆಗೆ ತಿರುಗಿ ನಿಂತಿದ್ದಳು. ಬ್ರಾಹ್ಮಣನು ಸಮೀಪಬಂದರೂ ಅವಳು ಮುಖ ತಿರುಗಿಸಲಿಲ್ಲ. ಒಂದುವೇಳೆ ಅವಳು ಶುದ್ಧ ಕಿವುಡಿಯೋ ಏನೋ ?

"ಇವಳು ಗಂಡನೊಂದಿಗೋ ಅತ್ತೆಯೊಂದಿಗೋ ಜಗಳ ಮಾಡಿ ಯಾರಿಗೂ ತಿಳಿಯದಂತೆ ಓಡಿಬಂದಿರಬೇಕು. ಬೆಳಗಾಗುವುದರೊಳಗೆ ಯಾವ ಕೆರೆಗೋ ಬಾವಿಗೋ ಹಾರಿ ಪ್ರಾಣ ಕಳೆದುಕೊಳ್ಳುತ್ತಾಳೆ. ಇಂತಹ ಸಾವು ಸತ್ತ ಬಹಳ ಮಂದಿಗೆ ನನ್ನ ಮೇಲೆಯೇ ಉತ್ತರಕ್ರಿಯೆ ಮಾಡಿದ್ದೇನೆ. ಹುಡುಗಿಗೆ ನಾಲ್ಕು ಬುದ್ಧಿ ಮಾತು ಹೇಳಿ ಮ ಕಳುಹಿಸಬೇಕು" ಎಂದುಕೊಂಡು ಆ ಬ್ರಾಹ್ಮ ಅವಳ ಸಮೀಪ ಹೋಗಿ, "ಯಾರು ನೀ ನಿರ್ಭಾಗ್ಯದವಳ ಹಾಗೆ ನಿಂತಿದ್ದೀ ? ಇಂತಹ ಅವೇ ಯಲ್ಲಿ ಇಲ್ಲಿ ಬಂದು ಏಕೆ ನಿಂತಿದ್ದಿ ? ನೀನು ಯಾರು ನಿನಗೆ ಬಂದಕಷ್ಟವೇನು ಎಂಬುದನ್ನೆಲ್ಲ ಮುಚ್ಚು ಮ ಮಾಡದೆ ಹೇಳು. ಗುಟ್ಟಿನ ವಿಷಯವನ್ನು ನಾ ಯಾರಿಗೂ ಹೇಳಲಾರೆ. ನಿನಗೆ ಅಭ್ಯಂತರವಿ ದಿದ್ದರೆ ನಿನ್ನನ್ನು ನಿನ್ನ ಮನೆಯುವರೆಗೂ ಕರೆ ಕೊಂಡು ಹೋಗಿ ಬಿಡುತ್ತೇನೆ ಬೇಕಾದರೆ. ಹೆದ ಬೇಡ" ಎಂದನು.

ಅವಳು ಆಗಲೂ ಹಿಂದೆ ತಿರುಗಿ ನೋಡದೆ "ಊರಿನೊಳಗಿನ ವಿಷಯವೆಲ್ಲ ನಿನಗೇಕಯ್ಯ ! ನಿನ್ನ ದಾರಿ ಹಿಡಿದು ಹೋಗಬಾರದೆ ?" ಎಂದ ಸ್ವಲ್ಪ ಕೂಡಾ ಗೌರವವಿಲ್ಲದೆ.

ಅವಳು ಸುಲಭದಲ್ಲಿ ದಾರಿಗೆ ಬರುವವಳಾ ಕಾಣದೆ ಆ ಬ್ರಾಹ್ಮಣನು, "ಕೇಳಿದ ಮಾತ್ರ ಅಷ್ಟೊಂದು ಗುರುಗುಟ್ಟುವೆಯೇಕೋ ? ಇಂತ ಹೊತ್ತಿನಲ್ಲಿ ನಿನ್ನಂಥವಳನ್ನು ಒಬ್ಬಂಟಿಗಳನ್ನಾಗಿ ಬಿಟ್ಟು ಹೋಗಬೇಕೆಂದರೆ ನನ್ನ ಅಂತರಾತ್ಮ ಒಪ್ಪುತ್ತದೆಯೆ ! ನಿನ್ನದು ಯಾವ ಗ್ರಾಮವೆಂಬುದನ್ನು ಹೇಳು. ಕ ನಿನ್ನ ಹೆಸರನ್ನಾದರೂ ಹೇಳು. ಅಥವಾ ನಿನ್ನ ಮ ಯವರು ಯಾರೆಂಬುದನ್ನಾದರೂ ಹೇಳು. ಅವರಿ ಸುದ್ದಿ ಮುಟ್ಟಿಸುತ್ತೇನೆ. ಅವರೇ ಬಂದು ನಿನ್ನನ್ನು ಕರೆದುಕೊಂಡು ಹೋಗಲಿ" ಎಂದನು.

"ಒಳ್ಳೆಯ ಮಾತಿನಲ್ಲಿ ನೀನು ಹೋಗುವುದಿ ಅಂತ ಕಾಣುತ್ತೆ, ಹೂಂ, ನಿನ್ನನ್ನು ಹಿಡಿದುಬಿಡು ತ್ತೇನೆ, ಜಾಗ್ರತೆ !" ಎಂದು ಅವಳು ಒಮ್ಮೆ ಹಿಂದೆ ತಿರುಗಿದಳು.

ಅವಳ ಮುಖವು ಕೇವಲ ಹೊಗೆ ಬೂದಿಯು ಬಳಿದಿಯು ಹಾಗೆ ಕಾಣಿಸಿತು. ಇವಳು ಒಂದು ದೆವ್ವವೇ ಎಂದು ಆಗ ಬ್ರಾಹ್ಮಣನಿಗೆ ಗೊತ್ತಾಯಿತು. ಎದೆಯಲ್ಲಿ ಭಯವಿದ್ದರೂ, ತಾನು ಧೈರ್ಯಶಾಲಿಯೆಂಬ ಖ್ಯಾತಿಯನ್ನು ಕಳೆದುಕೊಳ್ಳಲಿಷ್ಟವಿಲ್ಲದೆ, ಅವನು ತನ್ನ ಭಯವನ್ನು ತುಳಿದು ಹಿಡಿದು, "ಓಹೋ! ನೀನೇಯೋ ಇದು? ನನ್ನನ್ನು ಹೆದರಿಸುವಷ್ಟು ಧೈರ್ಯವೇ ನಿನಗೆ! ಎಲ್ಲಿ ಹಿಡಿಯೋಣ! ದೆವ್ವವನ್ನು ಹಿಡಿಸಿಕೊಳ್ಳಬೇಕೆಂದು ನಾನು ಬಹಳ ಕಾಲದಿಂದ ನೋಡುತ್ತಿದ್ದೇನೆ" ಎಂದು ಹೇಳಿ ಗಟ್ಟಿಯಾಗಿ ನೆಗಾಡಿದನು.


ದೆವ್ವವು ತಲೆ ಕೂದಲನ್ನು ಕೆರಳಿಸಿಕೊಂಡು ನಾಲಗೆಯನ್ನು ಹೊರಕ್ಕೆ ಹಾಕಿ ಗಲಗಲ ಆಡಿಸಿತು.

ಬ್ರಾಹ್ಮಣನ ಭಯವು ಬಹಳ ಮಟ್ಟಿಗೆ ತಗ್ಗಿತು. ಅವನು ತಿರಸ್ಕಾರದಿಂದ, "ಥು, ದೆವ್ವಗಳು ನಿನಗಿಂತ [illegible]ಬಾಲು ಉದ್ದಕ್ಕೆ ನಾಲಗೆ ಚಾಚುವುದನ್ನು ನೋಡಿದ್ದೇನೆ" ಎಂದನು.

ಆ ಮಾತು ಕೇಳಿ ದೆವ್ವವು ಕುಂದಿಹೋದಂತೆ ಕಾಣಿಸಿತು. ಅದು ನಾಲಗೆಯನ್ನು ಒಳಕ್ಕೆ ಎಳೆದುಕೊಂಡು, ಬಾಯಿಯಿಂದಲೂ ಕಿವಿಗಳಿಂದಲೂ ರಕ್ತವನ್ನು ಸುರಿಸಿತು.

"ಇದೆಲ್ಲಾ ಏನೂ ಪ್ರಯೋಜನವಿಲ್ಲ ಬಿಡೂ! ನಿನಗಿಂತಲೂ ಹೆಚ್ಚು ಭಯಂಕರವಾಗಿ ರಕ್ತ ಮಾಂಸವನ್ನು ಸುರಿಸುವ ಪಿಶಾಚಿಗಳನ್ನು ನಾನು ನೋಡಿದ್ದೇನೆ. ನೀನೊಬ್ಬಳು ಕೇವಲ ಕೈಲಾಗದ ದೆವ್ವದವಳ ಹಾಗೆ ಕಾಣುತ್ತೀಯಲ್ಲಾ! ನೀನೆಂಥ ಪಿಶಾಚಿ! ನಾಚಿಗೆಗೇಡು!" ಎಂದ ಆ ಬ್ರಾಹ್ಮಣ.


ದೆವ್ವವು ನಿರುತ್ಸಾಹದಿಂದ ಸಣ್ಣ ಮುಖ ಮಾಡಿಕೊಂಡು, "ಹೌದು ಸ್ವಾಮಿ. ನಿಜ ಸಂಗತಿ ಹೇಳಿಬಿಡುತ್ತೇನೆ. ನನಗೆ ಅನುಭವ ಸ್ವಲ್ಪ ಕಮ್ಮಿ. ನಾಳೆ ಆತ್ಮಹತ್ಯ ಮಾಡಲಿಕ್ಕಿರುವ ಒಬ್ಬಳು ಹುಡುಗಿಯನ್ನು



ಹಿಡಿದ ದೆವ್ವ ನಾನು. ಈ ಆತ್ಮಹತ್ಯವನ್ನು ಹೇಗೆ ಮಾಡಿಸಬೇಕು ಅಂತ ಎಷ್ಟೋ ಯೋಚನೆ ಮಾಡುತ್ತೇನೆ. ಸರಿಯಾಗಿ ತಿಳಿಯುವುದಿಲ್ಲ. ನಿಮ್ಮಪಾಡಿಗೆ ನೀವು ಹೋಗಿಬಿಟ್ಟರೆ ನಾನು ಸರಿಯಾಗಿ ಆಲೋಚನೆ ಮಾಡಿ ಒಂದು ನಿಶ್ಚಯಕ್ಕೆ ಬರುತ್ತೇನೆ. ಹೋಗಿಬಿಡಿ ಸ್ವಾಮಿ" ಎಂದು ಪ್ರಾರ್ಥಿಸುವ ಹಾಗೆ ಹೇಳಿತು.

"ಎಲ ದೆವ್ವವೆ! ನಿನ್ನ ತಲೆಗೆ ಬೆಂಕೀ ಹಾಕ!" ಎಂದು ಬ್ರಾಹ್ಮಣನು ತನ್ನೊಳಗೇ ಅಂದುಕೊಂಡು ಆತ್ಮಹತ್ಯ ಮಾಡಿಕೊಳ್ಳಲಿರುವ ಹುಡುಗಿಯ ಮೇಲೆ ಕನಿಕರಗೊಂಡನು. ಅವನು ಆ ದೆವ್ವವನ್ನು ನೋಡಿ ಸಹಾನುಭೂತಿ ಗೊಂಡವನಂತೆ ನಟಿಸುತ್ತ, "ನಿನ್ನಂಥ ದೆವ್ವವನ್ನು ನಾನು ಇಷ್ಟರವರೆಗೆ ನೋಡಲಿಲ್ಲ. ಪಾಪ, ಆ ಹುಡುಗಿ ಯಾರೋ?" ಎಂದ.

"ಅಕೋ, ಅಲ್ಲಿ ಕಾಣುವ ಗ್ರಾಮದಲ್ಲಿ ಮೂಡು ದಿಕ್ಕಿನಲ್ಲಿರುವ ಬಡಗೀಯವರ ಮನೇಸೊಸೇನೇ ಆ ಹುಡುಗಿ" ಎಂದಿತು ದೆವ್ವ.



"ಓಹೋ ! ಅವಳಿಗೆ ಏನು ಕಷ್ಟ ಬಂದಿತೋ ಪಾಪ !" ಎಂದು ಬ್ರಾಹ್ಮಣನು ಹೇಳಲು, "ಇನ್ನೇನಾಗಬೇಕು ? ಅವಳ ಅತ್ತೆ ನಾನಾ ಹಿಂಸೆ ಕೊಡುತ್ತ ಅವಳ ಪ್ರಾಣ ಕತ್ತರಿಸುತ್ತಿದ್ದಾಳೆ" ಎಂದಿತು ದೆವ್ವ.

"ಹಾಗಾದರೆ ನಿನಗೇಕೆ ಯೋಚನೆ ? ನಿನಗೆ ಯಾವ ಶ್ರಮವೂ ಇಲ್ಲದೆ ನಿನಗಾಗಬೇಕಾದ್ದು ಆ ಅತ್ತೆಯಿಂದಲೇ ಆಗುತ್ತದಲ್ಲಾ ?" ಎಂದ ಬ್ರಾಹ್ಮಣ.

"ಅದು ಅಷ್ಟೊಂದು ಸುಲಭವೇ ? ಆ ಸೊಸೆ ಹಾಗೆಲ್ಲಾ ಸಾಯುತ್ತಾಳೆಯೇ ? ನಾನು ಬಹಳ ಶ್ರಮಪಟ್ಟು ಉಪಾಯ ಮಾಡಬೇಕು, ಮಾಡಿದ್ದೇನೆ ಕೂಡಾ" ಎಂದಿತು ದೆವ್ವ.

"ಮಾಡಿದ್ದಿಯಾ ? ಅದು ನಡೆಯುವಂಥಾದ್ದೇನಾ ?" ಎಂದು ಕೇಳಿದ ಬ್ರಾಹ್ಮಣ.

"ಯಾಕೆ ನಡೆಯದು ? ನಾಳೆ ಆ ಅತ್ತೆ ಮಾರಮ್ಮ ವ್ರತ ಕೂತುಕೊಳ್ತಾಳೆ. ಅದಕ್ಕಾಗಿ ಒಂದು ಬುಟ್ಟಿ ಬಾಳೇ ಹಣ್ಣು ತರಿಸಿದ್ದಾಳೆ, ಮುತ್ತಯಿದೆಯರಿಗೆ ತಾಂಬೂಲದಲ್ಲಿಟ್ಟು ಕೊಡಲಿಕ್ಕೆ. ಈ ರಾತ್ರಿ ಆ ಬಾ... ಹಣ್ಣು ಬುಟ್ಟಿಯನ್ನು ಅಟ್ಟದ ಮೇಲೆ ಅಡಗಿ... ಬಿಡುತ್ತೇನೆ. ಆಗ ಆ ಕೋಪದ ಅತ್ತೆ ಸೊಸೆಯ... ನಾನಾ ಕೆಟ್ಟ ಮಾತು ಹೇಳಿ ಬಯ್ಯುತ್ತಾಳೆ. ಏ... ಅರಿಯದ ಸೊಸೆ ಗುಟ್ಟಾಗಿ ಬಾವಿಗೆ ಹಾರಿ ಪ್ರಾ... ಕಳಕೊಳ್ತಾಳೆ, ಹೇಗಿದೆ ?" ಎಂದು ದೆವ್ವ ಬ್ರಾಹ್ಮ... ನನ್ನು ಚುರಚುರಾ ನೋಡಿತು.

"ಎಲೆಲಾ ! ನಿನ್ನ ತಲೆಗೆ ಕೊಳ್ಳಿಯಿಕ್ಕ !" ಎಂ... ಕೊಂಡು ಬ್ರಾಹ್ಮಣನು, "ಬಹಳ ಚೆನ್ನಾಗಿದೆ. ... ನಾನು ಹೋಗುತ್ತೇನೆ. ಬಹಳ ಹೊತ್ತಾಯಿತು !" ಎಂದು ತನ್ನ ಗ್ರಾಮದ ಕಡೆಗೆ ಹೊರಟನು.

ಸ್ವಲ್ಪ ಹೊತ್ತಿನ ಮೇಲೆ ಅವನು ತನ್ನ ಮ... ಯನ್ನು ಸೇರಿ ಊಟ ಮಾಡಿ ಮಲಗಿ, ಬೆಳಗಾ... ಮೇಲೆ ಎದ್ದು, ಮೂಡುದಿಕ್ಕಿನಲ್ಲಿರುವ ಬಡಗಿ... ಮನೆಗೆ ಹೋದನು. ಅವನು ಆ ಮನೆಯ ಅಂಗ... ದಲ್ಲಿ ಕಾಲಿಟ್ಟಾಗಲೇ ಒಳಗಿನಿಂದ ದೊಡ್ಡ ದೊ... ಕೂಗುಗಳೂ, ಬೈಗುಳ ಬೊಬ್ಬೆಯೂ ಕೇಳಿ ಬರು... ದ್ದುವು. ಅತ್ತೆಯದೆ ಕೂಗಾಟ.

ಬ್ರಾಹ್ಮಣನು ಮೆಲ್ಲಗೆ ಒಳಗೆಹೋದಾಗ ಮನೆ... ಯಜಮಾನತಿ ಸೂರು ಎಗರಿಹೋಗುವ ಹಾ... ಸೊಸೆಯ ಮೇಲೆ ಬೈಗುಳ ಮಳೆ ಸುರಿಸುತ್ತಿದ್ದ... ಸೊಸೆ ಒಂದು ಮೂಲೆಯಲ್ಲಿ ಮುದುಡಿ ಕುಳಿ... ಕೊಂಡು ಬಿಕ್ಕಿಬಿಕ್ಕಿ ಅಳುತ್ತಿದ್ದಳು.

"ಏನು ಸಮಾಚಾರ ? ಏಕೆ ಈ ಕೋಪತಾಪ ?" ಎನ್ನುತ್ತಾ ಬ್ರಾಹ್ಮಣ ಒಳಗೆ ಹೊಕ್ಕು ಅತ್ತೆಗಿಂತಲೂ ಗಟ್ಟಿಯಾಗಿ ಕೂಗಿ ಕೇಳಿದ.

"ಈ ಕಳ್ಳ ಹುಡುಗಿಯನ್ನು ಮನೇಲಿಟ್ಟುಕೊಂ... ಬದುಕಲಾರೆನಪ್ಪಾ, ಸ್ವಾಮಿಗಳೇ ! ನನ್ನ ಕೈಮು... ನಾನು ಇಲ್ಲಿ ಇಟ್ಟಿದ್ದ ಹಣ್ಣಿನ ಬುಟ್ಟಿ ಮಾಯವಾಗಿ... ಈ ಹೊಟ್ಟೇ ಬಾಕಿಣಿ ಅಷ್ಟೂ ತಿಂದು ಹಾಕಿದ್ದಾ... ಕೇಳಿದರೆ ಒಂದೂ ಗೊತ್ತಿಲ್ಲಂತೆ ! ನಾನು ಅಷ್ಟ...

ತಿಳಿಯದ ಸಣ್ಣ ಕೂಸು ಆದುಕೊಂಡಿದ್ದಾಳೆ. ನಾಚಿಗೆಗೆಟ್ಟ ಇವಳ ಕಳಂಪಾರೀ ಹೊಟ್ಟೆಗೆ ಹಣ್ಣು ಹೇಗೆ ಸಾಕಾದೀತು ?..." ಎಂದು ಉಸಿರಿಗುಕ್ಕಲವಿಲ್ಲದಂತೆ ಹೇಳಿದಳು.

ಯಾಕೆ ಹೀಗೆ ಕೂಗಾಡ್ತೀರವ್ಮಾ ? ನಿಮ್ಮ ಹಣ್ಣಿನ ಬುಟ್ಟಿ ಅಟ್ಟದ ಮೇಲೆ ಇದೆ. ಹೋಗಿ ನೋಡಿ" ಎಂದ ಬ್ರಾಹ್ಮಣ.

"ಇಲ್ಲಿ ನಾನಿಟ್ಟ ಹಣ್ಣಿನ ಬುಟ್ಟಿ ಅಟ್ಟದ ಮೇಲೆ ತಾನಾಗಿ ಹೋಗುತ್ತೇನು ? ಅವಳೇ ಅಲ್ಲಿ ಅಡಗಿಸಿ ಇಟ್ಟಿದ್ದಾಳೇ ಅಂತ ಕಾಣುತ್ತೆ. ಇಲ್ಲಾ ಯಾರ ಹತ್ರಲೋ ಹೇಳಿ ಇಡಿಸಿದ್ದಾಳೆ. ಹೌದೇನೇ—" ಎಂದು ಅತ್ತೆ ಸೊಸೆಯನ್ನು ಚುರುಚುರು ನೋಡಿದಳು.

"ಮೊದಲು ಅಟ್ಟದ ಮೇಲೆ ನೋಡಿರವ್ಮಾ, ಅದು ಅಲ್ಲಿ ಉಂಟೋ ಇಲ್ಲವೋ ನನಗೂ ಗೊತ್ತಾಗಬೇಕು !" ಎಂದ ಬ್ರಾಹ್ಮಣ. ಅಟ್ಟದ ಮೇಲೆ ನೋಡಿದಾಗ ಅಲ್ಲಿ ಬಾಳೇಹಣ್ಣಿನ ಬುಟ್ಟಿ ಇದ್ದೇ ಇದ್ದಿತು. ಆಗ ಬ್ರಾಹ್ಮಣ "ಹಾಗಾದರೆ ರಾತ್ರಿಯಲ್ಲಿ ಆ ದೆವ್ವ ಹೇಳಿದ ಮಾತು ನಿಜವೇ ಅಂತ ಆಯಿತು ! ಎಂಥಾ ದೆವ್ವ !" ಎಂದ.


"ದೆವ್ವ ಹೇಳಿದ್ದಾ ? ಏನ್ರೀ ಅದು ಸ್ವಾಮಿ ?" ಎಂದು ಅತ್ತೆ ಅನುಮಾನದಿಂದಲೂ ಭೀತಿಯಿಂದಲೂ ಬ್ರಾಹ್ಮಣನ ಮುಖ ನೋಡಿದಳು.

ಬ್ರಾಹ್ಮಣನು ತನಗೆ ದೆವ್ವವು ಕಾಣಿಸಿ ಅದು ತನ್ನೊಂದಿಗೆ ಹೇಳಿದ ಮಾತುಗಳನ್ನೆಲ್ಲಾ ಹೇಳಿದನು. ಅತ್ತೆ ಆ ಬ್ರಾಹ್ಮಣನ ಧೈರ್ಯಕ್ಕೆ ಆಶ್ಚರ್ಯಪಟ್ಟಳು. ಸೊಸೆ ಅಳುವುದನ್ನು ಬಿಟ್ಟು ಮೆಲ್ಲನೆ ನಕ್ಕಳು.

ಬ್ರಾಹ್ಮಣ ತನ್ನ ಪ್ರಯತ್ನ ಫಲಕ್ಕೆ ಬರುವುದೆಂದುಕೊಂಡು, ಅತ್ತೆಯನ್ನು ಕುರಿತು, "ನೋಡಿದಿರಾ ಅವ್ಮಾ, ಈ ದಿನ ನಿಮ್ಮ ಸೊಸೆಯು ಆತ್ಮಹತ್ಯ ತಲೆ ಕೂದಲಿನಷ್ಟೇ ಅಂತರದಲ್ಲಿ ತಪ್ಪಿತು. ನಿಮ್ಮ ಸಿಟ್ಟು ಬುದ್ಧಿಯನ್ನು ಸ್ವಲ್ಪ ಬದಲಾವಣೆ ಮಾಡದೇ ಇದ್ದರೆ, ಈ ಹುಡುಗಿ ಯಾವುದೋ ಒಂದುದಿನ ತನ್ನ ಪ್ರಾಣಕ್ಕೆ ಘಾತ ಮಾಡಿಕೊಳ್ತಾಳೆ. ಆ ದೆವ್ವ ಮಾಡಿಬಿಡುತ್ತೇ ಅಂದೆ. ಕೋಪಕ್ಕೂ ದೆವ್ವಕ್ಕೂ ಗಂಟು! ಆಮೇಲೆ ನಿಮ್ಮ ಪಾಡು ಏನಾಗಬೇಕು. ಅದೆಲ್ಲಾ ಹೇಳಲಾರೆ ! ಇನ್ನು ನಿಮ್ಮಿಷ್ಟ !" ಎಂದನು.

ಅತ್ತೆ ಸೊಸೆಯ ಕಡೆಗೆ ತಿರುಗಿ, "ನನ್ನ ಮರ್ಯಾದಿ ತೆಗೆಯಬೇಡವೇ—ನನ್ನಮ್ಮ ! ನಿನಗೆ ಏನುಬೇಕಾದರೂ ತರಿಸಿಕೊಡುತ್ತೇನೆ. ಜೀವದ ಮೇಲೆ ಮಾತ್ರ ತಂದುಕೋ ಬೇಡ. ನಿನಗೆ ಪುಣ್ಯ ಬರುತ್ತೆ !" ಎಂದಳು.

ಇನ್ನು ಮೇಲೆ ಆ ಸೊಸೆಗೆ ಅತ್ತೆಯ ಕಾಟ ಬರಲಾರದೆಂದುಕೊಂಡು ಬ್ರಾಹ್ಮಣನು ಸಂತೋಷದಿಂದ ತನ್ನ ಮನೆಗೆ ಹೋದ. ದೆವ್ವದ ಭಯ ಅತ್ತೆಯನ್ನು ಒಳ್ಳೆಯವಳನ್ನಾಗಿ ಮಾಡಿತು.



ಯಾರ ಬಂಟ?

ಒಂದುದಿನ ಅಕ್ಬರ್ ಬೀರಬಲನೊಂದಿಗೆ ತಿರುಗಾಡುತ್ತಾ ಒಂದು ಬದನೇ ತೋಟವನ್ನು ನೋಡಿದ. ಗಿಡಗಳ ತುಂಬ ಬದನೇಕಾಯಿಗಳು ಬಲು ರಮ್ಯವಾಗಿದ್ದುವು.


"ಬದನೇಕಾಯಿಗಳು ಬಹಳ ಚೆನ್ನಾಗಿವೆ ಅಲ್ಲವೆ?" ಎಂದ ಅಕ್ಬರ್.

"ಚಿತ್ತ ಪ್ರಭೂ, ಬದನೇಕಾಯಿ ತರಕಾರಿಗಳಲ್ಲಿ ರಾಜನಿದ್ದ ಹಾಗೆ" ಎಂದ ಬೀರಬಲ.

"ಈ ಬದನೇಕಾಯಿ ನೋಡಲು ಚೆನ್ನಾಗಿರುತ್ತವೆಯೇ ಹೊರತು ತಿಂದರೆ ಕನರು; ಸ್ವಲ್ಪ ಬೆಳೆದರಂತೂ ಒಳಗೆಲ್ಲಾ ಬರೀ ಬೀಜಗಳೇ. ಬಾಯಿಗಿಡಲಿಕ್ಕಾಗದು" ಎಂದ ಅಕ್ಬರ್.

"ಹೌದು ಪ್ರಭುಗಳೇ. ಬದನೇಪಲ್ಯ ಆರೋಗ್ಯಗ್ಯೂ ಚೆನ್ನಾಗಿಲ್ಲ. ಯಾವ ರೋಗಕ್ಕೂ ಬದನೇಕಾಯಿ ಪಥ್ಯಕ್ಕೆ ಬರುವುದಿಲ್ಲ. ಅಷ್ಟೊಂದು ಕೆಟ್ಟ ತರಕಾರಿ ಬೇರಿಲ್ಲ" ಎಂದ ಬೀರಬಲ.

"ಇದೇ ಈಗ ಬದನೇಕಾಯನ್ನು ಮೆಚ್ಚಿದೆಯಲ್ಲಾ!" ಎಂದು ಅಕ್ಬರ್ ಆಶ್ಚರ್ಯದಿಂದ ಕೇಳಲು, ಬೀರಬಲ "ಹೌದು ಪ್ರಭೂ, ನಾನು ತಮ್ಮ ಉಪ್ಪು ತಿನ್ನುವ ಬಂಟನೇ ಹೊರತು ಬದನೇಕಾಯಿಗೆ ಬಂಟನಲ್ಲ!" ಎಂದನು.





ಕೇಳಲಾಗದ ಪ್ರಶ್ನೆ

[illegible]ನೊಂದು ದೇಶದಲ್ಲಿ ಒಂದು ಸರೋವರ [illegible]. ಆ ಸರೋವರದ ತೀರದಲ್ಲಿರುವ ಚಿಕ್ಕ ಮನೆ[illegible] ಒಬ್ಬ ಮುದುಕಿಯೂ, ಅವಳ ಯುವಕ [illegible]ನೂ ವಾಸವಾಗಿದ್ದರು. ತಾಯಿ ಪ್ರಾಯ[illegible]ದವಳಾದುದರಿಂದ ಹೆಚ್ಚು ಶ್ರಮಿಸಲು ಅವಳಿ[illegible]ಗಲಿಲ್ಲ. ಆದರೆ ಅವಳ ಮಗನು ಬಲಾಢ್ಯನಾಗಿದ್ದ. [illegible] ಎಷ್ಟು ಶ್ರಮಪಟ್ಟರೂ ಅವರ ಗುಡಿಸಲಿನಲ್ಲಿ [illegible]ದೇವತೆ ಶಾಶ್ವತವಾಗಿ ತಳವೂರಿ ಬಿಟ್ಟಿದ್ದಳು.

ಯುವಕನು ಯಾರದೋ ಒಂದು ಹೊಲವನ್ನು [illegible] ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದನು. [illegible]ಮಾಲೀಕನಿಗೆ ಅಳೆಯುವಷ್ಟು ಅಳೆದ ಮೇಲೆ, [illegible]ಯುವುದು ಆ ತಾಯಿ ಮಗಂದಿರಿಗೆ ವರ್ಷ[illegible] ಸಾಕಾಗುತಿದ್ದಿಲ್ಲ.

[illegible]ರಲ್ಲಿ ಅವನಿಗೊಂದು ಸಮಾಚಾರ ತಿಳಿಯ[illegible]. ಪಶ್ಚಿಮದ ಪರ್ವತದ ಮೇಲೆ ಪ್ರಶ್ನೆಗಳ [illegible]ಮಿಯೊಬ್ಬರಿದ್ದಾರಂತೆ. ಯಾರು ಯಾವ ಪ್ರಶ್ನೆ [illegible]ದರೂ ಆ ಸ್ವಾಮಿಗಳು ಪ್ರತ್ಯುತ್ತರ ಹೇಳುತ್ತಾ[illegible]. ಹಾಗಿದ್ದರೆ, ತಾನು ಇಷ್ಟೊಂದು ಸೊಂಟ [illegible] ದುಡಿಯುತ್ತಿದ್ದರೂ ತನ್ನ ದರಿದ್ರ ತೀರುವುದಿಲ್ಲವೇಕೆಂದು ಅವರನ್ನು ಕೇಳಿ ತಿಳಿಯಬಹುದಲ್ಲವೆ? ಈ ಕೋರಿಕೆ ಆ ಯುವಕನನ್ನು ಬಹಳ ದಿನಗಳಿಂದ ಬಾಧಿಸುತ್ತಿದ್ದರೂ ಅಲ್ಲಿಗೆ ಹೋಗಲು ಅವನಿಗೆ ತಕ್ಕ ಕಾಲವು ದೊರಕಿರಲಿಲ್ಲ. ಈ ಪ್ರಶ್ನೆಯಾದರೋ ಅವನ ಮಿದುಳನ್ನು ಕೊರೆಯುತ್ತಲೇ ಇದ್ದಿತು. ಅದಕ್ಕೆ ತಕ್ಕ ಸಮಾಧಾನ ತಿಳಿಯದೆ ಅವನಿಗೆ ನಿದ್ದೆ ಬಾರದಂತಾಯಿತು.

ಅಂತೆಯೇ ಒಂದು ದಿನ ಅವನು, ತಾನು ಪಶ್ಚಿಮ ಪರ್ವತದ ಸ್ವಾಮಿಯಬಳಿಗೆ ಹೋಗಿ ಬರುತ್ತೇನೆಂದು ತಾಯಿಯ ಹತ್ತಿರ ಹೇಳಿ ಅನುಮತಿ ಪಡೆದು, ಆ ಕಡೆಗೆ ಹೊರಟೇಬಿಟ್ಟನು.

ಅವನು ಏಳುದಿನ ಪ್ರಯಾಣ ಮಾಡಿ, ದಾರಿಯ ಬದಿಯಲ್ಲಿದ್ದ ಒಂದು ಗುಡಿಸಲಿನ ಹತ್ತಿರ ನಿಂತು ಬಾಗಿಲು ತಟ್ಟಿದನು. ಒಬ್ಬಳು ಮುದುಕಿ ಬಾಗಿಲು ತೆರೆದು, ಅವನನ್ನು ಒಳಕ್ಕೆ ಕರೆದಳು, ಬಳಿಕ ಅವನು ಯಾರು, ಯಾವ ಕೆಲಸಕ್ಕಾಗಿ ಎಲ್ಲಿಗೆ ಹೋಗುತ್ತಾನೆ ಎಂಬುದನ್ನೆಲ್ಲಾ ಕೇಳಿದಳು. ಯುವಕನು ಅವಳಿಗೆ ತನ್ನ ಸಂಗತಿಯನ್ನೆಲ್ಲಾ ಏನೂ ಮುಚ್ಚುಮರೆಯಿಲ್ಲದೆ ತಿಳಿಸಿದನು.

ಎಂ. ವಿಶ್ವನಾಥ ಶಾಸ್ತ್ರಿ



ಮುದುಕಿ ಯುವಕನಿಗೆ ಊಟ ಹಾಕಿ, ಆ ರಾತ್ರಿ ಮಲಗಲು ಅವನಿಗೆ ಸ್ಥಳವನ್ನು ಕೊಟ್ಟಳು. ಮರು ದಿನ ಬೆಳಿಗ್ಗೆ ಅವನು ಎದ್ದು ಪ್ರಯಾಣಕ್ಕೆ ಹೊರಟಾಗ, ಮುದುಕಿ, "ನೋಡಪ್ಪಾ, ಆ ಪ್ರಶ್ನೆಗಳ ಸ್ವಾಮಿ ಗಳನ್ನು ಕೇಳಿ ನನ್ನದೊಂದು ಪ್ರಶ್ನೆಗೆ ಪ್ರತ್ಯುತ್ತರ ತಿಳಿದುಕೊಂಡು ಬರುತ್ತೀಯಾ ? ನನ್ನ ಮಗಳು ತುಂಬ ಚೆಂದಾಗಿದ್ದಾಳೆ. ಆದರೆ ಮಾತೇ ಆಡುವುದಿಲ್ಲ. ಅವಳ ಮೂಕತನ ಹೋಗಲಿಕ್ಕೆ ಏನು ಚಿಕಿತ್ಸೆ ಮಾಡ ಬೇಕೆಂದು ಕೇಳಿಕೊಂಡು ಬರುವಿಯಾ ?" ಎಂದಳು. "ಹಾಗೆಯೇ ಆಗಲಮ್ಮ" ಎಂದು ಹೇಳಿ ಯುವಕನು ದಾರಿ ಹಿಡಿದನು.

ಅವನು ಮತ್ತೊಂದು ವಾರದವರೆಗೆ ಪ್ರಯಾಣ ಮಾಡಿ, ತುಂಬಾ ಬಳಲಿ ದಾರಿಯ ಬದಿಯಲ್ಲಿ ಸಿಕ್ಕಿದ ಇನ್ನೊಂದು ಮನೆಯ ಬಾಗಿಲು ತಟ್ಟಿದನು.

ಆ ಮನೆಯಲ್ಲಿ ಒಬ್ಬ ಮುದುಕನಿದ್ದ. ಅವನು ಬಾಗಿಲು ತೆರೆದು, ಯುವಕನ ಸ್ಥಿತಿಗತಿಯನ್ನು ತಿಳಿದು ಕನಿಕರಗೊಂಡು ಅವನಿಗೆ ಊಟ ಹಾಕಿದನು. ಅ[...] ಕೂಡಾ ಯುವಕನು ಹೊರಟ ಕಾರ್ಯ[...] ಕುರಿತು ಕೇಳಿದನು. ಯುವಕನು ಎಲ್ಲಾ ಸ[...] ಯನ್ನೂ ಆತನಿಗೂ ಹೇಳಿದನು.

ಆ ರಾತ್ರಿ ಯುವಕನು ಆ ಮನೆಯಲ್ಲೇ ಮ[...] ಮಾರುದಿನ ಬೆಳಿಗ್ಗೆ ಮತ್ತೆ ಪ್ರಯಾಣಕ್ಕೆ ಹೊರ[...] ಆ ಮನೆಯ ಮುದುಕ, "ನೋಡಪ್ಪಾ, ಹುಡು[...] ಆ ಪ್ರಶ್ನೆಗಳ ಸ್ವಾಮಿಯ ಹತ್ತಿರ ನನ್ನದೊ[...] ಪ್ರಶ್ನೆ ಕೇಳುವಿಯಾ ? ನನ್ನ ಮನೆಯ ಒಂ[...] ಯಲ್ಲಿರುವ ನಿಂಬೇ ಗಿಡವು ಬಹಳ ಚೆನ್ನಾಗಿ ಬೆ[...] ಹೂ ಬಿಡುತ್ತಿದೆ. ಆದರೆ ಕಾಯಿಮಾತ್ರ ಬಿ[...] ದಿಲ್ಲ. ಏನು ಮಾಡಿದರೆ ಕಾಯಿ ಬಿಡುವುದೆಂ[...] ಆ ಪ್ರಶ್ನೆಗಳ ಸ್ವಾಮಿಯನ್ನು ಕೇಳಿಕೊಂಡು ಬ[...] ವಿಯಾ ?" ಎಂದನು.

ಯುವಕನು ಹಾಗೆಯೇ ಆಗಲೆಂದು [...] ಮುಂದಕ್ಕೆ ಸಾಗಿದನು. ಕೆಲವು ದಿನಗಳಲ್ಲಿ ಅ[...] ಪಶ್ಚಿಮ ದಿಕ್ಕಿಗೆ ಮುಖ ಹಾಕಿ ನಡೆಯುತ್ತಿ[...] ದೂರದಲ್ಲಿ ಪಶ್ಚಿಮದ ಪರ್ವತ ಕಾಣಬಂದಿ[...] ಆದರೆ ದಾರಿಗೆ ಅಡ್ಡವಾಗಿ ದೊಡ್ಡದೊಂದು ಬೆ[...] ತೊರೆ ನೊರೆಗಳನ್ನು ಕಾರುತ್ತಾ ಕಡುವೇಗದಿ[...] ಪ್ರವಹಿಸಿಕೊಂಡಿತ್ತು. ಅದನ್ನು ಹೇಗೆ ದಾ[...] ಬೇಕೆಂದು ಯುವಕನಿಗೆ ಗೊತ್ತಾಗಲಿಲ್ಲ. ಸು[...] ಮುತ್ತಲೂ ನೋಡಿದಾಗ ಅದನ್ನು ದಾಟ[...] ಸಂಕವೋ, ಪಾವೋ ಏನೊಂದೂ ಕಾಣಸಲಿ[...] ಈಜಲೂ ಸಾಧ್ಯವಿಲ್ಲದಂತೆ ಉರುಳಿ ಹೊ[...] ಓಡುತ್ತಿರುವ ತೊರೆ.

ಇಷ್ಟುದೂರ ಬಂದುದೂ ವ್ಯರ್ಥವಾಯಿತ[...] ಇನ್ನೇನು ಮಾಡೋಣವೆಂದು ಯುವಕನು ಒಂ[...] ಬಂಡೆಕಲ್ಲಿನ ಮೇಲೆ ಕುಸಿಕುಳಿತು ಆಲೋಚನೆ ಮಾ[...] ತ್ತಿದ್ದನು. ಆಗ ಆ ತೊರೆಯೊಳಗಿನಿಂದ ಒಂ[...] ಮಹಾ ಸರ್ಪವು ಮೇಲಕ್ಕೆದ್ದಿತು. ಅದನ್ನು ನೋ[...]


ಯುವಕನು ಹೆದರಿ, ನಾಲ್ಕು ಹೆಜ್ಜೆ ಹಿಂದೆ ಹಾರಿದ.

"ನನ್ನನ್ನು ನೋಡಿ ಏಕೆ ಹೆದರುವೆಯಪ್ಪಾ ಹುಡುಗಾ? ನಾನು ಯಾರಿಗೂ ಎಂತಹ ಅಪಕಾರವನ್ನೂ ಮಾಡಲಾರೆ. ನೀನು ಇಲ್ಲಿಗೆ ಬಂದು ಏನು ಮಾಡುವಿ? ಏಕೆ ಬಂದೆ?" ಎಂದು ಆ ಮಹಾ ಸರ್ಪ ಕೇಳಿತು. ಯುವಕನು ಧೈರ್ಯಗೊಂಡು ಅದರೊಂದಿಗೆ ತಾನು ಹೊರಟು ಬಂದ ಕೆಲಸವನ್ನು ಕುರಿತು ಎಲ್ಲವನ್ನೂ ಹೇಳಿದನು.

"ಹಾಗೆಯೇ ಆ ಪ್ರಶ್ನೆಗಳ ಸ್ವಾಮಿಯ ಹತ್ತಿರ ನನ್ನದೊಂದು ಪ್ರಶ್ನೆ ಕೂಡಾ ಕೇಳುವಿಯಾ? ನಾನು ಯಾರಿಗೂ ಯಾವ ಬಗೆಯ ಹಾನಿಯನ್ನೂ ಮಾಡದೆ, ಈ ತೊರೆಯಲ್ಲೇ ಸೆರೆಯಲ್ಲಿರುವ ಹಾಗೆ ಇದ್ದೇನೆ. ನನಗೆ ಯಾವಾಗ ಸ್ವರ್ಗ ಪ್ರಾಪ್ತಿಯಾಗುತ್ತದೆ ಎಂಬುದನ್ನು ತಿಳಿದು ಬಾರಪ್ಪ" ಎಂದಿತು ಮಹಾ ಸರ್ಪ.

"ನನ್ನನ್ನು ಈ ಭಯಂಕರವಾದ ತೊರೆಯಿಂದ ಆಚೆಗೆ ದಾಟಿಸಿಬಿಟ್ಟರೆ ಹಾಗೆಯೇ ತಿಳಿದುಕೊಂಡು ಬರುತ್ತೇನೆ" ಎಂದ ಯುವಕ.

"ನಿನ್ನನ್ನು ನಾನು ದಾಟಿಸುತ್ತೇನೆ. ಹೆದರದೆ ನನ್ನ ಮೇಲೆ ಕೂಡು" ಎಂದು ಆ ಮಹಾಸರ್ಪವು ಯುವಕನನ್ನು ತನ್ನ ಭುಜದ ಮೇಲೆ ಏರಿಸಿಕೊಂಡು ಹೋಗಿ ಆಚೆಯ ದಂಡೆಯ ಮೇಲೆ ಬಿಟ್ಟಿತು. ಯುವಕನು ಪಶ್ಚಿಮ ಪರ್ವತದ ಬಳಿಗೆ ತಲಪಿ ಮೇಲೇರಿದನು. ಪರ್ವತದ ಮೇಲೆ ಅವನಿಗೊಂದು ವಿಶಾಲವಾದ ನಗರವು ಕಾಣಿಸಿತು. ನಗರದ ಮಧ್ಯದಲ್ಲಿ ಎತ್ತರವಾದ ಪ್ರಾಕಾರಗಳ ನಡುವೆ ದೊಡ್ಡದೊಂದು ಭವನವಿದ್ದಿತು. ಪ್ರಶ್ನೆಗಳ ಸ್ವಾಮಿ ಎಲ್ಲಿರುವರೆಂದು ವಿಚಾರಿಸಿದಾಗ, ಆ ಭವನ ದೊಳಗಿರುವರೆಂದು ಗೊತ್ತಾಯಿತು. ಯುವಕನಿಗೆ ಆ ಭವನದೊಳಗೆ ಹೋಗಲಿಕ್ಕೂ, ಸ್ವಾಮಿಗಳ ದರ್ಶನವಾಗಲಿಕ್ಕೂ ಏನೇನೂ ಕಷ್ಟವಾಗಲಿಲ್ಲ. ಯುವಕನು ಸ್ವಾಮಿಯ ಪಾದಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿ,



"ಸ್ವಾಮೀ, ನಾನು ನನ್ನ ಪಕ್ಷವಾಗಿ ಮತ್ತು ಬೇರೆಯವರ ಪಕ್ಷವಾಗಿ, ತಮ್ಮ ಹತ್ತಿರ ನಾಲ್ಕು ಪ್ರಶ್ನೆಗಳನ್ನು ಕೇಳಿ ಪ್ರತ್ಯುತ್ತರ ತಿಳಿದುಕೊಂಡು ಹೋಗೋಣವೆಂದು ಬಹಳ ದೂರದಿಂದ ಬಂದಿದ್ದೇನೆ. ಅನುಗ್ರಹ ಮಾಡಬೇಕು" ಎಂದು ಕೇಳಿದನು.

"ಮೂರು ಪ್ರಶ್ನೆಗಳಿಗೆ ಮೇಲೆ ಉತ್ತರ ಕೊಡಲಾರೆ. ಯಾರ ಪ್ರಶ್ನೆಗಳಾದರೂ ಸರಿಯೇ. ಮೂರು ಮಾತ್ರ ಕೇಳು" ಎಂದರು ಸ್ವಾಮಿಗಳು. ಅವರ ಧ್ವನಿಯಲ್ಲಿ ದೃಢನಿರ್ಧಾರವಿದ್ದಿತು.

ಯುವಕನು ಸ್ವಲ್ಪ ಹೊತ್ತು ಆಲೋಚನೆ ಮಾಡಿ, ತನ್ನ ಪ್ರಶ್ನೆಯನ್ನು ಬಿಟ್ಟು ಕೊಟ್ಟು, ಉಳಿದ ಮೂವರ ಪ್ರಶ್ನೆಗಳನ್ನುಮಾತ್ರ ಕೇಳಿದನು. ಸ್ವಾಮಿಗಳು ಮೂರು ಪ್ರಶ್ನೆಗಳಿಗೂ ಸರಿಯಾದ ಸಮಾಧಾನವನ್ನು ಹೇಳಿದರು. ಯುವಕನು ಮತ್ತೊಂದುಸಾರಿ ಸ್ವಾಮಿಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ತಿರುಗಿ ಪ್ರಯಾಣವನ್ನು ಪ್ರಾರಂಭಿಸಿದನು.



ಅವನು ಬೆಟ್ಟದ ತೊರೆಯಬದಿಗೆ ಬಂದಾಗ ಮಹಾ ಸರ್ಪವು ಅವನ ದಾರಿಯನ್ನೇ ಕಾದು ಕೊಂಡಿದ್ದಿತು. "ನನ್ನ ಪ್ರಶ್ನೆಗೆ ಸಮಾಧಾನ ತಿಳಿದು ಕೊಂಡೆಯಾ ?" ಎಂದು ಕೇಳಿತು ಆ ಸರ್ಪ.

"ತಿಳಿದುಕೊಂಡೆ. ನೀನು ಎರಡು ಸತ್ಕಾರ್ಯಗಳನ್ನು ಮಾಡಿದರೆ ನಿನಗೆ ಸ್ವರ್ಗ ಪ್ರಾಪ್ತಿಯಾಗುತ್ತದಂತೆ" ಎಂದ ಯುವಕ.

"ಎರಡು ಸತ್ಕಾರ್ಯಗಳೆಂದರೆ ಯಾವುದು ?" ಎಂದು ಕೇಳಿತು ಸರ್ಪ.

"ಒಂದನೆಯದಾಗಿ ನನ್ನನ್ನು ಈ ತೊರೆಯಿಂದ ಆಚೆಗೆ ದಾಟಿಸು" ಎಂದು ಹೇಳಿದ ಯುವಕ. ಸರ್ಪವು ಅವನನ್ನು ತನ್ನ ಮೇಲೆ ಏರಿಸಿಕೊಂಡು ಆಚೆಗೆ ಒಯ್ದುಬಿಟ್ಟು, "ಎರಡನೆಯದೇನು ?" ಎಂದು ಕೇಳಿತು.

"ನಿನ್ನ ನೆತ್ತಿಯಲ್ಲಿ ಒಂದು ಮಣಿ ಇದೆಯಂತೆ. ಅದು ಕತ್ತಲೆಯಲ್ಲಿ ಪ್ರಕಾಶಿಸುತ್ತದಂತೆ. ಅದನ್ನು ನೀನು ವಿಸರ್ಜಿಸಬೇಕು" ಎಂದ ಯುವಕ. ಕೂ... ಮಹಾಸರ್ಪವು ತಲೆಬಾಗಿಸಿ, "ಅದನ್ನು ತೆಗೆದುಕೋ" ಎಂದಿತು. ಯುವಕನು ಸ... ತಲೆಯ ಮೇಲಿನ ಮಣಿಯನ್ನು ಹಿಡಿದು ಎಳೆ... ಮಣಿ ಅವನ ಕೈಗೆ ಬರುವಾಗ ಸರ್ಪವು ... ಗಂಧರ್ವನಾಗಿ ಮಾರ್ಪಟ್ಟಿತು. ಆ ಗಂಧರ್ವ... ಆಕಾಶದಲ್ಲಿ ಹಾರಿ ಹೋಗುತ್ತ,

"ಆ ಮಣಿಯನ್ನು ನೀನೇ ಇಟ್ಟುಕೋ" ಎಂ... ಕೂಗಿ ಹೇಳಿ, ಮೋಡಗಳ ಮರೆಯಲ್ಲಿ ಮಾ...ವಾಗಿ ಹೋದನು.

ತರುವಾಯ ಕೆಲವು ದಿನಗಳ ಮೇಲೆ ಯುವಕ... ಮುದುಕನ ಮನೆಯನ್ನು ತಲಪಿ, ಆ ಮುದು... ಪ್ರಶ್ನೆಗೆ ಉತ್ತರವಾಗಿ, "ಅಯ್ಯಾ, ನಿಮ್ಮ ಮ... ನಿಂಬೇ ಗಿಡದ ಕೆಳಗೆ ಹೇರಳವಾಗಿ ಬೆಳ್ಳಿ ಬಂಗಾ...ಗಳನ್ನು ಹುಗಿದಿಡಲ್ಪಟ್ಟಿರುವುದಂತೆ. ಅದನ್ನೆಲ್ಲ ಅಗೆ... ತೆಗೆದುಬಿಟ್ಟರೆ ನಿಂಬೆ ಕಾಯಿ ಬಿಡುತ್ತದೆಂದು ಸ್ವಾ...ಗಳು ಹೇಳಿದ್ದಾರೆ" ಎಂದನು.

ಕೂಡಲೇ ಮುದುಕನೂ ಅವನ ಮಗನೂ ಕ... ನಿಂಬೇಗಿಡದ ಕೆಳಗೆ ಅಗೆಯಲು ತೊಡಗಿದರು. ... ನಿಜವಾಗಿ ಬೆಳ್ಳಿ ಬಂಗಾರದ ನಿಧಿ ದೊರೆಯಿತು. ಆ... ಅವುಗಳನ್ನು ಮೇಲಕ್ಕೆ ಎತ್ತಿಕೊಳ್ಳಲು ಅವರಿಬ್ಬರಿ... ಸಾಧ್ಯವಾಗಲಿಲ್ಲ. ಅವರಿಗೆ ಯುವಕನು ಕೂ... ಸಹಾಯಮಾಡಿ, ಬಹಳ ಭಾರವಾದ ಆ ನಿ...ಗಳನ್ನು ಮೇಲಕ್ಕೆ ಎಳೆದನು.

ಮುದುಕನು ಕೃತಜ್ಞತೆಯಿಂದ ಯುವಕ... ಕುರಿತು, "ಅಪ್ಪಾ, ನಿನಗೆ ಬಹಳ ಋಣಿಯಾಗಿದ್ದೇ... ನೀನು ಎಷ್ಟು ಹೊತ್ತು ಕೊಂಡು ಹೋಗುವಿಯೋ ಅಷ್ಟು ಬೆಳ್ಳಿ, ಬಂಗಾರ ತೆಗೆದುಕೊಂಡು ಹೋಗು... ಎಲ್ಲಾ ನಿನ್ನದೇ" ಎಂದನು.

ಯುವಕನು ತಾನು ಹೊರಲು ಸಾಧ್ಯವಾಗುವ... ಬೆಳ್ಳಿ, ಬಂಗಾರವನ್ನು ಗಂಟು ಕಟ್ಟಿಕೊಂಡು, ಅಲ್ಲಿ...

ಹೊರಟು ಕೆಲವು ದಿನಗಳಲ್ಲಿ ಮುದುಕಿಯ ಮನೆಯನ್ನು ಸೇರಿ, ಅವಳ ಪ್ರಶ್ನೆಗೆ ಉತ್ತರವಾಗಿ, "ನಿನ್ನ ಮಗಳನ್ನು ಮದುವೆಯಾಗುವವನನ್ನು ನೋಡಿದ ಕೂಡಲೇ ಅವಳಿಗೆ ಮಾತು ಬರುತ್ತದಂತೆ" ಎಂದನು.

ಅವನು ಹೀಗೆ ಹೇಳುತ್ತಿರುವಾಗಲೇ ಮುದುಕಿಯ ಮಗಳು ಹೊರಗೆ ಬಂದು, "ಯಾರಮ್ಮಾ ಇವನು?" ಎಂದು ಕೇಳಿದಳು.

ತನ್ನ ಮಗಳ ಬಾಯಿಯಿಂದ ಮಾತು ಹೊರಟ ಕೂಡಲೇ ಮುದುಕಿ ಅತ್ಯಂತ ಸಂತೋಷಗೊಂಡು, "ಅರರೇ, ನನ್ನ ಮಗಳಿಗೆ ಮಾತು ಬಂದಿತು ! ನೀನೇ ಇವಳ ಗಂಡನಪ್ಪಾ. ನಿನ್ನ ಜತೆ ಇವಳನ್ನೂ ಕರೆದುಕೊಂಡು ಹೋಗಿ ಮದುವೆ ಮಾಡಿಕೋ" ಎಂದಳು.

ಅದರಂತೆಯೇ ಯುವಕನು ಆ ಹುಡುಗಿಯನ್ನು ಕರೆದುಕೊಂಡು ಅಲ್ಲಿಂದ ಹೊರಟು ಕೆಲವು ದಿನಗಳಲ್ಲಿ ತನ್ನ ಮನೆಗೆ ತಲಪಿದನು. ಆಗ ಅವನ ಮುದಿ ತಾಯಿ ಬಹಳ ಹೀನ ಸ್ಥಿತಿಯಲ್ಲಿದ್ದಳು. ಮಗನು ಹೋಗಿ ಬಹಳ ದಿನಗಳಾದರೂ ತಿರುಗಿ ಬಾರದಿರಲು; ದಾರಿಯಲ್ಲೆಲ್ಲೋ ಸತ್ತು ಹೋಗಿರಬಹುದೆಂದುಕೊಂಡು ಒಂದೇ ಸಮನೆ ಕಣ್ಣೀರಿಳಿಸುತ್ತ, ಹಗಲೂ ರಾತ್ರಿಯೂ ಅತ್ತು, ಅತ್ತು ತನ್ನ ಕಣ್ಣುಗಳನ್ನೇ ಕಳೆದುಕೊಂಡಿದ್ದಳು.

"ಅಮ್ಮಾ, ನಿನಗೆ ಒಬ್ಬಳು ಸೊಸೆಯನ್ನು ತಂದಿದ್ದೇನೆ" ಎನ್ನುತ್ತಾ ಯುವಕನು ತಾನು ಕರೆದು ತಂದಿರುವ ಹುಡುಗಿಯನ್ನು ತಾಯಿಯ ಬಳಿಗೆ ತಳ್ಳಿದನು. ಅವನ ತಾಯಿ ಆ ಹುಡುಗಿಯನ್ನು ಬಳಿಗೆ ಸೆಳೆದುಕೊಂಡು ಮುಖವನ್ನು ತಡವಿ, ತಲೆಯನ್ನು ನೀವಿ "ನನ್ನಮ್ಮ" ಎನ್ನುತ್ತಾ ಮುದ್ದು ಮಾಡಿದಳು.

"ಇಕೋ ಅಮ್ಮಾ, ಒಂದು ಮಣಿಯನ್ನೂ ತಂದಿದ್ದೇನೆ" ಎಂದು ಯುವಕನು ತಾನು ತಂದ ಮಣಿಯನ್ನು ಅವಳ ಮುಖದ ಹತ್ತಿರ ಹಿಡಿದನು. ಅವಳು ಆ ಮಣಿಯನ್ನು ತಡವುತ್ತ, "ನಿನ್ನನ್ನು ಕುರಿತು ಅತ್ತು ಅತ್ತು ನನ್ನ ದೃಷ್ಟಿಯನ್ನೇ ಕಳೆದುಕೊಂಡೆನಪ್ಪಾ !" ಎಂದಳು.

"ಅಯ್ಯೋ ! ಅಮ್ಮಾ ! ನಿನಗೆ ಕಣ್ಣಿರುತ್ತಿದ್ದರೆ ನಿನ್ನ ಸೊಸೆಯನ್ನೂ ಈ ಮಣಿಯನ್ನೂ, ನಾನು ತಂದ ಬೆಳ್ಳಿ ಬಂಗಾರವನ್ನೂ ನೋಡಿ ಸಂತೋಷ ಪಡುತ್ತಿದ್ದೆ !" ಎಂದು ಹೇಳಿದನೋ ಇಲ್ಲವೋ, ಅವನ ತಾಯಿಗೆ ದೃಷ್ಟಿ ಬಂದುಬಿಟ್ಟಿತು. ಆ ಮಣಿಗೆ ಕೋರಿದ ವರಗಳನ್ನು ಕೊಡುವ ಪ್ರಭಾವವಿರುವಂತೆ ಇದರಿಂದ ಸ್ಪಷ್ಟವಾಯಿತು. ಅವನು ಸ್ವಾಮಿಗಳನ್ನು ಕೇಳಲಾಗದ ಪ್ರಶ್ನೆಗೆ ಸಮಾಧಾನವೂ ದೊರಕಿತ್ತು. ಅವನು ಕರೆತಂದ ಹುಡುಗಿಯನ್ನು ಗೌಜಿಯಿಂದ ಮದುವೆ ಮಾಡಿಕೊಂಡನು. ಯಾವ ಕೊರತೆಯೂ ಇಲ್ಲದೆ ಅವನು ಹೆಂಡತಿಯೊಂದಿಗೂ, ತಾಯಿಯೊಂದಿಗೂ ಸುಖವಾಗಿದ್ದನು.



"ನಿಮಗಿಂತ ವಾಸಿ!"

ಒಂದು ಗ್ರಾಮಕ್ಕೆ ಒಬ್ಬ ಯೋಗಿ ಬಂದನು. ಅವನು ಯಾರೊಂದಿಗೂ ಮಾತಾಡುವುದಿಲ್ಲ; ಮೌನಸ್ವಾಮಿ. ಯಾರಾದರೂ ಕೊಟ್ಟರೆ ತಿನ್ನುವನು, ಇಲ್ಲದಿದ್ದರೆ ಇಲ್ಲ.


ಆ ಊರಿನಲ್ಲಿರುವ ರಾಮದಾಸನೆಂಬವನಿಗೆ ಈ ಯೋಗಿಯ ಸಂಗತಿ ತಿಳಿಯಿತು. ಯೋಗಿಗೆ ಉಪವಾಸದ ಕಷ್ಟ ಬಾರದಂತೆ ಅವನು ದಿನಾ ಹಣ್ಣೋ, ಹಾಲೊ, ಭಕ್ಷ್ಯಗಳೋ, ಏನಾದರೂ ತಂದು ಕೊಡುತ್ತಿದ್ದನು. ಯೋಗಿ ಮೌನವಾಗಿ ಸ್ವೀಕರಿಸಿಕೊಳ್ಳುವನು.

ಆ ಗ್ರಾಮದಲ್ಲಿ ನೀಲಕಂಠಶಾಸ್ತ್ರಿ ಬಹುದೊಡ್ಡ ಪಂಡಿತ. ಸಕಲ ವೇದ ಶಾಸ್ತ್ರಗಳನ್ನೂ ಚೆನ್ನಾಗಿ ತಿಳಿದುಕೊಂಡು, ಅನೇಕ ಮಂದಿ ಶಿಷ್ಯರನ್ನೂ ಮಾಡಿಕೊಂಡಿದ್ದ. ರಾಮದಾಸನು ದಿನಾ ಮಾಡುವ ಕೆಲಸವನ್ನು ನೋಡಿ ಈ ಶಾಸ್ತ್ರಿ ಬಹಳ ಅಸೂಯೆಗೊಂಡನು. ರಾಮದಾಸನು ತನ್ನ ಹತ್ತಿರ ಶಿಷ್ಯನಾಗಿ ಸೇರಿ, ಅವನಿಗೆ ಕೊಡುವುದನ್ನೆಲ್ಲಾ ತನಗೇ ಸಮರ್ಪಿಸಬೇಕೆಂದಿತ್ತು.

ಈ ಕೋರಿಕೆಯನ್ನು ತಾಳಲಾರದೆ ಒಂದುದಿನ ನೀಲಕಂಠಶಾಸ್ತ್ರಿ ರಾಮದಾಸನೊಂದಿಗೆ, ಇತ್ತೀಚೆಗೆ ನೀನು ಆ ಹುಚ್ಚನ ಸೇವೆಯಲ್ಲಿ ಬಿದ್ದಿರುವಿಯೇಕೋ? ಅವನೇನು ವೇದಗಳನ್ನು ಓದಿದ್ದಾನೆಯೆ? ಶಾಸ್ತ್ರಗಳನ್ನು ತಿಳಿದಿದ್ದಾನೆಯೆ? ಮಹಾಘಟಿಂಗ, ಹುಚ್ಚ!" ಎಂದನು.

"ಅದೇನೋ ನಾನರಿಯೆ ಶಾಸ್ತ್ರಿಗಳೇ; ಅವನನ್ನು ಕುರಿತು ನನಗೇನೂ ಗೊತ್ತಿಲ್ಲ. ಆದರೆ ಒಂದು ಮಾತ್ರ ನಿಜ. ಆ ಪುಣ್ಯಾತ್ಮನು ಇನ್ನೊಬ್ಬನನ್ನು ಬಾಯಿತೆರೆದು ದೂರಿದ್ದನ್ನು ನಾನು ಕೇಳಲಿಲ್ಲ" ಎಂದು ಹೇಳಿ ರಾಮದಾಸನು ಹೊರಟು ಹೋಗಿಬಿಟ್ಟ.





೩೬. ಸಾವಿತ್ರೀ ಸತ್ಯವಂತರ ಕಥೆ

ಪಾಂಡವರು ಸೈಂಧವನನ್ನು ಹಿಡಿದು ಅವಮಾನ ಮಾಡಿ ಕಳುಹಿಸಿದ ಮೇಲೆ ಕಾಮ್ಯಕವನದಲ್ಲಿ ನೆಮ್ಮದಿಯಾಗಿದ್ದರು. ಹಾಗಿರುವಾಗ ಒಂದುದಿನ ಮಾರ್ಕಂಡೇಯನು ಅವರಬಳಿಗೆ ಬಂದನು. ಅವನು ಪಾಂಡವರ ಯೋಗಕ್ಷೇಮಗಳನ್ನು ಕುರಿತು ವಿಚಾರಿಸುವಾಗ, ಧರ್ಮರಾಜನು ಅವನೊಂದಿಗೆ, ತಾವು ಅನುಭವಿಸುವ ಕಷ್ಟಗಳನ್ನೂ, ತಮ್ಮೊಂದಿಗೆ ದ್ರೌಪದಿ ಕೂಡಾ ಪಡಬಾರದ ಕಷ್ಟಗಳಿಗೆ ಈಡಾಗಿರುವುದನ್ನೂ ಹೇಳಿ, "ಮಹಾತ್ಮಾ, ಪೂರ್ವದಲ್ಲಿ ಯಾವ ಪತಿವ್ರತೆಯಾದರೂ ದ್ರೌಪದಿಯ ಹಾಗೆ ಕಷ್ಟಗಳನ್ನು ಅನುಭವಿಸಿದ್ದಾಳೆಯೆ ?'' ಎಂದು ಕೇಳಿದನು.

"ಯಾಕಿಲ್ಲ ?'' ಎಂದು ಮಾರ್ಕಂಡೇಯನು ಪಾಂಡವರಿಗೆ ಸಾವಿತ್ರೀ ಸತ್ಯವಂತರ ಕಥೆಯನ್ನು ವಿವರಿಸಿ ಹೇಳಿದನು.

ಪೂರ್ವಕಾಲದಲ್ಲಿ ಮದ್ರದೇಶವನ್ನು ಅಶ್ವಪತಿ ಎಂಬ ಧರ್ಮಾತ್ಮನು ಪಾಲನೆ ಮಾಡಿಕೊಂಡಿದ್ದನು. ಅವನಿಗೆ ಮಕ್ಕಳಿರಲಿಲ್ಲ. ಆದುದರಿಂದ ಅವನು ಕಠಿನ ನಿಯಮಗಳಿಂದ ಸಾವಿತ್ರೀ ದೇವತೆಯನ್ನು ಉಪಾಸನೆ ಮಾಡುತ್ತ, ವ್ರತಹಿಡಿದು ಹೋಮಗಳನ್ನು ಮಾಡಿದನು. ಕೊನೆಗೆ ಹೋಮಕುಂಡದಿಂದ ಸಾವಿತ್ರೀದೇವಿ ಪ್ರತ್ಯಕ್ಷಳಾಗಿ ಏನುಬೇಕೆಂದು ಕೇಳಿದಳು.

ಅದಕ್ಕೆ ಅಶ್ವಪತಿ ರಾಜನು, "ದೇವೀ, ವಂಶೋದ್ಧಾರಕರಾದ ಪುತ್ರರುಬೇಕು. ಕರುಣಿಸು'' ಎಂದು ಕೇಳಿಕೊಂಡನು.

"ರಾಜಾ, ನಿನ್ನ ಕೋರಿಕೆಯನ್ನು ತಿಳಿದುಕೊಂಡು ನಾನು ಈ ಮೊದಲೇ ಬ್ರಹ್ಮನನ್ನು ಕೇಳಿದೆ. ಅವನು ನಿನಗೆ ಒಬ್ಬಳು ಮಗಳನ್ನು ಮಾತ್ರ ಕೊಡಲು ಒಪ್ಪಿಗೆಯಿತ್ತಿದ್ದಾನೆ. ಆದುದರಿಂದ ನೀನು ಅದೇ ಮಹಾಪ್ರಸಾದವನ್ನಾಗಿ ಭಾವಿಸಿ ತೃಪ್ತನಾಗಿರು'' ಎಂದು ಹೇಳಿ ಸಾವಿತ್ರೀದೇವಿ ಅದೃಶ್ಯಳಾದಳು.

ಆಮೇಲೆ ಅಶ್ವಪತಿರಾಜನು ತನ್ನ ವ್ರತವನ್ನು ಬಿಟ್ಟು, ನಗರಕ್ಕೆ ಹಿಂದಿರುಗಿಬಂದು ಯಥಾಪ್ರಕಾರ ರಾಜ್ಯಭಾರ ಮಾಡುತ್ತಾ ಇರುವಾಗ ಅವನ ಹೆಂಡತಿ ಗರ್ಭಿಣಿಯಾಗಿ, ತಿಂಗಳು ತುಂಬಿ, ಒಂದು ಶುಭ



ಮುಹೂರ್ತದಲ್ಲಿ ಸುಂದರವಾದೊಂದು ಹೆಣ್ಣು ಮಗುವನ್ನು ಪ್ರಸವಿಸಿದಳು. ಅಶ್ವಪತಿರಾಜನು ತುಂಬ ಸಂತೋಷದಿಂದ ಮಗುವಿಗೆ ವಿಧಿಪ್ರಕಾರ ಜಾತಕರ್ಮಾದಿಗಳನ್ನು ನೆರವೇರಿಸಿ. ಸಾವಿತ್ರೀದೇವಿಯ ವರದಿಂದ ಹುಟ್ಟಿದ ಆ ಮಗುವಿಗೆ ಸಾವಿತ್ರಿ ಎಂದು ನಾಮಕರಣ ಮಾಡಿದನು.

ಸಾವಿತ್ರಿ ದಿನದಿಂದ ದಿನಕ್ಕೆ ಬಳೆಯುತ್ತ, ಬಾಲಲೀಲೆಗಳಿಂದ ಎಲ್ಲರನ್ನೂ ಸಂತೋಷ ಪಡಿಸುತ್ತ, ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಸುಂದರಿಯಾಗಿ ಕಾಣಿಸುತ್ತ, ನೋಡುವವರಿಗೆ ದೇವತಾಸ್ತ್ರೀಯೋ, ಸಾವಿತ್ರೀ ದೇವಿಯೇ ಮನುಷ್ಯ ಜನ್ಮ ಎತ್ತಿದಳೋ ಎನಿಸುತ್ತ ಪ್ರಾಯಕ್ಕೆ ಬಂದಳು. ಇವಳಿಗೆ ತಕ್ಕ ವರನು ಯಾವನೋ ಎಲ್ಲಿರುವನೋ ಎಂಬ ಯೋಚನೆ ಅಶ್ವಪತಿ ರಾಜನಿಗೆ ಹಿಡಿಯಿತು.

ಒಂದುದಿನ ಅಶ್ವಪತಿ ರಾಜನು ಪ್ರಿಯ ಮಗಳನ್ನು ಕುರಿತು, "ಅಮ್ಮಾ, ನಿನಗೆ ಮದುವೆಯ ವಯಸ್ಸು ಬಂತು. ಯಾವ ಕಾರಣದಿಂದಲೋ ಒಬ್ಬ ರಾ ಕುಮಾರನಾದರೂ ನಿನ್ನನ್ನು ಮದುವೆಯಾಗಲು ಮುಂದೆ ಬರುವುದು ಕಾಣುವುದಿಲ್ಲ. ನಿನಗೆ ತಕ್ಕ ನಾದ ಗಂಡನನ್ನು ನೀನಾದರೂ ಹುಡುಕಿಕೊಂಡು ಬಂದು, ನನಗೆ ಹೇಳು. ನಾನು ನಿನ್ನನ್ನು ಅವನಿ ಧಾರೆಯೆರೆದು ಕೊಟ್ಟು ನನ್ನ ಧರ್ಮವನ್ನು ನೆರವೇ ಸುತ್ತೇನೆ" ಎಂದನು.

ಹಾಗೆಯೇ ಆಗಲೆಂದು ಹೇಳಿ ಸಾವಿತ್ರಿ ರ ವನ್ನೇರಿ, ತನಗೆ ತಕ್ಕ ವರನಾಗ ತಕ್ಕವನನ್ನು ಹುಡು ಕುತ್ತ, ರಾಜರ್ಷಿಗಳು ವಾಸಮಾಡಿಕೊಂಡಿರು ಆಶ್ರಮಗಳ ದಾರಿಯಾಗಿ ಹೊರಟಳು.

ಸಾವಿತ್ರಿ ಹಾಗೆ ತಿರುಗುತ್ತಾ ಇರುವಾಗ ಒಂದು ದಿನ ನಾರದ ಮಹಾ ಮುನಿ ಅಶ್ವಪತಿರಾಜನ ಬಳಿ ಬಂದು, ಲೋಕ ವಾರ್ತೆಗಳನ್ನು ಹೇಳ ತೊಡಗಿದನು ನಾರದನು ಹಾಗೆ ಮಾತಾಡಿ ಕೊಂಡಿರುವಾಗಲೆ ಸಾವಿತ್ರಿ ತನ್ನ ಪರ್ಯಟನೆ ಮುಗಿಸಿ ಮನೆಗೆ ಬಂದಳು ಅವಳು ತನ್ನ ತಂದೆಗೂ, ನಾರದ ಮುನಿಗೂ ನಮ ಸ್ಕಾರ ಮಾಡಿ ವಿನಯದಿಂದ ನಿಂತಳು.


ಆಗ ನಾರದನು ಅಶ್ವಪತಿಯೊಂದಿಗೆ "ರಾಜ ನಿನ್ನ ಮಗಳು ಎಲ್ಲಿಗೋ ಪ್ರಯಾಣಮಾಡಿ ಹಿಂದಿ ಗಿದವಳ ಹಾಗೆ ಕಾಣುತ್ತಾಳೆ. ಎಲ್ಲಿಗೆ ಹೋಗಿ ಬ ತ್ತಿದ್ದಾಳೆ? ಯುಕ್ತ ವಯಸ್ಸಿಗೆ ಬಂದಿರುವ ಮಗಳಿಗೆ ಇನ್ನೂ, ಮದುವೆಯನ್ನೇಕೆ ಮಾಡಲಿಲ್ಲ?" ಎಂದು ಕೇಳಿದನು.

"ಮುನೀಂದ್ರಾ, ಇವಳನ್ನು ವರಾನ್ವೇಷ ಗಾಗಿಯೇ ಕಳುಹಿಸಿದೆನು. ಈಗ ಬಂದಿದ್ದಾಳೆ. ಯಾ ನನ್ನು ಆರಿಸಿಕೊಂಡಿದ್ದಾಳೆಂಬುದನ್ನು ಕೇಳಿ ತಿ ಬೇಕು," ಎಂದು ಅಶ್ವಪತಿ ತನ್ನ ಮಗಳನ್ನು ನೋ "ಅಮ್ಮಾ, ನೀನು ಹೋದ ಕೆಲಸ ಪೂರ್ತಿಯಾಯಿತೆ?" ಎಂದು ಕೇಳಿದನು. ಅದಕ್ಕೆ ಸಾವಿತ್ರಿ ತಂದೆಯೊ ದಿಗೆ ಹೀಗೆಂದಳು:

"ಅಪ್ಪಾ, ಬಹಳ ಕಾಲದಿಂದಲೂ ಸಾಳ್ವ ದೇಶವನ್ನು ಆಳುತ್ತಿದ್ದ ದ್ಯುಮತ್ಸೇನ ಮಹಾರಾಜನಿಗೆ ವಾರ್ಧಕ್ಯದಲ್ಲಿ ಒಬ್ಬ ಕುಮಾರನು ಹುಟ್ಟಿದ್ದಾನೆ. ಆಮೇಲೆ ದ್ಯುಮತ್ಸೇನನಿಗೆ ದುರದೃಷ್ಟವಶದಿಂದಾಗಿ ಕುರುಡುತನ ಬಂದಿತು. ಅದನ್ನೇ ಆಧಾರ ಮಾಡಿಕೊಂಡು, ಪೂರ್ವದಲ್ಲಿ ಅವನಿಂದ ಸೋತುಹೋದ ಶತ್ರುಗಳು ಅವನ ರಾಜ್ಯವನ್ನು ಕೈವಶ ಪಡಿಸಿಕೊಂಡರು. ಆ ವೃದ್ಧರಾಜನು ತನ್ನ ವೃದ್ಧ ಪತ್ನಿಯನ್ನೂ, ಮಗನನ್ನೂ ಕರೆದುಕೊಂಡು ಅರಣ್ಯದಲ್ಲಿ ತಾಪಸ ಜೀವನ ನಡೆಸಿಕೊಂಡಿದ್ದಾನೆ. ಹೀಗೆ ಚಿಕ್ಕ ವಯಸ್ಸಿನಿಂದಲೇ ಆಶ್ರಮಗಳಲ್ಲಿ ಬೆಳೆದ ದ್ಯುಮತ್ಸೇನನ ಮಗ ಕೂಡಾ ಋಷಿ ಕುಮಾರನ ಹಾಗೆಯೇ ಬೆಳೆದು, ಸ್ವಲ್ಪ ಕೂಡಾ ಕ್ಷುದ್ರ ಬುದ್ಧಿ ಇಲ್ಲದೆ, ಯಾವಾಗಲೂ ಸತ್ಯವನ್ನೇ ಹೇಳುತ್ತ, ಸತ್ಯವಂತನೆಂಬ ಹೆಸರಿಗೆ ತಕ್ಕಂತೆಯೇ ಇದ್ದಾನೆ. ನಾನು ಆ ಸತ್ಯವಂತನನ್ನೇ ನನ್ನ ಪತಿಯನ್ನಾಗಿ ವರಿಸಿಕೊಂಡು ಹಿಂದಿರುಗಿದ್ದೇನೆ. ಮುಂದಿನ ಕಾರ್ಯ ನೀವುಗಳು ಮಾಡಿಸಿಕೊಡಬೇಕು.

ಸಾವಿತ್ರಿಯು ಮಾತನ್ನು ಕೇಳಿದ ಮೇಲೆ ನಾರದನು ತಲೆ ದೂಗಿ, "ಅಯ್ಯೋ! ಪಾಪ! ಸಾವಿತ್ರಿ [illegible] ಆ ಹುಡುಗನನ್ನು ವರಿಸಿಕೊಂಡಿದ್ದಾಳೆ!" ಎಂದನು. ಅದನ್ನು ಕೇಳಿ ಅಶ್ವಪತಿ, "ಮುನೀಶ್ವರಾ, ನಿಮಗೆ ತಿಳಿಯದ ವೃತ್ತಾಂತ ಯಾವುದೂ ಇಲ್ಲ. ಆ ಸತ್ಯವಂತನು ಎಂತಹವನು? ಅವನ ಗುಣ, ರೂಪ, ಶೀಲ ಮೊದಲಾದುವೆಲ್ಲಾ ಹೇಗಿವೆ?" ಎಂದು ನಾರದನನ್ನು ಕೇಳಿದನು.

ನಾರದನು ಹೀಗೆಂದನು: "ರಾಜಾ, ದ್ಯುಮತ್ಸೇನನ ಮಗ ತನ್ನ ತಾಯಿ ತಂದೆಯರ ಹಾಗೆಯೇ ಸತ್ಯವ್ರತನಾಗಿರುವವನು. ಅವನು ಕುದುರೆಗಳ ಬೊಂಬೆಗಳನ್ನು ಬಹಳ ಚೆನ್ನಾಗಿ ತಯಾರಿಸುತ್ತಾನೆ. ಆದ್ದರಿಂದ ಅವನಿಗೆ ಚಿತ್ರಾಶ್ವನೆಂಬ ಹೆಸರು ಕೂಡಾ ಬಂದಿದೆ. ಅವನ ಅಂದಚೆಂದಗಳನ್ನು ಕುರಿತು ಅಶ್ವಿನೀ



ದೇವತೆಗಳಿಗೆ ಸಮಾನನಾಗಿದ್ದಾನೆಂದರೆ ಸಾಕು. ಸಕಲ ಸದ್ಗುಣಗಳೂ ತುಂಬಿದವನು. ಆದರೆ ಅವನಿಗೆ ಆಯುಷ್ಯವು ಮಾತ್ರ ಇನ್ನು ಒಂದು ವರ್ಷವಷ್ಟೇ ಉಳಿದಿದೆ. ಇಂದಿನಿಂದ ಸರಿಯಾಗಿ ಒಂದು ವರ್ಷ ಕಳೆಯುವಾಗ ಅವನ ಜೀವಿತಕಾಲ ಮುಗಿದು ಹೋಗುತ್ತದೆ."

ನಾರದನ ಮಾತನ್ನು ಕೇಳಿ ಅಶ್ವಪತಿ ಕಳವಳ ಪಡುತ್ತ, ಸಾವಿತ್ರಿಯನ್ನು ನೋಡಿ, "ಅಮ್ಮಾ, ಈ ಅಲ್ಪಾಯುಷಿಯನ್ನು ಬಿಟ್ಟು, ಬೇರೆ ಯಾವನನ್ನಾದರೂ ವರಿಸು" ಎಂದನು.

"ಒಂದುಸಾರಿ ತ್ರಿಕರಣ ಶುದ್ಧಿಯಾಗಿ ಒಬ್ಬನನ್ನು ವರಿಸಿದ ಮೇಲೆ, ಅವನು ಅಲ್ಪಾಯುಷಿಯಾದರೂ ದೀರ್ಘಾಯುಷಿಯಾದರೂ, ಶೀಲವಂತನಾದರೂ, ದುಶ್ಶೀಲನಾದರೂ, ಇನ್ನೊಬ್ಬನನ್ನು ವರಿಸಲು ಸಾಧ್ಯವಾಗುವುದಿಲ್ಲ. ನಾನು ಸತ್ಯವಂತನನ್ನು ಬಿಟ್ಟು ಬೇರೊಬ್ಬನನ್ನು ವರಿಸಲಾರೆ. ನನ್ನನ್ನು ಆತನಿಗೇ



ಕೊಟ್ಟು ಮದುವೆ ಮಾಡಿಬಿಡಿ" ಎಂದು ಸಾವಿತ್ರಿ ತಂದೆಯೊಂದಿಗೆ ದೃಢಭಾವದಲ್ಲಿ ಹೇಳಿದಳು.

ಆಗ ನಾರದನು ಅಶ್ವಪತಿಯೊಂದಿಗೆ "ಹೌದು, ರಾಜಾ, ನಿನ್ನ ಮಗಳು ದೃಢನಿಶ್ಚಯದವಳು. ಅವಳ ಮನಸ್ಸನ್ನು ಬದಲಾಯಿಸಲು ಯಾರಿಗೂ ಸಾಧ್ಯವಾಗಲಾರದು. ನನ್ನನ್ನು ಕೇಳುವಿಯಾದರೆ ಈ ಕಾಲದ ರಾಜರೊಳಗೆಲ್ಲಾ ಸತ್ಯವಂತನಿಗೆ ಸಮಾನ ಗುಣವುಳ್ಳ ರಾಜಕುಮಾರ ಯಾರೂ ಇಲ್ಲ. ಸಾವಿತ್ರಿಯನ್ನು ಅವನಿಗೇ ಕೊಟ್ಟು ಮದುವೆ ಮಾಡಿಸು. ಅವಳ ಸುಕೃತವು ಒಳ್ಳೆಯದಾದರೆ ಸತ್ಯವಂತನು ದೀರ್ಘಾಯುಷ್ಮಂತನಾಗಲೂಬಹುದು. ಶುಭವಾಗಲಿ" ಎಂದು ಹೇಳಿ ಅಲ್ಲಿಂದ ಎದ್ದು ಸ್ವರ್ಗಕ್ಕೆ ಹೊರಟು ಹೋದನು.

ನಾರದನು ಹೇಳಿದ ಪ್ರಕಾರ ಅಶ್ವಪತಿರಾಜನು ತನ್ನ ಕುಮಾರಿಯನ್ನು ಸತ್ಯವಂತನಿಗೇ ಕೊಟ್ಟು ಮದುವೆ ಮಾಡಲು ನಿಶ್ಚಯಿಸಿದನು. ತರುವಾಯ ಒಳ್ಳೆಯ ದಿನದಲ್ಲಿ ಸಾವಿತ್ರಿಯನ್ನು ಕರೆದುಕೊಂ[ಡು] ಬಂಧುಮಿತ್ರ ಪರಿವಾರದೊಂದಿಗೆ ದ್ಯುಮತ್ಸೇ[ನನ] ಆಶ್ರಮಕ್ಕೆ ಹೋಗಿ, ಕಾಲು ನಡಿಗೆಯಿಂದ ಆಶ್ರ[ಮ]ದೊಳಗೆ ಪ್ರವೇಶ ಮಾಡಿದನು.

ಕುರುಡನೂ ವೃದ್ಧನೂ ಆದ ದ್ಯುಮತ್ಸೇ[ನನು] ಒಂದು ಮರದ ನೆರಳಿನಲ್ಲಿ ಕುಳಿತುಕೊಂಡಿ[ದ್ದ]. ಅಶ್ವಪತಿ ಅವನಬಳಿಗೆ ಹೋಗಿ ತನ್ನ ಹೆಸರು [ಹೇ...] ನಮಸ್ಕಾರ ಮಾಡಿ, "ಮಹಾರಾಜ, ನನ್ನ ಮಗ[ಳು] ಸಾವಿತ್ರಿಯನ್ನು ನಿಮ್ಮ ಮಗನಿಗೆ ಕೊಟ್ಟು ಮ[ದು...] ಮಾಡಬೇಕೆಂದು ನಿಶ್ಚಯಿಸಿಕೊಂಡು ಬಂದಿದ್ದೇ[ನೆ]. ಅವಳನ್ನು ನಿಮ್ಮ ಸೊಸೆಯನ್ನಾಗಿ ಸ್ವೀಕರಿಸಬೇಕು" ಎಂದು ಕೇಳಿಕೊಂಡನು.

"ರಾಜಾ, ನಾವು ರಾಜ್ಯವನ್ನು ಕಳೆದುಕೊಂ[ಡು] ಈ ಅಡವಿಯಲ್ಲಿ ಜೀವನ ಮಾಡಿಕೊಂಡಿರುವವ[ರು]. ನಿನ್ನ ಮಗಳು ಸುಕುಮಾರಿ. ನಮ್ಮೊಂದಿಗೆ ... ಜೀವನ ನಡೆಸಿಕೊಂಡಿರಬಲ್ಲಳೆ?" ಎಂದು ದ್ಯು[ಮ]ತ್ಸೇನನು ಕೇಳಿದನು.

"ಸುಖದುಃಖಗಳು ಮನುಷ್ಯನ ಅಧೀನ[ದಲ್ಲಿ] ಇರುವಂಥವಲ್ಲ. ಆ ವಿಷಯ ನನ್ನ ಮಗಳಿಗೆ ಚೆನ್ನಾ[ಗಿ] ಗೊತ್ತಿದೆ. ಕಷ್ಟಸುಖಗಳನ್ನು ಕುರಿತು ಆಲೋ[ಚನೆ] ಮಾಡಿಕೊಂಡೇ ಬಂದಿದ್ದೇವೆ. ನನ್ನ ಮಗಳೂ, ನಿ[ಮ್ಮ] ಮಗನೂ ಒಬ್ಬರಿಗೊಬ್ಬರು ತಕ್ಕವರಾಗಿದ್ದಾರೆ. ಅ[ದ]ದರಿಂದ ನಾವು ಸಂಬಂಧಿಗಳಾಗೋಣವೆಂದು [...]ಸುತ್ತೇನೆ" ಎಂದನು ಅಶ್ವಪತಿ.

ದ್ಯುಮತ್ಸೇನನು ಸಂತೋಷಗೊಂಡು ಆಶ್ರ[ಮ]ದಲ್ಲಿರುವ ಮುನಿಗಳನ್ನೆಲ್ಲಾ ಕರೆಯಿಸಿದನು. ಅವ[ರಿಗೆ] ಈ ಶುಭ ಸಮಾಚಾರವನ್ನು ತಿಳಿಸಿದನು. ಅನಂ[ತರ] ಒಳ್ಳೆಯ ಮುಹೂರ್ತದಲ್ಲಿ ಸಾವಿತ್ರೀ ಸತ್ಯವಂ[ತರ] ವಿವಾಹವು ನಡೆಯಿತು.

ಆಮೇಲೆ ಅಶ್ವಪತಿ ಹಿಂದಿರುಗಿ ಹೋದ[ನು]. ತನ್ನ ತಂದೆ ಹಿಂದಿರುಗಿ ಹೋದಕೂಡಲೇ ಸಾವಿ[ತ್ರಿ]

ತನ್ನ ಬೆಲೆಬಾಳುವ ವಸ್ತ್ರಾಭರಣಗಳನ್ನು ತೆಗೆದು, ತನ್ನ ಗಂಡನಂತೆಯೇ ತಾನು ಕೂಡಾ ನಾರು ಸೀರೆಯನ್ನು ಕಟ್ಟಿಕೊಂಡು, ಶರೀರ ಶ್ರಮವನ್ನು ಲೆಕ್ಕಿಸದೆ, ಅತ್ತೆಮಾವಂದಿರಿಗೂ ಗಂಡನಿಗೂ ಎಲ್ಲಾವಿಧ ಸೇವೆಯನ್ನು ಮಾಡುತ್ತ, ಮಿತಭಾಷಿಣಿಯಾಗಿ ಕಾಲ ಕಳೆಯ ತೊಡಗಿದಳು. ಈ ಮಾರ್ಪಾಡಿಗಾಗಿ ಅವಳು ಸ್ವಲ್ಪ ಕೂಡಾ ಅಳುಕಲಿಲ್ಲ, ದುಃಖಿಸಲಿಲ್ಲ.

ಆದರೆ ಅವಳು ತನ್ನ ಗಂಡನ ಆಯುಷ್ಯವನ್ನು ಕುರಿತು, ಒಂದೊಂದೇ ದಿನವನ್ನು ಎಣಿಸುತ್ತ ಬರುತ್ತಿದ್ದಳು. ನಾರದನು ಹೇಳಿದ ಪ್ರಕಾರ ಸತ್ಯವಂತನ ಆಯುರ್ದಾಯವು ಇನ್ನು ನಾಲ್ಕು ದಿನಗಳು ಉಳಿದಿವೆ ಎನ್ನುವಾಗ, ಅವಳು ತ್ರಿರಾತ್ರೋಪವಾಸ ಎಂಬ ವ್ರತವನ್ನು ಪ್ರಾರಂಭಿಸಿದಳು.

ಅದನ್ನು ತಿಳಿದು ದ್ಯುಮತ್ಸೇನನು "ಅಮ್ಮಾ, ಮೊದಲೇ ಸುಕುಮಾರಿಯಾಗಿರುವ ನೀನು ಇಂತಹ ವ್ರತವನ್ನು ಏತಕ್ಕಾಗಿ ಪ್ರಾರಂಭ ಮಾಡಿದಿ? ನಿನ್ನ ಈ ಕಠೋರ ವ್ರತವನ್ನು ಬಿಟ್ಟುಬಿಡು ಅನ್ನಲಿಕ್ಕೂ ನನಗೆ ಬಾಯಿ ಬರುವುದಿಲ್ಲಮ್ಮ. ಸುಕುಮಾರಿಯಾದ ನೀನು ಅದನ್ನು ತಾಳಿಕೊಳ್ಳಬಲ್ಲೆಯಾ?" ಎಂದನು.

"ದೃಢನಿಶ್ಚಯವಿದ್ದರೆ ಎಂತಹ ಕಠಿಣವಾದ ಕೆಲಸವನ್ನಾದರೂ ನಿರ್ವಿಘ್ನವಾಗಿ ನೆರವೇರಿಸಬಹುದು. ನಾನು ದೃಢ ನಿಶ್ಚಯದಿಂದಲೇ ಈ ವ್ರತವನ್ನು ಪ್ರಾರಂಭಿಸಿದ್ದೇನೆ. ನೀವೇನೂ ಚಿಂತಿಸಬೇಡಿ" ಎಂದು ಸಾವಿತ್ರಿ ವಿನಯದಿಂದ ಮಾವಯ್ಯನಿಗೆ ಸಮಾಧಾನವನ್ನು ಹೇಳಿದಳು.

ಸಾವಿತ್ರಿಗೆ ಉಪವಾಸ ವ್ರತಕ್ಕಿಂತಲೂ, ತನ್ನ ಗಂಡನಿಗೆ ಮರಣದ ಮೇಲೆ ಸಮೀಪಿಸುವುದೆಂಬ ಚಿಂತೆಯು ಹೆಚ್ಚಾಯಿತು. ಮೂರು ರಾತ್ರಿಗಳು ಕಳೆದು ಹೋದುವು. ನಾರದನು ಹೇಳಿದ ಲೆಕ್ಕಪ್ರಕಾರ ಸತ್ಯವಂತನ ಜೀವಿತದಲ್ಲಿಯ ಆ ಕೊನೆಯದಿನವು ಯಾವುದೋ ಅದು ಬೆಳಗಾಯಿತು.



ಆದಿನ ಸಾವಿತ್ರಿ ಬೆಳಂಜಾಮದಲ್ಲೇ ಎದ್ದು ಸೂರ್ಯೋದಯವಾಗುವಷ್ಟರಲ್ಲಿ ಅಗ್ನಿಯನ್ನು ಪ್ರಜ್ವಲಿಸಿ, ಆಶ್ರಮದಲ್ಲಿರುವ ಅತ್ತೆ ಮಾವಂದಿರಿಗೂ, ಉಳಿದ ಹಿರಿಯರಿಗೂ ನಮಸ್ಕಾರಗಳನ್ನು ಮಾಡಿದಳು. "ದೀರ್ಘ ಸುಮಂಗಲೀಭವ!" ಎಂದು ಅವರೆಲ್ಲ ಆಶೀರ್ವಾದ ಮಾಡಿದಾಗ, ಗಂಡನಿಗೆ ಬರಲಿರುವ ಮರಣವನ್ನು ಕುರಿತು ಆಲೋಚಿಸುತ್ತಾ ದಿಗಿಲುಗೊಂಡು ಕುಳಿತಳು.

"ಅಮ್ಮಾ, ನಿನ್ನ ವ್ರತ ಮುಗಿಯಿತಲ್ಲವೆ? ಇನ್ನೂ ಪಾರಣೆ ಮಾಡುವುದಿಲ್ಲವೇಕೆ?" ಎಂದು ಅತ್ತೆ ಮಾವಂದಿರು ಸಾವಿತ್ರಿಯನ್ನು ಕೇಳಿದರು.

"ಈ ವ್ರತಕ್ಕೆ ಸೂರ್ಯಾಸ್ತಮಾನವಾದ ಮೇಲೆಯೇ ಪಾರಣೆ ಮಾಡಬೇಕು" ಎಂದು ಸಾವಿತ್ರಿ ಉತ್ತರ ಹೇಳಿದಳು.

ಸತ್ಯವಂತನು ಸಮಿಧೆಗಳನ್ನೂ, ಹೂಗಳನ್ನೂ, ಹಣ್ಣುಗಳನ್ನೂ ತೆಗೆದುಕೊಂಡು ಬರಲು, ಕೊಡಲಿ



ಯನ್ನು ಭುಜದಮೇಲೆ ಇಟ್ಟುಕೊಂಡು ಅರಣ್ಯಕ್ಕೆ ಹೊರಡುತ್ತಿದ್ದನು. ಆಗ ಸಾವಿತ್ರಿ ಅವನಬಳಿಗೆ ಹೋಗಿ, "ನಾನು ಕೂಡಾ ನಿಮ್ಮೊಂದಿಗೆ ಬರುತ್ತೇನೆ. ಈ ದಿನ ನಿಮ್ಮನ್ನು ಬಿಟ್ಟು ಇರಲಿಕ್ಕೆ ನನ್ನ ಮನಸ್ಸು ಕೇಳುವುದಿಲ್ಲ" ಎಂದಳು.

"ಹುಚ್ಚಳೇ, ಅಡವಿ ಹೇಗಿರುವುದೆಂದು ನಿನಗೆ ತಿಳಿಯದು. ದಾರಿ ಪೂರಾ ಕಲ್ಲು ಮುಳ್ಳುಗಳಿಂದ ತುಂಬಿರುತ್ತದೆ. ಅದೂ ಅಲ್ಲದೆ ನೀನು ಮೂರು ದಿನಗಳಿಂದ ಉಪವಾಸ ಬೇರೆ ಇದ್ದೀಯೆ. ನಡೆಯಲಾರೆ, ಬೇಡ" ಎಂದ ಸತ್ಯವಂತ.

"ಉಪವಾಸದಿಂದ ನನಗೇನೂ ಬಳಲಿಕೆ ಯಾಗುವುದಿಲ್ಲ. ಯಾಕೋ ನನಗೆ ಈದಿನ ಅಡವಿಯಲ್ಲಿ ತಿರುಗಾಡಬೇಕೆಂದು ಬಹಳ ಆಸೆಯಾಗಿದೆ. ಅಭ್ಯಂತರ ಹೇಳಬಾರದು" ಎಂದಳು ಸಾವಿತ್ರಿ.

"ನಿನ್ನ ಇಷ್ಟ ಹಾಗಿದ್ದರೆ ಸರಿ. ಆದರೆ ಅಮ್ಮ ಹಾಗೂ ತಂದೆ ಒಪ್ಪಿಕೊಂಡರೆ ನನ್ನೊಂದಿಗೆ ಬಾ. ಆಮೇಲೆ ಅವರಾರೂ ನನ್ನ ಮೇಲೆ ಯಾವಬಗೆ ತಪ್ಪೂ ಹೇಳಲಾರರು" ಎಂದ ಸತ್ಯವಂತ.

ಸಾವಿತ್ರಿ ಮಾವಯ್ಯನೊಂದಿಗೆ ತನ್ನ ಕೋ ಯನ್ನು ತಿಳಿಸಿದಳು. "ನಾನು ಇಲ್ಲಿಗೆ ಬಂ ಸುಮಾರು ಒಂದು ವರ್ಷವಾಗಲಿಕ್ಕಾಯಿ ಅರಣ್ಯದ ಚೆಂದ ನೋಡಬೇಕೆಂಬ ನನ್ನ ಕೋ ಈವರೆಗೆ ಈಡೇರಲಿಲ್ಲ. ಈದಿನ ನನಗೆ ನನ್ನ ಗ ನೊಂದಿಗೆ ಹೋಗಲು ಅನುಮತಿ ಕೊಡಿ" ಎಂ ಅವಳು ಕೇಳಿದಳು.

ಈವರೆಗೂ ಅವಳು ಯಾವ ಕೋರಿಕೆಯನ್ನ ಕೋರಿದವಳಲ್ಲವೆಂದು ಕೊಂಡು ದ್ಯುಮತ್ಸೇನ ಸಾವಿತ್ರಿಗೆ ಸತ್ಯವಂತನೊಂದಿಗೆ ಅಡವಿಗೆ ಹೋಗ ಅನುಮತಿ ಕೊಟ್ಟನು.

ಹೀಗೆ ಅತ್ತೆ ಮಾವಂದಿರ ಅನುಮತಿಯೊಂ ಸಾವಿತ್ರಿ, ಹೊಟ್ಟೆಯೊಳಗೆ ತುಂಬಾ ದಿಗಿಲು ಕೊಂಡಿದ್ದರೂ, ಮೇಲೆ ಬಹಳ ಉಲ್ಲಾಸದಲ್ಲಿರುವ ಕಾಣಿಸುತ್ತ ಸತ್ಯವಂತನ ಹಿಂದೆ ಅರಣ್ಯಕ್ಕೆ ಹೊರ ಸತ್ಯವಂತನು ಅರಣ್ಯದೊಳಗಿನ ಅಂದಚೆಂದಗಳ ಅವಳಿಗೆ ತೋರಿಸುತ್ತ ನಡೆಯುತ್ತಿರುವಾಗ, ಸಾವಿ ಅವನು ಆಗಲೇ ಮೆಲ್ಲಮೆಲ್ಲನೆ ಸಾಯುತ್ತಿರುವ ಕಾಣಿಸ ತೊಡಗಿತು.

ಸತ್ಯವಂತನು ಬುಟ್ಟಿ ತುಂಬಾ ಹೂಗಳನ್ನ ಹಣ್ಣುಗಳನ್ನೂ ಕೊಯಿದು ಕಟ್ಟಿಗೆ ಕಡಿಯ ಪ್ರಾರಂಭಿಸಿದನು. ಆಗ ಅವನಿಗೆ ಆಯಾಸವಾಗ ತೊಡಗಿತು. ದೇಹದಲ್ಲಿ ಬೆವರಿಳಿಯ ತೊಡಗಿ ಅವನು ಕೊಡಲಿಯನ್ನು ಆಚೆಗೆ ಬಿಸುಟು ಸಾವಿತ್ರಿ ಹತ್ತಿರ ಬಂದು, "ತಲೆ ಸಿಡಿಯುತ್ತಿದೆ. ಶರೀರ ತೂಗಾಡುತ್ತಿದೆ. ನಿಲ್ಲಲಾಗುವುದಿಲ್ಲ. ಸ್ವಲ್ಪ ಮ ಗುತ್ತೇನೆ" ಎಂದನು.

ಸಾವಿತ್ರಿ ಅವನ ತಲೆಯನ್ನು ತನ್ನ ತೊಡೆ ಮೇಲೆ ಇರಿಸಿ ಮಲಗಿಸಿದಳು. ಸ್ವಲ್ಪ ಹೊತ್ತಿಗೆ ಸ

ತಲೆಯ ಸಮೀಪದಲ್ಲಿ ಒಂದು ಆಕಾರವು ನಿಂತಿರುವು ದನ್ನು ಸಾವಿತ್ರಿ ನೋಡಿದಳು. ಆ ವ್ಯಕ್ತಿಯ ಬಣ್ಣ ಕಪ್ಪಾಗಿತ್ತು. ಕಣ್ಣುಗಳು ಕೆಂಪಗಿದ್ದುವು. ನೀಲ ವಸ್ತ್ರ ವನ್ನು ಧರಿಸಿದ್ದನು. ಕೈಯಲ್ಲಿ ಪಾಶದ ಸುರುಳಿ ಹಿಡಿದುಕೊಂಡು ನೋಡಲು ಭಯಂಕರವಾಗಿದ್ದನು.

ಅವನನ್ನು ನೋಡಿದ ಕೂಡಲೇ ಸಾವಿತ್ರಿ ಸತ್ಯ ವಂತನ ತಲೆಯನ್ನು ತನ್ನ ತೊಡೆಯಿಂದೆತ್ತಿ ಕೆಳಗಿಟ್ಟು, ಎದ್ದು ನಿಂತು ಅವನಿಗೆ ನಮಸ್ಕಾರ ಮಾಡಿ, "ಅಯ್ಯಾ, ಯಾರು ನೀನು ? ಏತಕ್ಕೆ ಇಲ್ಲಿಗೆ ಬಂದಿರುವೆ ?" ಎಂದು ಕೇಳಿದಳು.

"ತಾಯಿ, ನಾನು ಯಮ. ನೀನು ಪತಿವ್ರತೆ ಯಾದುದರಿಂದ ನನ್ನನ್ನು ನೋಡುತ್ತಿರುವೆ. ಸತ್ಯ ವಂತನಿಗೆ ಈ ಹೊತ್ತಿಗೆ ಆಯುಷ್ಯ ತೀರಿತು. ಅವನು ಬಹಳ ಧಾರ್ಮಿಕನಾದುದರಿಂದ, ಅವನಿಗಾಗಿ ದೂತ ರನ್ನು ಕಳುಹಿಸದೆ, ನಾನೇ ಸ್ವಯಂ ಹೊರಟುಬಂದೆ" ಎಂದು ಹೇಳಿ ಯಮನು ತನ್ನ ಪಾಶದಿಂದ ಸತ್ಯ ವಂತನ ಶರೀರದೊಳಗಿನಿಂದ ಹೆಬ್ಬೆರಳಿನ ಗಾತ್ರ ವುಳ್ಳ ಜೀವವನ್ನು ಎಳೆದು ಹಿಡಿದುಕೊಂಡು ದಕ್ಷಿಣಾಭಿಮುಖವಾಗಿ ಹೊರಟನು.

ಸಾವಿತ್ರಿ ತನ್ನ ಗಂಡನ ಶರೀರವನ್ನು ಭದ್ರಪಡಿಸಿ, ಯಮನ ಹಿಂದೆಯೇ ಹೊರಟಳು. ಯಮನು ಅವ ಳನ್ನು ಹಿಂದಿರುಗಿ ಹೋಗುವಂತೆ ಹೇಳಿ ಮುಂದೆ ನಡೆದನು. ಸಾವಿತ್ರಿ ತಾನು ಕೂಡಾ ಗಂಡನು ಹೋಗುವಲ್ಲಿಗೇ ಹೋಗುವೆನೆಂದೂ, ಅದೇ ತನ್ನ ಧರ್ಮವೆಂದೂ ಹೇಳಿ ಅವನ ಹಿಂದೆಯೇ ಹೋದಳು.

ಅವಳ ಮಾತು ಕೇಳಿ ಯಮನು ಸಂತೋಷಪಟ್ಟು ಸಾವಿತ್ರಿಯೊಂದಿಗೆ "ಮಗಳೇ, ನಿನ್ನ ಗಂಡನ ಪ್ರಾಣದ ಹೊರತು ಏನಾದರೊಂದು ವರವನ್ನು ಕೇಳು, ಕೊಡು ತ್ತೇನೆ" ಎಂದನು.

"ನನ್ನ ಮಾವಯ್ಯ ಕುರುಡರು, ಮುದುಕರು. ಅವರಿಗೆ ದೃಷ್ಟಿಯನ್ನೂ, ಶರೀರ ಬಲವನ್ನೂ ಪ್ರಸಾ



ದಿಸು" ಎಂದು ಕೇಳಿಕೊಂಡಳು ಸಾವಿತ್ರಿ. ಯಮನು ಹಾಗೆಯೇ ಆಗಲೆಂದು ಹೇಳಿ ಮುಂದೆ ಸಾಗಿದನು.

ಆದರೆ ಸಾವಿತ್ರಿ ಮತ್ತೆ ಯಮನನ್ನು ಅನುಸರಿಸುವು ದನ್ನು ಬಿಡಲಿಲ್ಲ. ಅವಳನ್ನು ಹಿಂದಿರುಗಿಸಲಿಕ್ಕಾಗಿ ಯಮನು ಮತ್ತೊಂದು ವರವನ್ನು ಕೇಳುವಂತೆ ಹೇಳಿದನು. ಸಾವಿತ್ರಿ ತನ್ನ ಮಾವಯ್ಯನಿಗೆ ರಾಜ್ಯ ಪ್ರಾಪ್ತಿಯಾಗಬೇಕೆಂದು ಕೇಳಿದಳು. ಯಮನು "ತಥಾಸ್ತು" ಎಂದನು.

ಆದರೂ ಯಮನ ಹಿಂದೆ ಹೋಗುವುದನ್ನು ಸಾವಿತ್ರಿ ಬಿಡಲಿಲ್ಲ. ಯಮನು ಅವಳಿಗೆ ಇನ್ನೂ ಒಂದು ವರ ಕೊಡುತ್ತೇನೆ, ಕೇಳು ಎಂದನು. ಸಾವಿತ್ರಿ ತನ್ನ ತಂದೆಗೆ ಪುತ್ರ ಸಂತಾನವಾಗಬೇಕೆಂದು ವರ ಕೇಳಿದಳು. ಯಮನು ಅಶ್ವಪತಿಗೆ ನೂರು ಮಂದಿ ಮಕ್ಕಳಾಗುವರೆಂದು ವರ ಕೊಟ್ಟನು.

ಇಷ್ಟಾದರೂ ಸಾವಿತ್ರಿ ಹಿಂದಿರುಗಿ ಹೋಗದಿರುವು ದನ್ನು ಗಮನಿಸಿ ಯಮನು ಅವಳಿಗೆ ನಾಲ್ಕನೇ ವರ

ವನ್ನು ಕೇಳುವಂತೆ ಹೇಳಿದನು. ಸಾವಿತ್ರಿ ತನಗೂ ಸತ್ಯವಂತನಿಗೂ ವಂಶವೃದ್ಧಿಯಾಗುವಂತೆ ನೂರು ಮಂದಿ ಪುತ್ರರನ್ನು ವರ ಕೇಳಿದಳು. "ನಿನಗೆ ನೂರು ಮಂದಿ ಪುತ್ರರು ಹುಟ್ಟುವರು. ಇನ್ನು ಹಿಂದಿರುಗು" ಎಂದನು ಯಮ. "ಹಾಗಾದರೆ ನನ್ನ ಗಂಡನ ಪ್ರಾಣವನ್ನು ಹಿಂದೆ ಕೊಟ್ಟುಬಿಡಯ್ಯ" ಎಂದಳು ಸಾವಿತ್ರಿ. ಕೂಡಲೇ ಯಮನು ಸತ್ಯವಂತನ ಜೀವವನ್ನು ಬಿಟ್ಟು ಕೊಟ್ಟು, ಮಾಯವಾಗಿಹೋದನು.

ಸಾವಿತ್ರಿ ತನ್ನ ಗಂಡನ ಶರೀರವಿರುವ ಸ್ಥಳಕ್ಕೆ ಬಂದು ಅವನ ತಲೆಯನ್ನು ತನ್ನ ತೊಡೆಗಳ ಮೇಲಿಟ್ಟು ಕೊಂಡು ಕುಳಿತಳು. ಸ್ವಲ್ಪ ಹೊತ್ತಿನ ಮೇಲೆ ಸತ್ಯವಂತನು ಕಣ್ಣು ತೆರೆದು ಸಾವಿತ್ರಿಯ ಮುಖವನ್ನು ನೋಡಿ, "ನಾನು ಬಹಳ ಹೊತ್ತು ನಿದ್ದೆ ಮಾಡಿದೆನೇನು ? ನನ್ನನ್ನು ಯಾವನೋ ಕಪ್ಪಿನವನೊಬ್ಬ ಎತ್ತಿಕೊಂಡು ಬಹಳ ದೂರ ಹೋದ ಹಾಗೆ ಸ್ವಪ್ನವಾಯಿತು" ಎಂದನು.


"ಅದನ್ನೆಲ್ಲಾ ಆಮೇಲೆ ಮಾತಾಡೋಣ. ಹೊತ್ತು ಮುಳುಗಲಿಕ್ಕಾಯಿತು. ಬೇಗನೇ ಆಶ್ರಮಕ್ಕೆ ಹೋಗೋಣ" ಎಂದಳು ಸಾವಿತ್ರಿ.


ಸತ್ಯವಂತನು ತುಂಬ ಬಲಹೀನನಾಗಿದ್ದನು. ಸಾವಿತ್ರಿಯೇ ಅವನನ್ನು ಎತ್ತಿ ನಿಲ್ಲಿಸಬೇಕಾಯಿತು. ಬುಟ್ಟಿಯನ್ನು ಹೊತ್ತುಕೊಳ್ಳುವ ಶಕ್ತಿಯೂ ಅವನಿಗಿರಲಿಲ್ಲ. ಅದನ್ನು ಒಂದು ಮರದಕೊಂಬೆಗೆ ತಗ ಸಿಟ್ಟು, ಸಾವಿತ್ರಿ ಅವನನ್ನು ಮೆಲ್ಲಗೆ ನಡೆಯಿ ಕೊಳ್ಳುತ್ತ, ತಿಂಗಳು ಬೆಳಕಿನಲ್ಲಿ ದಾರಿ ತಿಳಿದುಕೊಂಡು ಇಬ್ಬರೂ ಆಶ್ರಮಕ್ಕೆ ಬಂದು ಸೇರಿದರು.

ಆಶ್ರಮದಲ್ಲಿ ಆಕಸ್ಮಿಕವಾಗಿ ದೃಷ್ಟಿ ಬಂದ ದ್ಯುಮತ್ಸೇನನು ಕತ್ತಲೆಯಾದರೂ ಮಗ ಸೊಸೆಯೂ ಮನೆಗೆ ಬಾರದಿರುವುದನ್ನು ನೋಡಿ ತಳಮಳ ಪಡುತ್ತ, ತನ್ನ ಪತ್ನಿಯೊಂದಿಗೆ ಹುಡುಕ ಹೊರಟಿದ್ದನು. ಇಬ್ಬರೂ ಮಗ ಸೊಸೆಯರ ಹೆಸರೆತ್ತಿ ಕರೆಯುತ್ತಿದ್ದರು. ಅವರು ಹೆಚ್ಚು ದ ಹೋಗುವುದರೊಳಗೇ ಸಾವಿತ್ರಿ ಸತ್ಯವಂತರು ಬಂ ಬಿಟ್ಟರು. ಅಷ್ಟರೊಳಗೆ ಆಶ್ರಮದಲ್ಲಿ ಅನೇಕ ಬಂದು ಸೇರಿ ಬಿಟ್ಟಿದ್ದರು. ಸಾವಿತ್ರಿ ಅವರೆಲ್ಲರಿಗೂ ನಡೆದ ಸಮಾಚಾರವನ್ನೆಲ್ಲಾ ಹೇಳಿದಳು.

ಯಮನ ವರಗಳು ಸತ್ಯವಾಗುತ್ತಾ ಬಂದು ದ್ಯುಮತ್ಸೇನನಿಗೆ ಮತ್ತೆ ರಾಜ್ಯವು ಬಂದಿತು. ಅ ಪತಿಗೆ ಮಕ್ಕಳು ಹುಟ್ಟಿದರು. ಸಾವಿತ್ರೀ ಸತ್ಯವ ರಿಗೂ ಮಕ್ಕಳು ಹುಟ್ಟಿ ತೊಡಗಿದರು.

ಮಾರ್ಕಂಡೇಯನು ಪಾಂಡವರಿಗೆ ಈ ಕಥೆಯನ್ನು ಹೇಳಿ. "ದ್ರೌಪದಿಯ ಪಾತಿವ್ರತ್ಯದಿಂದ ನಿಮ್ಮ ಗಳೆಲ್ಲ ತೀರಿ ಹೋಗುತ್ತವೆ" ಎಂದು ಹೇಳಿ ದಾರಿ ಹಿಡಿದು ಹೊರಟುಹೋದನು.





ಶಿವಪುರಾಣ

೧೩

[illegible]ಸುರನನ್ನೂ, ಅವನೊಂದಿಗೆ ಅನೇಕಮಂದಿ [illegible] ರಾಕ್ಷಸರನ್ನೂ ಸಂಹಾರ ಮಾಡಿದ ಮೇಲೆ [illegible]ರಸ್ವಾಮಿ, ಸ್ವಲ್ಪ ಕಾಲದವರೆಗೆ ಸ್ವರ್ಗದ [illegible]ಗಳಲ್ಲಿದ್ದನು.

[illegible]ಂತರ ಪಾರ್ವತೀ ಪರಮೇಶ್ವರರನ್ನು ಸೇವಿಸ [illegible] ಬುದ್ಧಿಯುಂಟಾಗಿ, ಅಲ್ಲಿಂದ ಹೊರಟು [illegible] ಬಂದು ಅಲ್ಲಿಯೇ ಇರ ತೊಡಗಿದನು.

[illegible]ಗೆ ಸಂತೋಷದಿಂದಿರುತ್ತಾ, ಒಂದು ದಿನ [illegible] ತನ್ನ ಸ್ನೇಹಿತರೊಡನೆ ಕೂಡಿಕೊಂಡು ವನ [illegible] ಮಾಡುತ್ತಿರುವಾಗ ನಾರದ ಮಹಾ ಮುನಿ [illegible]ಬಳಿಗೆ ಬಂದನು.

[illegible]ಮಾರಸ್ವಾಮಿ ನಾರದನಿಗೆ ಅತಿಥಿ ಸತ್ಕಾರ [illegible] ಮಾಡಿ, "ಮುನೀಶ್ವರಾ, ನಿಮಗೆ ತಿಳಿಯ [illegible] ವಿಶೇಷಗಳೇ ಇಲ್ಲ. ಲೋಕಗಳಲ್ಲಿರುವ [illegible]ಗಳೇನು ?" ಎಂದು ಅವರನ್ನು ವಿಚಾರಿಸಿದನು.

"[illegible]ಮಾರಾ, ನಿನ್ನ ದಯೆಯಿಂದ ಎಲ್ಲಾ ಲೋಕ [illegible] ಸುಖವಾಗಿದ್ದಾರೆ. ನೀನು ರಾಕ್ಷಸರನ್ನೆಲ್ಲಾ [illegible] ಕಾರಣದಿಂದ ಯಜ್ಞ ಯಾಗಾದಿಗಳು ಚೆನ್ನಾಗಿ ಸಾಗುತ್ತಿವೆ. ಆದರೆ ನಿನ್ನ ಹತ್ತಿರ ಒಂದು ವಿಷಯ ಹೇಳಬೇಕೆಂತಲೇ ಬಂದೆ. ಇಲ್ಲಿಗೆ ಸಮೀಪದಲ್ಲಿ ಭಿಲ್ಲಪುರವೆಂಬ ಒಂದು ಗ್ರಾಮವಿದೆ. ಅಲ್ಲಿ ಪುಳಿಂದನೆಂಬ ಭಿಲ್ಲರಾಜನಿದ್ದಾನೆ. ಅವನೂ ಅವನ ಪತ್ನಿಯೂ ದೊಡ್ಡ ಈಶ್ವರ ಭಕ್ತರು. ಅವರಿಬ್ಬರಿಗೂ ಬಹಳ ಕಾಲದವರೆಗೂ ಮಕ್ಕಳಾಗಿರಲಿಲ್ಲ. ಹೀಗಿರುವಾಗ ಆ ಭಿಲ್ಲರಾಜನಿಗೆ ವನದಲ್ಲಿ ಒಂದು ಹೆಣ್ಣು ಮಗು ದೊರಕಿತು. ಅವನು ಆ ಮಗುವನ್ನು ತಂದು ತನ್ನ ಹೆಂಡತಿಯ ಕೈಗೆ ಕೊಟ್ಟನು. ಆ ದಂಪತಿಗಳು ಆ ಮಗುವಿಗೆ ವಲ್ಲಿ ಎಂದು ಹೆಸರಿಟ್ಟು, ಅತ್ಯಂತ ಪ್ರೇಮದಿಂದ ಬೆಳೆಸಿದರು. ವಲ್ಲಿಯ ಅಂದ ಚಂದಗಳು ಇಷ್ಟೇ ಎಂದು ವರ್ಣಿಸಲು ಸಾಧ್ಯವಿಲ್ಲ. ಬಂಗಾರದ ಬೊಂಬೆಯ ಹಾಗಿದ್ದಾಳೆ. ನೋಡಿದರೆ ವನಲಕ್ಷ್ಮೀ ದೇವಿಯಂತೆ ಕಾಣುತ್ತಾಳೆ. ಅವಳೇ ನಿನಗೆ ಹೆಂಡತಿಯಾಗುತ್ತಾಳೆಂದು ಮಾತಿನ ಸಂದರ್ಭದಲ್ಲಿ ಬ್ರಹ್ಮನು ಹೇಳಿದನು. ಅವನ ಮಾತು ಎಂದಿಗೂ ಸುಳ್ಳಾಗದು. ನೀನು ಅವಳನ್ನು ಮದುವೆ ಮಾಡಿಕೊಂಡು ಸುಖವಾಗಿರು" ಎಂದನು ನಾರದ.

ಹಿಂಬದಿಯ ಚಿತ್ರ ಕಥೆ



ತರುವಾಯ ನಾರದನು ಕುಮಾರಸ್ವಾಮಿಯಿಂದ ಅಪ್ಪಣೆ ಪಡೆದುಕೊಂಡು ಭಿಲ್ಲರಾಜನಾದ ಪುಳಿಂದನ ಬಳಿಗೆ ಹೋದನು.

ಪುಳಿಂದನು ಅವನನ್ನು ಸ್ವಾಗತ ಮಾಡಿ, ಗೌರವ ಮರ್ಯಾದೆಗಳಿಂದ ಕುಳ್ಳಿರಿಸಿ, "ಮುನೀಶ್ವರಾ, ನಮ್ಮ ವಲ್ಲಿಗೆ ತಕ್ಕವನಾದ ಗುಣ ರೂಪಗಳಿರುವ ಗಂಡ ಎಲ್ಲಿರುವನೆಂಬುದನ್ನು ತ್ರಿಕಾಲಜ್ಞರಾದ ನೀವು ಹೇಳಬೇಕು. ಅವಳಿಗೆ ಈಗ ಮದುವೆಯ ವಯಸ್ಸು," ಎಂದು ಕೇಳಿದನು.

"ಅದನ್ನು ಹೇಳಲಿಕ್ಕೇ ಬಂದೆ. ಈ ಹುಡುಗಿಗೆ ತಕ್ಕವನು ಸಾಕ್ಷಾತ್ ಶಿವನ ಮಗನಾದ ಕುಮಾರಸ್ವಾಮಿಯೇ. ಅವನಿಗೆ ಕೂಡಾ ವಲ್ಲಿಗಿಂತಲೂ ಹೆಚ್ಚಿನವಳಾದ ಹೆಂಡತಿ ಎಲ್ಲಿಯೂ ಇಲ್ಲ. ಚಿಂತಿಸಬೇಡ. ಬೇಗದಲ್ಲಿಯೇ ಕುಮಾರಸ್ವಾಮಿ ವನವಿಹಾರಕ್ಕೆ ಬರುತ್ತಾನೆ. ವಲ್ಲಿಯನ್ನು ನೋಡುತ್ತಾನೆ. ಆಗ ಬೇಕಾದುದೆಲ್ಲವೂ ಆಗಿ ಅವನೇ ನಿಮಗೆ ಅಳಿಯನಾಗುತ್ತಾನೆ. ಶಿವನೇ ನಿಮಗೆ ಬೀಗನಾಗುತ್ತಾನೆ. ನೀವು ಧ... ರಾಗುವಿರಿ. ಇಂದಿನಿಂದ ಚಿಂತಿಸುವುದನ್ನು ಬಿಟ್ಟು ಶುಭವನ್ನು ನಿರೀಕ್ಷಿಸುತ್ತಿರಿ" ಎಂದು ಪುಳಿಂ... ದಂಪತಿಗಳೊಂದಿಗೆ ಹೇಳಿ ನಾರದನು ತನ್ನ ಪಾದ... ಹೊರಟು ಹೋದನು.

ನಾರದನು ವಲ್ಲಿಯ ಸೌಂದರ್ಯವನ್ನು ಕುರಿ... ಹೇಳಿದುದನ್ನು ಕೇಳಿದಾಗಲಿಂದ ಕುಮಾರಸ್ವಾಮಿಯ... ಮನಸ್ಸಿನಲ್ಲಿ ಅವಳ ಬಗೆಗೆ ಆಸಕ್ತಿ ಕೆರಳಿ... ಹೇಗಾದರೂ ಅವಳನ್ನು ಮದುವೆಯಾಗಬೇಕೆಂ... ಕೋರಿಕೆ ಅವನಲ್ಲಿ ತಲೆಯೆತ್ತಿತು.

ಅದು ದಿನೇದಿನೇ ಬಲವಾಗತೊಡಗಿ... ಆದರೆ ಭಿಲ್ಲಕನ್ಯೆಯನ್ನು ಮದುವೆಯಾಗು... ನೆಂದರೆ ತಂದೆ ತಾಯಿಗಳು ಅದಕ್ಕೆ ಒಪ್ಪುವರೋ ಇಲ್ಲವೋ ಎಂಬ ಅನುಮಾನವೂ ಅವನಿಗಾಯಿ... ಯಾವ ನಿರ್ಣಯವನ್ನು ಮಾಡಬೇಕಾದ... ಮೊದಲು ಅವಳನ್ನು ಕಣ್ಣಾರೆ ನೋಡಬೇಕೆಂ... ಬಯಸಿದನು. ಅದಕ್ಕಾಗಿ ಅವನು ತನ್ನ ಪರಿವಾ... ವನ್ನು ಕರೆದುಕೊಂಡು ಭಿಲ್ಲಪುರದ ಸಮೀಪದಲ್ಲಿರು... ವನದಲ್ಲಿ ವಿಹರಿಸಲು ಹೊರಟನು.

ನಾರದನ ಮಾತುಗಳು ಕುಮಾರ ಸ್ವಾಮಿಯ... ಚಲನೆಗೊಳಿಸಿದಂತೆಯೇ, ವಲ್ಲಿಯನ್ನು ಕೂಡಾ ಚಲ... ಗೊಳಿಸಿದುವು. ಆ ಕುಮಾರಸ್ವಾಮಿಯನ್ನೇ ... ಯುತ್ತ, ಅವನು ಯಾವಾಗ ಬರುವನೋ ಎಂ... ಇದಿರು ನೋಡುತ್ತ ಅವಳೂ ನಡೆದಾಡುತ್ತಿ... ತನ್ನಂತಹ ನೀಚ ಕುಲದವಳನ್ನು ಅವನು ಮದು... ಯಾಗುವನೇ ಎಂಬ ಸಂದೇಹವೂ ಅವಳಲ್ಲಿ... ತನ್ನ ತಾಯಿ ತಂದೆಯರು ತನ್ನನ್ನು ಬೆಳೆಸಿದವ... ಹೊರತು, ಹಡೆದವರಲ್ಲ ಎಂದುಕೊಂಡು ತನಗೆ... ಸಮಾಧಾನ ಹೇಳಿಕೊಳ್ಳುವಳು. ಕುಮಾರಸ್ವಾ... ತನ್ನನ್ನು ಮದುವೆಯಾಗದೇ ಹೋದರೆ ಅವ... ದೇಹತ್ಯಾಗ ಮಾಡಲಿಕ್ಕೂ ಸಿದ್ಧಳಾಗಿದ್ದಳು.

ಒಂದುದಿನ ವಲ್ಲಿ ತನ್ನ ತಂದೆತಾಯಿಯರಿಗೆ ತಿಳಿಸದೆ, [illegible]ದಿ ಸಖಿಯರನ್ನು ಕರೆದುಕೊಂಡು ವನವಿಹಾರಕ್ಕೆ ಹೊರಟು ತುಸುದೂರವೇ ಹೋದಳು. ಅಲ್ಲಿ ಒಂದು ಚಿಕ್ಕ ಮಾವಿನಮರದ ಬುಡದಲ್ಲಿ ಅವಳು ಸಖಿಯರೊಂದಿಗೆ ಕುಳಿತು ದಣಿವಾರಿಸಿಕೊಳ್ಳುತ್ತ ಮಾತುಕತೆಯಾಡಿಕೊಂಡಿದ್ದಳು.

ಅದೇ ಸಮಯಕ್ಕೆ ಕುಮಾರಸ್ವಾಮಿ ತನ್ನ ಗೆಳೆಯರೊಂದಿಗೆ ಬಂದು, ಸಮೀಪದಲ್ಲಿದ್ದ ಮತ್ತೊಂದು ಮರದ ಬುಡದಲ್ಲಿ ಕುಳಿತಿದ್ದನು. ಅವನೂ ತನ್ನವರೊಂದಿಗೆ ಲೋಕಾಭಿರಾಮವಾಗಿ ಮಾತನಾಡಿಕೊಂಡಿದ್ದನು. ಆಗ ವಲ್ಲಿಯ ಸಖಿಯೊಬ್ಬಳು ಅವನ ಬಳಿಗೆ ಬಂದು "ಅಯ್ಯಾ, ನೀವು ಯಾರು? ಎಲ್ಲಿಂದ ಬಂದಿದ್ದೀರಿ? ಈ ವನವು ಪುಳಿಂದ ರಾಜನ ಕುಮಾರಿಯಾದ ವಲ್ಲೀದೇವಿಯ ವಿಹಾರ ಸ್ಥಳವೆಂದು ಗೊತ್ತಿಲ್ಲವೆ? ಇಲ್ಲಿಗೆ ಗಂಡುಸರು ಬರಕೂಡದು" ಎಂದಳು.

ಆ ಮಾತು ಕೇಳಿದ ಕೂಡಲೇ ಕುಮಾರಸ್ವಾಮಿಗೆ ಏನೋ ಒಂದು ಉತ್ಸಾಹವು ಬಂದಿತು. ಅವನು ಆ ಸಖಿಯೊಂದಿಗೆ, "ನನ್ನ ಹೆಸರು ಕುಮಾರಸ್ವಾಮಿ. ನಾನು ಶಿವಪಾರ್ವತಿಯರ ಕುಮಾರ. ನನ್ನ ಊರು ಕೈಲಾಸ. ನನ್ನ ಸಂಗತಿ ಹೇಳಿದೆನಷ್ಟೆ? ನಿಮ್ಮ ವಲ್ಲಿಯ ಸಮಾಚಾರ ಹೇಳುವಂತಹುದಾಗಿದ್ದರೆ ಹೇಳು" ಎಂದನು.

"ಈ ಪುಳಿಂದ ದೇಶದ ರಾಜನಾದ ಪುಳಿಂದನು [illegible]ಲ್ಲಾ ರಾಜ. ಭಿಲ್ಲಪುರವು ಅವನ ರಾಜಧಾನಿ. ಅವನು ಈಶ್ವರ ಭಕ್ತನು. ಅವನಿಗೆ ಮಕ್ಕಳಿಲ್ಲ. ಈ ವನದಲ್ಲಿಯೇ ಅವನಿಗೆ ಒಂದು ಹೆಣ್ಣು ಮಗು ದೊರಕಿತು. ಅವಳಿಗೆ ವಲ್ಲಿ ಎಂದು ಹೆಸರಿಟ್ಟು ಬಲು ಪ್ರೀತಿಯಿಂದ ಬೆಳೆಸಿದ್ದಾರೆ" ಎಂದಳು ಸಖಿ. "ಓಹೋ! ನಿಮ್ಮ ವಲ್ಲಿಗೆ ಮದುವೆಯಾಯಿತೆ?" ಎಂದು ಕುಮಾರಸ್ವಾಮಿ ಕೇಳಿದ.

"ಸಂಬಂಧವು ಗೊತ್ತಾಗಿದೆ. ಇನ್ನು ಮದುವೆಯಾಗುವುದೊಂದೇ ಉಳಿದಿದೆ" ಎಂದಳು ಸಖಿ.

ಕುಮಾರಸ್ವಾಮಿ ಅತ್ಯಾತುರದಿಂದ, "ಎಲ್ಲಿಯ ಸಂಬಂಧ? ಯಾರು ವರ?" ಎಂದು ಕೇಳಿದ.

"ನಮ್ಮ ಮಹಾರಾಜರ ಹತ್ತಿರ ನಾರದಮುನಿಗಳು ಬಂದು, ಶಿವನ ಕುಮಾರನಾದ ಕುಮಾರಸ್ವಾಮಿ ಬಂದು ವಲ್ಲಿಯನ್ನು ಮದುವೆಯಾಗುತ್ತಾನೆ ಎಂದು ಹೇಳಿ ಹೋಗಿದ್ದಾರೆ. ಅಂದಿನಿಂದ ನಮ್ಮ ವಲ್ಲಿ ಆ ಕುಮಾರಸ್ವಾಮಿಗಾಗಿ ಕನವರಿಸಿಕೊಂಡೇ ಇದ್ದಾಳೆ. ಅವಳಿಗೆ ಪಾಪ, ಒಂದು ಕ್ಷಣವು ಯುಗವಾಗಿ ಕಾಣುತ್ತದೆ. ಅವಳ ಬಾಧೆಯನ್ನು ನೋಡಲಾರದೆ ವನವಿಹಾರಕ್ಕೆ ಕರೆದುಕೊಂಡು ಬಂದು ಆ ಮಾವಿನ ಮರದ ಬುಡದಲ್ಲಿ ಕುಳ್ಳಿರಿಸಿದ್ದೇನೆ. ನೀನು ಇಲ್ಲಿಯೇ ಇರು; ನಾನು ಈಗಲೇ ವಲ್ಲಿಯನ್ನು ಕರೆದುಕೊಂಡು ಬರುತ್ತೇನೆ. ಯಾವನು ಇಲ್ಲಿಗೆ ಬರಬೇಕಾಗಿದ್ದವನೋ ಅವನೇ ಬಂದ ಮೇಲೆ, ಇನ್ನೇನು

ಬೇಕಾಗಿದೆ"? ಎಂದು ಹೇಳಿ ಆ ಸಖಿ, ಓಡಿಹೋಗಿ ವಲ್ಲಿಯ ಕೈಹಿಡಿದು ಎಳೆದುಕೊಂಡು ಬಂದಳು.

ಕುಮಾರಸ್ವಾಮಿ ವಲ್ಲಿಯ ಕೈಯನ್ನು ಹಿಡಿದು ಕೊಂಡು, "ಸಂಗತಿ ಎಲ್ಲಾ ತಿಳಿಯಿತು. ನಾನೇ ನಿನ್ನವ. ನನ್ನೊಂದಿಗೆ ಬರುವಿಯಾ? ನಾವು ಮದುವೆ ಮಾಡಿಕೊಳ್ಳೋಣ" ಎಂದನು.

"ಅವಸರಪಡಬಾರದು. ನನ್ನನ್ನು ಮದುವೆ ಯಾಗಬೇಕಾದರೆ ನನ್ನ ತಂದೆತಾಯಿಯರ ಅನುಮತಿ ಪಡೆಯಬೇಕು. ಲೋಕನಿಂದೆ ಬರುವಂತಹ ಕೆಲಸ ಮಾಡಬಾರದು. ಸ್ವಲ್ಪ ಹೊತ್ತು ಇಲ್ಲಿಯೇ ಇದ್ದರೆ ನಾನು ಮದುವೆಗೆ ನಮ್ಮವರ ಅನುಮತಿ ಪಡೆದು ಬರುತ್ತೇನೆ" ಎಂದು ವಲ್ಲಿ ಕುಮಾರಸ್ವಾಮಿಯಿಂದ ತನ್ನ ಕೈಯನ್ನು ಬಿಡಿಸಿಕೊಂಡು ಸಖಿಯರೊಂದಿಗೆ ಮನೆಗೆ ಹೋದಳು.

ನಡೆದ ಸಂಗತಿಯನ್ನು ತಿಳಿದು ಪುಳಿಂದನು ತನ್ನ ಪರಿವಾರದೊಂದಿಗೆ ಕುಮಾರಸ್ವಾಮಿಯ ಬಳಿಗೆ ಬಂದನು. ಆ ರಾತ್ರಿಯ ಕಡೇ ಜಾಮದಲ್ಲಿ ಒಳ್ಳೆಯ ಲಗ್ನವಿರುವುದೆಂದು ತಿಳಿದುಕೊಂಡೇ ಅವನು ಬಂದನು. ಅವನು ಕುಮಾರಸ್ವಾಮಿಯನ್ನೂ ಅವನ ಪರಿವಾರ ವನ್ನೂ ಆದರಿಸಿ ಕರೆದೊಯ್ದು ತಕ್ಕ ಬಿಡದಿಯಲ್ಲಿ ಇಳಿಸಿ, ಮದುವೆಯ ಪ್ರಯತ್ನವನ್ನು ಮಾಡಲು ಮನೆಗೆ ಹೋದನು.

ಈ ವಾರ್ತೆ ಆಗಲೇ ನಾರದನಿಂದ ಪಾ[illegible] ಪರಮೇಶ್ವರರಿಗೆ ತಿಳಿದು ಅವರೂ ಬಂದು. ಕು[illegible] ಸ್ವಾಮಿಯ ಮದುವೆಯನ್ನು ನಡೆಸಿ, ವಧೂ[illegible] ರನ್ನು ಕರೆದುಕೊಂಡು ಕೈಲಾಸಕ್ಕೆ ಮರಳಿದರು.

ಸ್ವಲ್ಪಕಾಲ ಕಳೆಯಿತು. ಶೋಣಿತಪುರದಲ್ಲಿ [illegible] ಸುರನೆಂಬವನು ಅವತರಿಸಿದ್ದನು. ಅವನು [illegible] ಬ್ರಹ್ಮನನ್ನು ಕುರಿತು ಘೋರವಾದ ತಪ[illegible] ಮಾಡಿ, ಅನೇಕ ವರಗಳನ್ನು ಪಡೆದು, ಮೂ[illegible] ಲೋಕಗಳನ್ನೂ ಸ್ವಾಧೀನಪಡಿಸಿಕೊಂಡು ಆಳಿ[illegible] ದ್ದನು. ಪರಮ ಶಿವಭಕ್ತನಾದ ಗಜಾಸುರನ [illegible] ಯಲ್ಲಿ ಪ್ರಜೆಗಳೆಲ್ಲರೂ ಸಕಲ ಸೌಖ್ಯಗಳನ್ನೂ [illegible] ಭವಿಸಿಕೊಂಡಿದ್ದರು. ಎಲ್ಲಿಯೂ ಯಾವ ಕೊರತೆ[illegible] ಇರಲಿಲ್ಲ. ಒಂದುದಿನ ನಾರದನು ಗಜಾಸುರನ [illegible] ಬಂದು, "ಗಜಾ, ನೀನು ದೊಡ್ಡ ಶಿವಭಕ್[illegible] ರುವಿ. ಶಿವನನ್ನು ನಿನ್ನ ಹೃದಯದೊಳಗೆ [illegible] ಬೇಕೆಂದು ಕೋರಬಾರದೆ?" ಎಂದನು. ಗಜಾ[illegible] ನಿಗೆ ಈ ಆಲೋಚನೆ ಹಿಡಿಸಿತು. ಅವನು [illegible] ಪೂಜೆಯಿಂದ ಶಿವನನ್ನು ಪ್ರತ್ಯಕ್ಷ ಮಾಡಿಕೊಂ[illegible] ತನ್ನ ಹೃದಯದೊಳಗೆ ಇರುವಂತೆ ವರ ಕೇಳಿ[illegible] ಶಿವನು ಅದಕ್ಕೆ ಒಪ್ಪಿಕೊಂಡು, ಲಿಂಗ ರೂಪ[illegible] ಗಜಾಸುರನ ಹೃದಯದೊಳಗೇ ಇದ್ದು, ಅ[illegible] ಮಾಡುವ ಮಾನಸಿಕ ಪೂಜೆಗಳನ್ನು ಸ್ವೀಕರಿಸುತ್ತಿ[illegible]



೧೨೩. ಸ್ವಯಂಭೂನಾಥಾಲಯ, ನೇಪಾಳ

ನೇಪಾಳ ರಾಜಧಾನಿಯಾದ ಕಾಟ್ಮಂಡು ನಗರದೊಳಗಿನ ಒಂದು ಬೌದ್ಧ ಚೈತ್ಯ. ಇದರಲ್ಲಿ ಸ್ವಯಂಭೂ ಂಬ ಒಬ್ಬ ಸಿದ್ಧನ ಅಸ್ಥಿಗಳನ್ನು ನಿಕ್ಷೇಪಿಸಿದ್ದಾರೆ. ಮೇಲಿರುವ ಕೊಡೆಗೆ ಬಂಗಾರದ ಲೇಪವಿದೆ.





Photo by Suraj N. Sha




ಬಹುಮಾನ
ಪಡೆದ ಶೀರ್ಷಿಕೆ

ಕಿರಿಯರೇನೋ ಕೆಲಸ ಮಾಡ್ತಿದಾರೆ

ಕಳುಹಿಸಿದವ
ಪ. ರಾಮಕೃಷ್ಣ

Photo by Suraj N. Sharma



[illegible], ನಿಲಯ, ಮಚ್ಚಿನ,
[illegible]ಡಂತ್ಯಾರ್, ದ. ಕ.

ಹಿರಿಯರು ಹುಡುಗಾಟವಾಡ್ತಿದಾರೆ

ಬಹುಮಾನ
ಪಡೆದ ಶೀರ್ಷಿಕೆ

ಫೋಟೋ ಶೀರ್ಷಿಕೆಯ ಸ್ಪರ್ಧೆ :: ಬಹುಮಾನ ರೂ. ೨೦







★ ಮೇಲಿನ ಫೋಟೋಗಳಿಗೆ ಶೀರ್ಷಿಕೆಗಳು ಮಾರ್ಚಿ ೧೫ ರೊಳಗೆ ತಲಪಬೇಕು.

★ ಶೀರ್ಷಿಕೆಗಳು ಒಂದಕ್ಕೊಂದು ಸರಿಹೊಂದುವಂತಿರಬೇಕು. ಗೆದ್ದ ಶೀರ್ಷಿಕೆಗಳು ಮೇ '೭೦ ರ ಸಂಚಿಕೆಯಲ್ಲಿ ಪ್ರಕಟವಾಗುತ್ತದೆ.

ಚಂದಮಾಮ


ಈ ಸಂಚಿಕೆಯಲ್ಲಿರುವ ಕಥೆಗಳು:


ಎರಡನೇ ಹೊದಿಕೆಯ ಚಿತ್ರ:
ರಷ್ಯನ್ ಸರ್ಕಸ್-೧

ಮೂರನೇ ಹೊದಿಕೆಯ ಚಿತ್ರ:
ರಷ್ಯನ್ ಸರ್ಕಸ್-೨

Printed by B. V. REDDI at The Prasad Process Private Ltd., and Published by B. VISWANATHA REDDI for Chandamama Publications, 2 & 3, Arcot Road, Madras-26. Controlling Editor: 'CHAKRAPANI'

ಬ್ಯಾಬಿ
ಕಾಡುಜನರ ಮಧ್ಯದಲ್ಲಿ






















1999



CHANDAMAMA (Kannada) MAR. 1972 92 Paise Including Excise Duty Regd. No. M



ಶಿವಪುರಾಣ